ದುಡಿಯುವ ಜನರ ಪ್ರಾಣ ಮಿತ್ರ

# ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 28 | ಪುಟ 16 | ಜುಲೈ 10, 2016 | ರೂ. 10/-

web: www.janashakthi.co.in e-mail : js_weekly@yahoo.com



## ರೈತರ ರಕ್ಷಣೆಯಿಂದಲೇ
## ಕೃಷಿಯ ರಕ್ಷಣೆ
## ದೇಶದ ರಕ್ಷಣೆ

AIKS
ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸಭೆ
1-3 ಜುಲೈ 2016
ಬೆಂಗಳೂರು

- ಬಡ ರೈತರ ಶ್ರಮದ ಲಾಭ ವಿದೇಶಿ ಕಂಪನಿಗಳಿಗೇಕೆ?
- 'ಅಚ್ಛೇ ದಿನ್'ಗಳಲ್ಲಿ ರೈತರಿಗೆ ಬೆಂಬಲ ಸಾಧ್ಯ ಇಲ್ಲ !
- ಭೂ ಸಂತ್ರಸ್ತರ ಬಗ್ಗೆ ಕಾಂಗ್ರೆಸ್ಸಿನದ್ದು ಹುಸಿ ಕಾಳಜಿ!



## ವೃತ್ತಿ ಶಿಕ್ಷಣದ ಮಾರಾಟಗಾರರಿಗೆ ಭಕ್ಷೀಸು



## ಮಹಾರಾಜರ ಮದುವೆಯೆಂಬ ಪಾಳೆಗಾರಿ ಪ್ರದರ್ಶನ



ಸೆಪ್ಟೆಂಬರ್ 2 ಸಾರ್ವತ್ರಿಕ ಮುಷ್ಕರದತ್ತ...

## 2 ಕೋಟಿ ಉದ್ಯೋಗಗಳ ಭರವಸೆ ಏನಾಯ್ತು?

## ಎಫ್‌ಡಿಐಗೆ ಸಂಪೂರ್ಣ ಅವಕಾಶದ ವಿರುದ್ಧ ಎಡಪಕ್ಷಗಳ ಧರಣಿ




## ಈ ಸರಕಾರ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಬದ್ಧವಾಗಿದೆಯೇ ಹೊರತು ಈ ರಾಷ್ಟ್ರದ ಜನತೆಗಲ್ಲ–ಬೃಂದಾ ಕಾರಟ್

ರಕ್ಷಣಾ ವಲಯ, ಚಿಲ್ಲರೆ ಆಹಾರ ವ್ಯಾಪಾರ, ನಾಗರಿಕ ವಿಮಾನಯಾನ, ಕೇಬಲ್ ನೆಟ್‌ವರ್ಕ್, ಡಿಟಿಹೆಚ್ ಮತ್ತಿತರ ಟೆಲಿಕಾಂ ಸೇವೆಗಳಲ್ಲಿ ಎಫ್‌ಡಿಐಗೆ ಸಂಪೂರ್ಣ 100ಶೇ. ಪ್ರವೇಶಕ್ಕೆ ಅವಕಾಶ ನೀಡಿರುವ ಮೋದಿ ಸರಕಾರದ ನಿರ್ಧಾರದ ವಿರುದ್ಧ ದೇಶದ ರಾಜಧಾನಿಯಲ್ಲಿ ಎಡಪಕ್ಷಗಳು ಬಲವಾದ ಪ್ರತಿಭಟನೆಯನ್ನು ಮಾಡಿವೆ.

ಈ ವಲಯಗಳಲ್ಲದೆ ದೇಶದ ಔಷಧಿ ಕಂಪನಿಗಳನ್ನು ವಿದೇಶೀಯರು ವಹಿಸಿಕೊಳ್ಳಲು ಅನುಕೂಲವಾಗುವಂತೆ ಯಾವುದೇ ಪ್ರತ್ಯೇಕ ಅನುಮತಿಯಿಲ್ಲದೆ 74ಶೇ. ಎಫ್‌ಡಿಐಗೂ ಅವಕಾಶ ಕಲ್ಪಿಸಲಾಗಿದೆ. ಖಾಸಗಿ ಸೆಕ್ಯುರಿಟಿ ಕಂಪನಿಗಳಲ್ಲೂ ವಿದೇಶಿ ನೇರ ಹೂಡಿಕೆಗಳನ್ನು 49ಶೇ.ದಿಂದ 74ಶೇ.ಕ್ಕೆ ಏರಿಸಲಾಗಿದೆ. ಏಕಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಸ್ಥಳೀಯವಾಗಿ ಸಾಮಗ್ರಿಗಳನ್ನು ಪಡೆಯಬೇಕೆಂಬ ಅಂಶವನ್ನು ಸಡಿಲಗೊಳಿಸಲಾಗಿದೆ.

ಕೇಂದ್ರ ಸರಕಾರದ ಈ ಕ್ರಮಗಳು ದುಡಿಯುವ ಜನಗಳು ಮತ್ತು ಬಡವರ ಮೇಲೆ ಅಪಾರ ಸಂಕಟಗಳನ್ನು ಹೇರುತ್ತವೆ ಎಂದು ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್ ಖಂಡಿಸಿದರು. ಈ ಸರಕಾರ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಬದ್ಧವಾಗಿದೆಯೇ ಹೊರತು ಈ ರಾಷ್ಟ್ರದ ಜನತೆಗಲ್ಲ ಎಂದು ಅವರು ಬಲವಾಗಿ ಟೀಕಿಸಿದರು. ಕೇಂದ್ರ ಸರಕಾರದ ಈ ಅನಾಹುತಕಾರಿ ನಿರ್ಣಯದ ವಿರುದ್ಧ ದಿಲ್ಲಿಯ ಎಎಪಿ ಸರಕಾರ ಇದುವರೆಗೆ ಯಾವುದೇ ನಿಲುವನ್ನು ತಳೆಯದಿರುವುದನ್ನೂ ಅವರು ಟೀಕಿಸಿದರು.

ಧರಣಿಯನ್ನು ಉದ್ದೇಶಿಸಿ ಸಿಪಿಐನ ಅಮರ್‌ಜಿತ್ ಕೌರ್ ಮತ್ತು ದಿನೇಶ್ ವಾರ್ಷ್ಣೇಯ, ಎಸ್‌ಯುಸಿಐ(ಸಿ)ಯ ರಮೇಶ ಶರ್ಮ ಮತ್ತು ಪ್ರತಾಪ್ ಸಮಲ್, ಸಿಜಿಪಿಐನ ಬಿರ್ಜು ನಾಯಕ್ ಮಾತನಾಡಿದರು.

## ಬಿಜೆಪಿ ಸರಕಾರ ಸಾರ್ವಜನಿಕ ವಲಯವನ್ನು ಮುಚ್ಚುತ್ತಿದ್ದರೆ ಎಲ್‌ಡಿಎಫ್ ಸರಕಾರ ಅದನ್ನು ತೆರೆಯುತ್ತಿದೆ

ಇನ್ಸ್‌ಟ್ರುಮೆಂಟೇಶನ್ ಲಿಮಿಟೆಡ್ ಎಂಬ ಸಾರ್ವಜನಿಕ ವಲಯದ ಉದ್ದಿಮೆ ಉತ್ಪಾದನಾ ಉದ್ದಿಮೆಗಳಿಗೆ ಬೇಕಾದ ಹತೋಟಿ ಸಾಧನಗಳನ್ನು, ಉಪಕರಣಗಳನ್ನು ತಯಾರಿಸುವ ಕಂಪನಿ. 1964ರಲ್ಲಿ ಕೇಂದ್ರ ಸರಕಾರದ ಭಾರೀ ಉದ್ದಿಮೆಗಳ ಇಲಾಖೆಯ ಅಡಿಯಲ್ಲಿ ಆರಂಭಿಸಲ್ಪಟ್ಟ ಒಂದು ಮಹತ್ವದ ಉದ್ದಿಮೆ. ಕೋಟಾದ ರಾಜಸ್ತಾನದಲ್ಲಿ ಸ್ಥಾಪನೆಗೊಂಡ ಈ ಕಂಪನಿ ಈಗ ನಷ್ಟ ಅನುಭವಿಸುತ್ತಿದೆ ಎಂದು ಅದನ್ನು ಮುಚ್ಚಲು ಮೋದಿ ಸರಕಾರ ಯೋಚಿಸುತ್ತಿದೆ.

1974ರಲ್ಲಿ ಇದರ ಇನ್ನೊಂದು ಘಟಕ ಕೇರಳದ ಪಾಲಕ್ಕಾಡ್‌ನಲ್ಲಿ ಆರಂಭವಾಯಿತು. ಅದೇನೂ ನಷ್ಟದಲ್ಲಿಲ್ಲ. ಆದರೂ ಮುಖ್ಯ ಘಟಕದೊಂದಿಗೆ ಇದನ್ನೂ ಮುಚ್ಚುವ ಯೋಚನೆ ಕೇಂದ್ರ ಸರಕಾರದ್ದು. 'ಮೇಕ್ ಇನ್ ಇಂಡಿಯಾ' ಎಂಬ ಘೋಷಣೆ ಕೊಟ್ಟಿರುವ ಕೇಂದ್ರ ಸರಕಾರ ಕೋಟಾದ ಘಟಕವನ್ನು ಸಮರ್ಥಗೊಳಿಸುವ ಯೋಚನೆಯ ಬದಲು ರಾಜಸ್ತಾನ ಹಾಗೂ ಕೇರಳ ಸರಕಾರಗಳನ್ನು ತಂತಮ್ಮ ಪ್ರದೇಶಗಳಲ್ಲಿರುವ ಘಟಕಗಳನ್ನು ವಹಿಸುವಂತೆ ಕೇಳಿತು. ರಾಜಸ್ತಾನದ ಬಿಜೆಪಿ ಸರಕಾರ ನಿರಾಕರಿಸಿತು, ಕೇರಳದಲ್ಲಿ ಆಗ ಅಧಿಕಾರದಲ್ಲಿದ್ದ ಯುಡಿಎಫ್ ಸರಕಾರ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಂಡಿರಲಿಲ್ಲ.


ಆದರೆ ಈಗ ಕೇರಳದಲ್ಲಿ ಅಧಿಕಾರಕ್ಕೆ ಬಂದಿರುವ ಎಲ್‌ಡಿಎಫ್ ಸರಕಾರ ಪಾಲಕ್ಕಡ್ ಘಟಕವನ್ನು ಮುಚ್ಚಬೇಡಿ, ಅದು ಈ ರಂಗದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೂ ಸ್ಪರ್ಧೆ ನೀಡುವ ಸಾಮರ್ಥ್ಯ ಹೊಂದಿದೆ, ಅದನ್ನು ನಮಗೆ ಕೊಡಿ ನಾವು ನಡೆಸುತ್ತೇವೆ ಎಂದಿದೆ. ಇದಕ್ಕಾಗಿ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಉನ್ನತ ಅಧಿಕಾರದ ಸಮಿತಿಯನ್ನು ರಚಿಸಲಾಗಿದೆ. ಇದು ಕೇಂದ್ರ ಸರಕಾರದೊಂದಿಗೆ ಈ ಘಟಕವನ್ನು ರಾಜ್ಯ ಸರಕಾರಕ್ಕೆ ವಹಿಸಿಕೊಡುವ ಬಗ್ಗೆ ಮಾತುಕತೆ ಆರಂಭಿಸಿದೆ. ಕೇಂದ್ರ ಸರಕಾರ ಈಗ ತತ್ವಶಃ ಇದನ್ನು ಒಪ್ಪಿದೆ ಎನ್ನಲಾಗಿದೆ.

ಅತ್ತ ಕೋಟಾ ಘಟಕದ ಕಾರ್ಮಿಕರು ಅದನ್ನು ಮುಚ್ಚದಂತೆ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದಾರೆ.

ಸಾರ್ವಜನಿಕ ವಲಯದ ಘಟಕಗಳನ್ನು ಉಳಿಸಿಕೊಳ್ಳುವುದು ಕಾಂಗ್ರೆಸಿಗೂ ಬೇಕಿಲ್ಲ, ಬಿಜೆಪಿಗೂ ಬೇಕಿಲ್ಲ ತಾನೇ?

aÀiÁvÉAzÀgÉEzÀÄ

### ರೈತನ ದೃಷ್ಟಿ



ನೇಗಿಲಿನ ಮೇಲಾಣೆ!
ಬಸವಗಳ ಮೇಲಾಣೆ!
ನೆತ್ತರಿಲ್ಲದೆ ಸುಕ್ಕಿ
ಸೊರಗಿದೆನ್ನಾಣೆ!
ಸಾಮ್ರಾಜ್ಯ ಶೂರ್ಪನಖಿ ಮೋಹಿನಿಯ ರೂಪಕ್ಕೆ
ಮರುಳಾಗೆನೆಂದಿಗೂ, ಸೀತೆ ಮೇಲಾಣೆ!
ಬಡತನದ ಗೊಬ್ಬರವನನುದಿನಂ ಹೀರಿ
ಹಿಡಿಸದೋ ಸಾಮ್ರಾಜ್ಯ ಸಿರಿಯ ಕಸ್ತೂರಿ!

–ಕುವೆಂಪು

## ಎನ್‌ಎಸ್‌ಜಿ ಸದಸ್ಯತ್ವದ ಬೇಟೆಯಲ್ಲಿ ಸೋಲು ಅನಗತ್ಯ ಶ್ರಮ, ದೊಡ್ಡ ರಾಜತಾಂತ್ರಿಕ ಹಿನ್ನಡೆ

–ಪ್ರಕಾಶ ಕಾರಟ್

ನರೇಂದ್ರ ಮೋದಿ ಸರಕಾರ 'ಪರಮಾಣು ಪೂರೈಕೆದಾರರ ಗುಂಪು'(ಎನ್‌ಎಸ್‌ಜಿ) ಸೇರಲು ಪಡುತ್ತಿರುವ ಪಾಡು ಸಂಪೂರ್ಣವಾಗಿ ಅನಗತ್ಯವಾಗಿತ್ತು, ಅದೊಂದು ದೊಡ್ಡ ರಾಜತಾಂತ್ರಿಕ ಹಿನ್ನಡೆ ಎಂದು ಸಿಪಿಐ(ಎಂ)ನ ಹಿರಿಯ ಮುಖಂಡ ಪ್ರಕಾಶ ಕಾರಟ್ ವಿಶ್ಲೇಷಿಸಿದ್ದಾರೆ.

ಎನ್‌ಎಸ್‌ಜಿ ಸದಸ್ಯತ್ವ ಪಡೆಯಲು ಮೋದಿ ಸರಕಾರ ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ. ಎನ್‌ಎಸ್‌ಜಿ ಸದಸ್ಯತ್ವದ ಅರ್ಜಿಗೆ ಬೆಂಬಲ ಗಳಿಸಲು ಸ್ವತಃ ಪ್ರಧಾನ ಮಂತ್ರಿಗಳು ಮೆಕ್ಸಿಕೊ ಮತ್ತು ಸ್ವಿಝರ್ಲೆಂಡ್‌ಗೆ ಭೇಟಿ ನೀಡಿದರು. ಆದರೂ ದಕ್ಷಿಣ ಕೊರಿಯಾದ ರಾಜಧಾನಿ ಸ್ಯೋಲ್‌ನಲ್ಲಿ ನಡೆದ ಎನ್‌ಎಸ್‌ಜಿಯ ಪ್ಲಿನರಿ ಸಭೆ ಭಾರತದ ಅರ್ಜಿಯನ್ನು ಈ ಹಂತದಲ್ಲಿ ಕೈಗೆತ್ತಿಕೊಳ್ಳಲು ಒಪ್ಪಲಿಲ್ಲ. ಅದರಲ್ಲಿ ಆಶ್ಚರ್ಯವೇನಿಲ್ಲ ಎಂದು ಪ್ರಕಾಶ ಕಾರಟ್ ಹೇಳುತ್ತಾರೆ.

2008ರಲ್ಲಿ ಭಾರತ–ಅಮೆರಿಕ ನಾಗರಿಕ ಪರಮಾಣು ವ್ಯವಹಾರಕ್ಕೆ ಸಹಿ ಹಾಕಿದ ನಂತರ ಮನಮೋಹನ ಸಿಂಗ್ ಸರಕಾರ ಅಮೆರಿಕಾದ ಮೂಲಕ ಎನ್‌ಎಸ್‌ಜಿಯಿಂದ ಹೇಗೋ ವಿನಾಯ್ತಿ ಗಳಿಸಿಕೊಂಡಿತು. ಇದರಿಂದಾಗಿ ಭಾರತ ಪ್ರಮಾಣ ಪ್ರಸರಣ ನಿಷೇಧ ಸಂಧಿ(ಎನ್‌ಪಿಟಿ)ಗೆ ಸಹಿ ಹಾಕದಿದ್ದರೂ ಪರಮಾಣು ತಂತ್ರಜ್ಞಾನ ಪಡೆಯುವಲ್ಲಿ ವಿನಾಯ್ತಿ ಪಡೆಯಿತು.

ಆದರೆ ಸ್ಯೋಲ್ ಸಭೆಯಲ್ಲಿ ಎನ್‌ಪಿಟಿಗೆ ಸಹಿ ಹಾಕದ ದೇಶಗಳನ್ನು ಸದಸ್ಯರಾಗಿ ಸೇರಿಸಕೊಳ್ಳಬಹುದೇ ಎಂಬಬಗ್ಗೆ ಚರ್ಚಿಸಬೇಕಾಗಿದೆ ಎಂದು ಅಭಿಪ್ರಾಯ ಪಡಲಾಯಿತು.

ಪ್ರಧಾನ ಮಂತ್ರಿಗಳು ಮತ್ತು ಅವರ ನಿಕಟ ಸಲಹೆಗಾರರ ಲೆಕ್ಕಾಚಾರ ತಪ್ಪಾಗಿತ್ತು. ಈಗ ನಾವು ಸಂಪೂರ್ಣವಾಗಿ ಅಮೆರಿಕಾದ ಆಯಕಟ್ಟಿನ ಮಿತ್ರರಾಗಿದ್ದೇವೆ, ಇದರಿಂದಾಗಿ ಭಿನ್ನಾಭಿಪ್ರಾಯವಿದ್ದ ದೇಶಗಳ ವಿರೋಧವನ್ನು ಮೀರಬಹುದು ಎಂಬ ಕಲ್ಪನೆ ಮೋದಿ ಸರಕಾರಕ್ಕೆ ಇದ್ದಂತಿತ್ತು. ಚೀನಾವನ್ನು ಏಕಾಂಗಿಯಾಗಿಸಿ, ನಂತರ ಅದು ಭಾರತದ ನಿಲುವನ್ನು ಒಪ್ಪುವಂತೆ ಒತ್ತಡ ಹಾಕಬಹುದು ಎಂಬ ದೋಷಪೂರಿತ ಕಾರ್ಯಕತಂತ್ರವನ್ನು ಅದು ಅನುಸರಿಸಿತು. ಇದು ಸಂಪೂರ್ಣ ವಿಫಲವಾಗಿದೆ ಎಂದು ಪ್ರಕಾಶ ಕಾರಟ್ ಹೇಳುತ್ತಾರೆ.

ಭಾರತ ಕಳೆದೆರಡು ವರ್ಷಗಳಲ್ಲಿ ಚೀನಾವನ್ನು ತಡೆದಿಡುವ ಅಮೆರಿಕಾದ ರಣತಂತ್ರದೊಂದಿಗೆ ಭಾರತ ಬಹಿರಂಗವಾಗಿಯೇ ಕೈಜೋಡಿಸಿತು. ಅಧ್ಯಕ್ಷ ಒಬಾಮರೊಂದಿಗೆ ಜಂಟಿ ಕಣ್ನೋಟ ಹೇಳಿಕೆ, ಜಪಾನ್, ಅಮೆರಿಕಾದೊಂದಿಗೆ ಭಾರತದ ತ್ರಿಪಕ್ಷೀಯ ಸಭೆ ಮತ್ತು ಇತ್ತೀಚೆಗೆ ಪೂರ್ವ ಚೀನಾ ಸಮುದ್ರದಲ್ಲಿ ಅಮೆರಿಕಾ ಮತ್ತು ಜಪಾನ್‌ನೊಂದಿಗೆ ಜಂಟಿ ನೌಕಾ ಸಮರಾಭ್ಯಾಸ ಇವೆಲ್ಲ ಚೀನಾದತ್ತ ವೈಷಮ್ಯ ತೋರಿದ ಕ್ರಮಗಳು.


ಇಷ್ಟೆಲ್ಲ ಮಾಡಿದ ಮೇಲೂ ಚೀನಾ ಭಾರತದ ಆಸೆಯನ್ನು ಪೂರೈಸಬೇಕು ಎನ್ನುವುದು ಭಂಡತನ ಮತ್ತು ಹುಂಬತನ ಎಂದು ಭಾವಿಸಬೇಕಾಗುತ್ತದೆ ಎನ್ನುವ ಪ್ರಕಾಶ ಕಾರಟ್ ಎನ್‌ಎಸ್‌ಜಿಗೆ ಪ್ರವೇಶವನ್ನು ಕೇವಲ ಚೀನಾ ವಿರೋಧಿಸುತ್ತಿರುವುದು ಎಂದು ಸರಕಾರ ಹೇಳುತಿರುವುದು ಸರಿಯಲ್ಲ ಎನ್ನುತ್ತಾರೆ.

ಒಟ್ಟು 48 ದೇಶಗಳಲ್ಲಿ ಚೀನಾವೂ ಸೇರಿದಂತೆ 10 ದೇಶಗಳು ಭಾರತ ಎನ್‌ಎಸ್‌ಜಿ ಪ್ರವೇಶಿಸುವುದಕ್ಕೆ ಪರವಾಗಿರಲಿಲ್ಲ ಎಂಬ ಸಂಗತಿಯತ್ತ ಅವರು ಗಮನ ಸೆಳೆದಿದ್ದಾರೆ. ಇವುಗಳಲ್ಲಿ ಬ್ರಿಕ್ಸ್ ಸಮೂಹದಲ್ಲಿ ಭಾರತದೊಡನಿರುವ ಬ್ರೆಝಿಲ್ ಮತ್ತು ದಕ್ಷಿಣ ಆಫ್ರಿಕಾ ಕೂಡಾ ಇವೆ ಎಂಬುದು ಗಮನಾರ್ಹ. ಪ್ರಧಾನಿಗಳ ಭೇಟಿ ಕಾಲದಲ್ಲಿ ಬೆಂಬಲದ ಮಾತಾಡಿದ ಸ್ವಿಝರ್ಲೆಂಡ್ ಕೂಡಾ ಇತ್ತು.

ಅಲ್ಲದೆ ಎನ್‌ಎಸ್‌ಜಿ ಸದಸ್ಯತ್ವ ಪಡೆಯುವುದರಿಂದ ಭಾರತಕ್ಕೆ ಪ್ರಯೋಜನವೇನೂ ಇಲ್ಲ. ಎನ್‌ಎಸ್‌ಜಿಯನ್ನು ಅಮೆರಿಕಾದ ಮುತುವರ್ಜಿಯಿಂದಲೇ ರಚಿಸಿದ್ದು, ಅದೂ ಭಾರತ 1974ರಲ್ಲಿ ಪೋಖ್ರಾನ್‌ನಲ್ಲಿ ಪರಮಾಣ ಪರೀಕ್ಷಣೆ ಮಾಡಿದಾಗ ಎಂದು ಕಾರಟ್ ನೆನಪಿಸಿದ್ದಾರೆ. ಭಾರತದಂತಹ ಎನ್‌ಪಿಟಿ ದೇಶಗಳ ಮೇಲೆ ನಿರ್ಬಂಧ ಹೇರಲಿಕ್ಕಾಗಿಯೇ ಇದನ್ನು ರಚಿಸಲಾಗಿತ್ತು. 2008ರಲ್ಲಿ ಭಾರತ–ಅಮೆರಿಕಾ ಪರಮಾಣು ಒಪ್ಪಂದದ ನಂತರ ಭಾರತಕ್ಕೆ ಅಮೆರಿಕಾ ಕೊಟ್ಟಿದ್ದ ಭರವಸೆ ಕೂಡ ನಂತರ ಎನ್‌ಎಸ್‌ಜಿ ಎನ್‌ಪಿಟಿಗೆ ಸಹಿ ಹಾಕದ ದೇಶಗಳ ಮೇಲೆ ಹಾಕಿದ ಹೊಸ ಮಾರ್ಗದರ್ಶಕ ಸೂತ್ರಗಳಿಂದಾಗಿ ನಿಷ್ಪ್ರಯೋಜಕವಾಯಿತು. ಈಗ ಭಾರತಕ್ಕೆ ಎನ್‌ಎಸ್‌ಜಿ ಸದಸ್ಯತ್ವ ಸಿಕ್ಕರೂ ಎನ್‌ಪಿಟಿಗೆ ಸಹಿ ಹಾಕದ್ದರಿಂದ ಈ ಗುಂಪಿನಲ್ಲಿ ಅದು ಎರಡನೇ ದರ್ಜೆಯ ಸದಸ್ಯನಾಗಿಯೇ ಇರಬೇಕಾಗುತ್ತದೆ ಎಂಬ ಸಂಗತಿಯತ್ತವೂ ಪ್ರಕಾಶ ಕಾರಟ್ ಗಮನ ಸೆಳೆದಿದ್ದಾರೆ.

ಎನ್‌ಎಸ್‌ಜಿ ಸದಸ್ಯತ್ವ ಪಡೆಯುವಲ್ಲಿ ಈ ಸರಕಾರ ಪಟ್ಟಿರುವ ಪಾಡು, ಪ್ರದರ್ಶಿಸಿರುವ ವರ್ತನೆ ಭಾರತವನ್ನು ಅಮೆರಿಕಾದ ಬಾಲಂಗೋಚಿಯಾಗಿ ಮಾಡಿರುವ ಮೋದಿ ಸರಕಾರದ ವಿದೇಶಾಂಗ ಧೋರಣೆ ಎಷ್ಟು ಸಂಕುಚಿತಗೊಂಡಿದೆ, ವಿರೂಪಗೊಂಡಿದೆ ಎಂಬುದನ್ನು ತೋರಿಸುತ್ತದೆ ಎಂದು ಪ್ರಕಾಶ ಕಾರಟ್ ಟೀಕಿಸಿದ್ದಾರೆ. ಇದರಿಂದ ಭಾರತ ಬಹಳ ಮಹತ್ವ ಗಳಿಸಿದೆ ಎಂಬ ಭ್ರಮೆಯನ್ನು ಮೋದಿ ಸರಕಾರ ಬೆಳೆಸಿಕೊಂಡಿದೆ ಎಂದಿರುವ ಅವರು ಈ ಸೋಲಿಗೆ ಸ್ವತಃ ನರೇಂದ್ರ ಮೋದಿಯವರು ಮಾತ್ರವಲ್ಲ, ವಿದೇಶಾಂಗ ಧೋರಣೆ ಮತ್ತು ರಾಷ್ಟ್ರೀಯ ಭದ್ರತಾ ವ್ಯವಸ್ಥೆಯಲ್ಲಿರುವ ಅಮೆರಿಕಾ–ಪರ ಮಂದಿಗಳೂ ಹೊಣೆಗಾರರು ಎನ್ನುತ್ತಾರೆ.

ಇದು ಇತ್ತೀಚಿನ ದಿನಗಳಲ್ಲಿ ಭಾರತಕ್ಕೆ ಅತಿ ದೊಡ್ಡ ರಾಜತಾಂತ್ರಿಕ ಪರಾಭವ ಎಂದಿರುವ ಪ್ರಕಾಶ ಕಾರಟ್ ಮೋದಿ ಸರಕಾರ ಹೆಚ್ಚು ತಾರ್ಕಿಕವಾದ ವಿದೇಶಾಂಗ ಧೋರಣೆ ಹೊಂದಬೇಕು ಎಂಬುದು ನಮ್ಮ ಆಶಯ ಎಂದು ತಿರುವನಂತಪುರದಲ್ಲಿ ಒಂದು ಪತ್ರಿಕಾ ಸಮ್ಮೇಳನದಲ್ಲಿ ತಿಳಸಿದರು, ಅಮೆರಿಕಾದ ಜತೆ ನಿಂತು ಚೀನಾವನ್ನು ತಡೆದಿಡುವ ಅವರ ಕಾರ್ಯತಂತ್ರದಲ್ಲಿ ಶಾಮೀಲಾಗುವುದರಿಂದ ನಮ್ಮ ದೇಶದ ಸ್ವತಂತ್ರ ವಿದೇಶಾಂಗ ನೀತಿಗೆ ಏನೂ ನೆರವು ಸಿಗುವುದಿಲ್ಲ ಎಂದು ಅವರು ಎಚ್ಚರಿಸಿದರು.



# ರೈತರ ರಕ್ಷಣೆ ಇಲ್ಲದೆ, ಕೃಷಿಯ ರಕ್ಷಣೆ ಅಸಾಧ್ಯ –ಕೃಷಿಯ ರಕ್ಷಣೆ ಇಲ್ಲದೆ ದೇಶದ ರಕ್ಷಣೆ ಅಸಾಧ್ಯ

ದೇಶದ ಆರ್ಥಿಕದಲ್ಲಿ ಕೃಷಿ ವಲಯ 2015–16ರಲ್ಲಿ 1.2ಶೇ. ಬೆಳವಣಿಗೆ ದಾಖಲಿಸಿದೆ ಎಂದು ಅಧಿಕೃತವಾಗಿ ಹೇಳಲಾಗಿದೆ. ಇನ್ನು ಕೆಲವು ಅಂಕಿ–ಅಂಶಗಳು 2.3ಶೇ. ಬೆಳವಣಿಗೆಯಾಗಿದೆ ಎಂದೂ ಸೂಚಿಸುತ್ತವೆ. ಆದರೆ 2015–16ರಲ್ಲಿ ಆಹಾರಧಾನ್ಯಗಳ ಉತ್ಪಾದನೆಯಲ್ಲಿ 5ಶೇ. ಇಳಿಕೆಯಾಗಿದೆ ಎಂದೂ ಹೇಳಲಾಗಿದೆ. ಕೃಷಿಯಲ್ಲಿ ಲಾಭದ ದರ 10ಶೇ.ಕ್ಕೆ ಇಳಿದಿದೆ, ಕೆಲವು ಬೆಳೆಗಳಲ್ಲಂತೂ ನಷ್ಟವೇ ಆಗುತ್ತಿದೆ ಎಂದೂ ದಾಖಲಾಗಿದೆ.

ಅತ್ತ ರೈತರ ಆತ್ಮಹತ್ಯೆಗಳ ಸಂಖ್ಯೆ ಏರುತ್ತಲೇ ಇವೆ. ಸರಕಾರ ಕರ್ಷಕ ಬಿಕ್ಕಟ್ಟಿನ ನಿಜವಾದ ಮುಖವನ್ನು ಮರೆಮಾಚಲು ಹತಾಶೆಯಿಂದ ಆತ್ಮಹತ್ಯೆಯ ನಿರ್ವಚನೆಯನ್ನು ಬದಲಿಸಿದರೂ ಈ ಸಂಖ್ಯೆಯನ್ನು ಇಳಿಸಲಾಗಿಲ್ಲ. 2015ರಲ್ಲಿ ಈ ಬದಲಾದ ನಿರ್ವಚನೆಯ ಪ್ರಕಾರವೂ ಸುಮಾರು 3000 ರೈತರ ಆತ್ಮಹತ್ಯೆಗಳೆಂದು ದಾಖಲಾಗಿವೆ.

ಇನ್ನೊಂದು ಕಡೆ, ಈ ವರ್ಷ, ಅಂದರೆ 2016–17ರಲ್ಲಿ ಬಿತ್ತನೆಯಾದ ಪ್ರದೇಶದ ಪ್ರಮಾಣ 71.21 ಲಕ್ಷ ಹೆಕ್ಟೇರುಗಳಿಗೆ ಇಳಿದಿದೆ. ಕಳೆದ ವರ್ಷ ಇದು 76.65 ಲಕ್ಷ ಹೆಕ್ಟೇರ್. ಮುಖ್ಯವಾಗಿ, ಭತ್ತ ಬೆಳೆಯುವ ಪ್ರದೇಶ 6.42 ಲಕ್ಷ ಹೆಕ್ಟೇರಿನಿಂದ 5.75 ಲಕ್ಷ ಹೆಕ್ಟೇರುಗಳಿಗೆ ಇಳಿದಿದೆ., ಬೇಳೆಕಾಳುಗಳಿಗೆ ಸಂಬಂಧಪಟ್ಟಂತೆ ಇದು 2.35ಲಕ್ಷದಿಂದ 1.46ಲಕ್ಷಕ್ಕೆ ಇಳಿದಿದೆ ಎಂದು ವರದಿಯಾಗಿದೆ. ಅಂದರೆ ಗ್ರಾಮೀಣ ನಿರುದ್ಯೋಗ ಹೆಚ್ಚುತ್ತಿದೆ. ಗ್ರಾಮೀಣ ನಿಜಕೂಲಿದರಗಳು ಈ ದಶಕದಲ್ಲಿಯೇ ಅತೀ ಕೆಳಗಿನ ಮಟ್ಟಕ್ಕೆ ಇಳಿದಿವೆ.

13 ರಾಜ್ಯಗಳಲ್ಲಿ 54 ಕೋಟಿ ಜನ ಬರಕ್ಕೆ ತುತ್ತಾಗಿರುವುದು ಗ್ರಾಮೀಣ ಪ್ರದೇಶಗಳಲ್ಲಿನ ಶೋಚನೀಯ ಸ್ಥಿತಿಯನ್ನು, ಮತ್ತು ಆಳುವ ಸರಕಾರಗಳ ರೈತ–ವಿರೋಧಿ ಧೋರಣೆಗಳನ್ನು ಎಲ್ಲ ಪ್ರಜಾಪ್ರಭುತ್ವವಾದಿಗಳ ಎದುರಿಗೆ ತಂದು ನಿಲ್ಲಿಸಿದೆ. ಕೃಷಿಯ, ಗ್ರಾಮೀಣ ಬದುಕಿನ ಹತಾಶೆ ಆಳಗೊಳ್ಳುತ್ತಿದೆ, ಸಂಕಟ ಹರಡುತ್ತಿದೆ ಎಂಬುದು ಸ್ಪಷ್ಟ.

ಆದರೆ ಇವೆಲ್ಲದರ ಪರಿವೆಯೇ ಇಲ್ಲದೆ ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರಕಾರ ಮತ್ತು ರಾಜ್ಯದಲ್ಲಿನ ಕಾಂಗ್ರೆಸ್ ಸರಕಾರ ಕೃಷಿಯನ್ನು ದೇಶಿ–ವಿದೇಶಿ ಬಂಡವಾಳಿಗರಿಗೆ ಒಪ್ಪಿಸುವ ಧೋರಣೆಗಳನ್ನು ಮುಂದುವರೆಸುತ್ತಲೇ ಇವೆ.

ಇಂತಹ ಸನ್ನಿವೇಶದಲ್ಲಿ ರೈತರನ್ನು ಒಗ್ಗೂಡಿಸಿ ದೇಶದ ಎಲ್ಲ ರೈತ ಸಂಘಟನೆಗಳು ವಿಷಯಾಧಾರಿತವಾಗಿ ದೇಶದಾದ್ಯಂತ ಪ್ರಬಲ ಚಳುವಳಿಗಳನ್ನು ನಡೆಸಲು ಮುಂದಾಗಿವೆ. ಜುಲೈ 1ರಿಂದ 3ರ ವರೆಗೆ ಬೆಂಗಳೂರಿನಲ್ಲಿ ನಡೆಯುತ್ತಿರುವ ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸಭೆ ಈ ಎಲ್ಲ ಪ್ರಶ್ನೆಗಳನ್ನು ಗಂಭೀರವಾಗಿ ಚರ್ಚಿಸಿ ಮುಂದಿನ ಹೋರಾಟದ ರೂಪುರೇಷೆಗಳನ್ನು ರೂಪಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಈ ಸಂದರ್ಭದಲ್ಲಿ ಕೃಷಿರಂಗದ ವಿವಿಧ ಪ್ರಶ್ನೆಗಳನ್ನು ಪರಿಶೀಲಿಸುವ ಉದ್ದೇಶದಿಂದ 'ಜನಶಕ್ತಿ' ಒಂದು ವಿಶೇಷ ಪುರವಣಿಯೊಂದಿಗೆ ಈ ಸಂಚಿಕೆಯನ್ನು ನಿಮ್ಮ ಮುಂದಿಡುತ್ತಿದೆ.

ಕೃಷಿಯಲ್ಲಿ ವಿದೇಶಿ ಬಂಡವಾಳದ ಪ್ರಭಾವ ಹೇಗೆ ಅದನ್ನು ನಷ್ಟದಾಯಕಗೊಳಿಸಿದೆ ಎಂಬ ಅಂಶವನ್ನು ತಮ್ಮ ಲೇಖನದಲ್ಲಿ ಪರಿಶೀಲಿಸಿರುವ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆಯವರು ರೈತಕೃಷಿಗೆ ಮಾರಕವಾಗಿರುವ, ದೇಶದ ಸ್ವಾವಲಂಬನೆಗೆ ಧಕ್ಕೆಯುಂಟುಮಾಡುವ ಕಂಪನಿ ಕೃಷಿಯನ್ನು ನಿಲ್ಲಿಸಿ, ಕೃಷಿಯಲ್ಲಿನ ವಿದೇಶಿ ಬಂಡವಾಳವನ್ನು ತಡೆಗಟ್ಟಿ, ದೇಶಿಯ ತಂತ್ರಜ್ಞಾನ ಮತ್ತು ದೇಶೀಯ ವಿಶ್ವವಿದ್ಯಾಲಯಗಳನ್ನು ಬಲಪಡಿಸಿದರೆ, ದೇಶಿಯ ವಿಜ್ಞಾನಿಗಳನ್ನು ಪ್ರೋತ್ಸಾಹಿಸಿದರೆ, ಮಾರುಕಟ್ಟೆಯನ್ನು ರೈತರಿಗೆ ಪೂರಕವಾಗಿ ಬಲಪಡಿಸಿದರೆ ಮಾತ್ರ ಭಾರತದ ಬೆನ್ನೆಲುಬು ಅನ್ನದಾತ ಬದುಕುಳಿಯಲು ಸಾಧ್ಯ, ಇದನ್ನು ಬರಿ ರೈತರ ಪ್ರಶ್ನೆ ಮಾತ್ರವಲ್ಲದೆ ದೇಶದ ಪ್ರಶ್ನೆಯನ್ನಾಗಿ ನೋಡಬೇಕಾಗಿದೆ ಎನ್ನುತ್ತಾರೆ.

ರೈತರ ಬೆಳೆಗೆ ಮಾರುಕಟ್ಟೆಯಲ್ಲಿ ನ್ಯಾಯಬದ್ಧ ಬೆಲೆ ಒದಗಿಸುವ ಪ್ರಶ್ನೆಯ ಹಿನ್ನೆಲೆಯಲ್ಲಿ ಕನಿಷ್ಠ ಬೆಂಬಲ ಬೆಲೆಯ ಸೂತ್ರ ಬಂದಿದ್ದು ಈಗ ನವ–ಉದಾರವಾದದ ಅಡಿಯಲ್ಲಿ ಅದು ಮಾರುಕಟ್ಟೆಯನ್ನು 'ವಿರೂಪ'ಗೊಳಿಸುವ ಅಂಶ ಎಂಬ ಪರಿಕಲ್ಪನೆಯನ್ನು ತರಲಾಗಿದೆ. ಕೃಷಿಯ ಕಂಪನೀಕರಣಕ್ಕೆ ಪೂರಕವಾಗಿ ಕೃಷಿ ಮಾರುಕಟ್ಟೆಯಲ್ಲಿ ಖಾಸಗಿ ಬಂಡವಾಳದ ಹುಚ್ಚು ಹರಿದಾಟಕ್ಕೆ ಅವಕಾಶ ಮಾಡಿಕೊಡಬೇಕೆಂಬ ಉದ್ದೇಶದಿಂದ ರೈತ ವಿರೋಧಿಯಾದ ನೀತಿಯನ್ನು ಜಾರಿಗೆ ತರಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ರೈತ ಚಳುವಳಿಗಳಲ್ಲದೇ ರಾಜ್ಯ ಸರಕಾರಗಳೂ ರಾಜಕೀಯ ಹೋರಾಟಕ್ಕೆ ಮುಂದಾಗಬೇಕು ಎನ್ನುತ್ತಾರೆ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿಯವರು.

ಕೃಷಿ ಮಾರುಕಟ್ಟೆಯಲ್ಲಿ ಬಂಡವಾಳಶಾಹಿ ಹಿತಾಸಕ್ತಿಗಳು ಮಧ್ಯಪ್ರವೇಶ ಮಾಡುತ್ತಿರುವ ಹಿನ್ನೆಲೆಯಲ್ಲಿ ಕೃಷಿ ಉತ್ಪನ್ನಗಳ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಹಕಾರಿ ಚಳುವಳಿಯನ್ನು ಬಲಪಡಿಸುವ ಕೆಲಸಕ್ಕೂ ಒತ್ತು ಸಿಗಬೇಕಿದೆ ಎಂಬುದು ಅವರ ಒಂದು ಸಲಹೆ.

ಕರ್ನಾಟಕ ರಾಜ್ಯ ಸರಕಾರ ಮೇ 31, 2016ರಂದು 'ಸಾರ್ವಜನಿಕ ಉಪಯುಕ್ತತೆಯುಳ್ಳ ಸರ್ಕಾರದ ಯೋಜನೆಗಳಿಗೆ' ಗರಿಷ್ಠ 100 ಎಕರೆಗೆ ಮೀರದಂತೆ ಭೂಕೋರಿಕೆ ಇಲಾಖೆ/ಫಲಾನುಭವಿ ಸಂಸ್ಥೆಗಳು ಖಾಸಗೀ ಜಮೀನನ್ನು ಭೂಮಾಲೀಕರಿಂದ ನೇರವಾಗಿ ಖರೀದಿಸಲು ಅನುಮತಿ ನೀಡಿ ಆದೇಶ ಹೊರಡಿಸಿದೆ. ಇದನ್ನು ಪರಿಶೀಲಿಸಿರುವ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯವರು ಭೂಸಂತ್ರಸ್ತರ ಕುರಿತ ಕಾಂಗ್ರೆಸ್‌ನ ಹುಸಿ ಕಾಳಜಿಯನ್ನು ಇದು ಮತ್ತೊಮ್ಮೆ ಬಯಲುಗೊಳಿಸಿದೆ ಎನ್ನುತ್ತಾರೆ. ರೈತರು, ಪ್ರಗತಿಪರರು, ಸಂಘ ಸಂಸ್ಥೆಗಳು ನಾಗರೀಕರು ಮತ್ತು ಭೂಸಂತ್ರಸ್ತರ ವಿರೋಧಿಯಾದ ಈ ಆದೇಶವನ್ನು ತಕ್ಷಣವೇ ವಾಪಾಸು ಪಡೆಯುವಂತೆ ಮತ್ತು ಸರಕಾರ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸುವಂತೆ ಒತ್ತಾಯಿಸಿ, ಬಲವಾದ ಐಕ್ಯ ಚಳುವಳಿಯಲ್ಲಿ ತೊಡಗಿ ಯಶಸ್ವಿಯಾಗುವುದೊಂದೇ ಇದರ ಅಪಾಯದಿಂದ ತಪ್ಪಿಸಿಕೊಳ್ಳಲು ಇರುವ ದಾರಿಯಾಗಿದೆ., ಅದಾಗದಿದ್ದಲ್ಲಿ ಲಕ್ಷಾಂತರ ಕುಟುಂಬಗಳು ಅಭಿವೃದ್ಧಿಯ ಹೆಸರಿನ ಈ ದಾಳಿಗೊಳಗಾಗ ಬೇಕಾಗುತ್ತದೆ ಎನ್ನುತ್ತಾರೆ.

ಈಗ ಹವಾಮಾನ ವೈಪರೀತ್ಯ ನಮ್ಮಂತಹ ದೇಶಗಳ ಕೃಷಿರಂಗಕ್ಕೆ, ರೈತರಿಗೆ ಮಾರಕವಾಗುತ್ತಿದೆ. ಇದನ್ನು ಪರಿಶೀಲಿಸಿರುವ ಟಿ.ಎಲ್.ಕೃಷ್ಣೇ ಗೌಡ ಅವರ ಲೇಖನ ಇದು ಕೇವಲ ತಾಂತ್ರಿಕ ಪ್ರಶ್ನೆಯಷ್ಟೇ ಅಲ್ಲ, ನಮ್ಮ ಸದ್ಯದ ಉತ್ಪಾದನಾ ಸಂಬಂಧಗಳು ಈ ಸಮಸ್ಯೆಯನ್ನು ಹೇಗೆ ಇನ್ನಷ್ಟು ಜಟಿಲಗೊಳಿಸಿವೆ ಎಂಬ ಬಗ್ಗೆ ನಡೆಯುತ್ತಿರುವ ಚರ್ಚೆಯತ್ತ ಗಮನ ಸೆಳೆಯುತ್ತಾರೆ.

ಇದರಿಂದ ರೈತರಿಗೆ ರಕ್ಷಣೆಯ ಪ್ರಶ್ನೆಯನ್ನು ಎತ್ತಿಕೊಳ್ಳುವ ಜಿ.ವಿ.ಶ್ರೀರಾಮರೆಡ್ಡಿಯವರು ಇದರ ಹಿಂದೆ ಇರುವ ಶಕ್ತಿಗಳು ಯಾವುವು ಎಂಬುದನ್ನು ಗುರುತಿಸಿ ಆ ಶಕ್ತಿಗಳ ವಿರುದ್ಧ, ಜಗತ್ತಿನ ಜನ– ಭಾರತದ ಜನ ಹೋರಾಟ ನಡೆಸದೆ, ಈ ಹವಾಮಾನದ ವೈಪರೀತ್ಯ ಮತ್ತು ಪರಿಣಾಮಗಳು, ವಿಶೇಷವಾಗಿ ನಮ್ಮ ಕೃಷಿಯ ಮೇಲಿನ ದುಷ್ಪರಿಣಾಮಗಳನ್ನು ನಾವು ಎದುರಿಸಲಿಕ್ಕೆ ಸಾಧ್ಯವಿಲ್ಲ ಎನ್ನುತ್ತಾರೆ.

ಇವೀಗ ನಮ್ಮ ಮುಂದೆ, ರೈತ ಸಂಘಟನೆಗಳ, ಪ್ರಜಾಪ್ರಭುತ್ವವಾದಿಗಳ ಮುಂದೆ ಇರುವ ಸವಾಲುಗಳು.

# ಮಹಾರಾಜರ ಮದುವೆಯೆಂಬ ಪಾಳೇಗಾರಿ ಪ್ರದರ್ಶನ

ಎಸ್.ವೈ. ಗುರುಶಾಂತ

ಮದುವೆ, ಮದುವೆ! ಇದು ಮಹಾರಾಜರ ಭರ್ಜರಿ ಮದುವೆ! ಅದೂ ಮೈಸೂರು ಮಹಾರಾಜರ ಮದುವೆಯೆಂದರೆ ಸಾಮಾನ್ಯವಾಗಿರಲು ಹೇಗೆ ಸಾಧ್ಯ? ಹೀಗಾಗಿ ಅದು ಅದ್ದೂರಿ ಮದುವೆ ಆಗಿರಲೇಬೇಕಿಲ್ಲವೇ? ಕಳೆದ ಐದು ದಿನಗಳಿಂದ ಹಲವಾರು ವಿವಾಹ ಧಾರ್ಮಿಕ ಆಚರಣೆಗಳು, ಅರಮನೆಯ ಸಂಪ್ರದಾಯಗಳ ಪಾಲನೆ, ಗಣ್ಯಾತಿ ಗಣ್ಯರ ಆಗಮನ, ಸಂಭ್ರಮ. ಈ ಸಂಭ್ರಮ, ಪುಳಕಗಳು ಬರೀ ಒಡೆಯರ್ ಕುಟುಂಬದವರಿಗೆ ಮಾತ್ರವಲ್ಲ. ನಮ್ಮ ಟಿವಿ, ಪತ್ರಿಕಾ ಮಧ್ಯಮಗಳಿಗೂ. ಆದ್ದರಿಂದಲೇ ಅಲ್ಲಿ ನಡೆಯುವ ಪ್ರತಿ ಘಟನೆಗಳೂ ಮಾಧ್ಯಮದವರಿಗಾದ ಪುಳಕಗಳೂ ಪುಂಖಾನುಪುಖವಾಗಿ ದಿನಗಟ್ಟಲೇ ಚಾನೆಲ್‌ಗಳಲ್ಲಿ ಹರಿದು, ಪತ್ರಿಕೆಗಳ ಪುಟ, ಪುಟಗಳಲ್ಲಿ ರಾರಾಜಿಸಿ ನಾಡಿನ ಜನರಿಗೆ ಸಂಭ್ರಮದ ಸುಧೆ ಹರಿಸಿ ಪಾವನವಾದವಲ್ಲ!

ಇದು ಬಹುತೇಕ 35 ವರುಷಗಳ ನಂತರ 2016ರ ಜೂನ್ 27ರಂದು ಮೈಸೂರು ಅರಮನೆಯಲ್ಲಿ ನಡೆಯುತ್ತಿರುವ ಶುಭ ಸಮಾರಂಭವೆಂದು ಸಮಜಾಯಿಷಿಯನ್ನು ನೀಡುತ್ತಿವೆ ನಮ್ಮ ಟಿವಿ, ಪತ್ರಿಕಾ ಮಾಧ್ಯಮಗಳು ಮತ್ತು ರಾಜನಿಷ್ಠ ವಕ್ತಾರರು. ಕಳೆದ ವರುಷ ಶ್ರೀಕಂಠದತ್ತ ಒಡೆಯರ್‌ರವರ ನಿಧನದ ಸಂದರ್ಭದಿಂದ ಆರಂಭಿಸಿ ಇಲ್ಲಿಯವರೆಗೂ ಒಡೆಯರ್ ಕುಟುಂಬದವರ ದತ್ತಕ ವಿಚಾರವನ್ನೂ ಒಳಗೊಂಡು ಅಲ್ಲಿನ ಪ್ರತಿಯೊಂದು ಸಣ್ಣ ಪುಟ್ಟ ಘಟನೆಗಳನ್ನೂ ಚಾಚೂ ತಪ್ಪದೇ ಸಾರ್ವಜನಿಕರಿಗೆ ದಾಟಿಸುವಲ್ಲಿ ಮಾಧ್ಯಮಗಳು ಗಮನ ಕೇಂದ್ರೀಕರಿಸಿರುವುದು ಸಹ ಕುತೂಹಲವೇ. ಈ ಮದುವೆಯನ್ನೂ ಒಂದು ಮಹತ್ವದ ರಾಷ್ಟ್ರೀಯ ಘಟನೆಯನ್ನಾಗಿಸಿವೆ ಅವು. ನಿಜ, ಈ ಘಟನೆ ಒಡೆಯರ್ ಕುಟುಂಬಕ್ಕೆ ಮಹತ್ವದ್ದಿರಬಹುದು. ಆದರೆ ಆರೂವರೆ ಕೋಟಿ ಕರ್ನಾಟಕ ವಾಸಿಗಳಿಗೂ, ಭಾರತದ ವಾಸಿಗಳಿಗೂ ಎಷ್ಟರ ಮಟ್ಟಿನದು? ಯಾವುದೇ ವಿವಾಹವೆಂಬುದು ಸಾಮಾಜಿಕ ಅಂಗೀಕಾರ ಪಡೆಯಬೇಕೆಂಬ ಆಶಯಕ್ಕೆ ವಿಸ್ತರಿಸಿದೆಯಾದರೂ ಅದು ಅವರ ವೈಯುಕ್ತಿಕ ಅಥವಾ ಕೌಟುಂಬಿಕ ವಿದ್ಯಾಮಾನ. ಅದರಲ್ಲೂ ಪ್ರತಿ ಕುಟುಂಬದ 'ಸಾಮಾಜಿಕ' ಎಂಬ ಅಂಶವೂ ಅತ್ಯಂತ ಸೀಮಿತ ಗಡಿ ರೇಖೆಯನ್ನು ಮತ್ತು ಅದು ಸಹ ಖಾಸಗಿ ಸ್ವರೂಪವನ್ನೇ ಹೊಂದಿದೆ.




ಹೀಗಿರುವಾಗ ಒಂದು ಕುಟುಂಬದ ಖಾಸಗಿ ವಿದ್ಯಾಮಾನವನ್ನು, ಅದರಲ್ಲೂ ನಮ್ಮ ನೆಲದ ಕಾನೂನಿಗೆ, ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾದ ಭೋಗದ, ಆಡಂಬರದ ವಿದ್ಯಾಮಾನವನ್ನು ಸಾರ್ವಜನಿಕರ ಮೇಲೆ ಹೇರುವ ಕ್ರಮವೇ ಮಾನಸಿಕ ಗುಲಾಮಗಿರಿ ಹಾಗೂ ದಬ್ಬಾಳಿಕೆಯ ಸಂಕೇತ. ಪಾಳೇಗಾರೀ ಪ್ರಭುತ್ವದ ವೈಭವೀಕರಣ ಎಂಬುದು ಪ್ರಜೆಗಳಲ್ಲಿ ದಾಸ್ಯದ ಮನೋಭಾವ ಬೆಳೆಸುವ, ಆಧುನಿಕ ಪ್ರಜಾಪ್ರಭುತ್ವದ ಸಹಜತೆ, ಸಮಾನತೆಯ ಮೌಲ್ಯಗಳನ್ನು ಬುಡಮೇಲು ಮಾಡುವ ದೂರಗಾಮಿ ಸಾಂಸ್ಕೃತಿಕ ರಾಜಕಾರಣವಾಗಿದೆ. ಪ್ರಜಾಪ್ರಭುತ್ವ ಬಲಗೊಂಡು ಬೆಳೆಯದಂತೆ, ಅದನ್ನು ಒಳಗಿನಿಂದಲೇ ಕೊರೆದು ಕುಸಿಯುವಂತೆ ಮಾಡುವ ಸ್ಥಾಪಿತ ಹಿತಾಸಕ್ತಿಗಳ ಒಳ ಸಂಚು ಇದ್ದಿದೆ. ನಮ್ಮ ದೇಶ ಸ್ವತಂತ್ರಗೊಂಡು, ಸಂವಿಧಾನ, ಸಂಸದೀಯ ಪ್ರಜಾಪ್ರಭುತ್ವ ಅನುಷ್ಠಾನಗೊಂಡು ಎಂಟು ದಶಕಗಳ ಸಂಭ್ರಮಾಚರಣೆಗೆ ಹತ್ತಿರವಾಗುತ್ತಿದ್ದರೂ ಈಗಲೂ ಇತಿಹಾಸ ಸೇರಿದ ರಾಜ–ಮಹಾರಾಜರ ಅಸ್ತಿತ್ವ, ಅವರನ್ನು ಮೇಲೆತ್ತಿ ಮೆರೆಸುವ, ಖಾಸಗೀ 'ದರ್ಬಾರು'ಗಳನ್ನು ಕೊಂಡಾಡುವ ಪ್ರವೃತ್ತಿ ಖಂಡನೀಯ.

ನಮ್ಮ ಕರುನಾಡಿನಲ್ಲಿ ಈಗಲೂ ಮೈಸೂರಿನ ಒಡೆಯರ್ ಮನೆತನದವರನ್ನು ಹೊಗಳುವ, ಅದರಲ್ಲೂ ಅವರು ಅತ್ಯಂತ ಪ್ರಗತಿಪರರು, ರಾಜ್ಯದ ಅಭಿವೃದ್ಧಿಯ ಹರಿಕಾರರು ಎಂದು ಭಾವಿಸುವ, ಬಿಂಬಿಸುವವರ ಸಂಖ್ಯೆಯೇನೂ ಕಡಿಮೆ ಇಲ್ಲ. ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕ್ಷೇತ್ರಗಳಿಗೆ ಅವರ ಕೊಡುಗೆಯು ಅನನ್ಯವಾದುದೆಂದು ಹೇಳಲಾಗುತ್ತಿದೆ. ಅಂದರೆ ಈ ಮೂಲಕವಾಗಿ ಮೈಸೂರು ಭಾಗದ, ದಕ್ಷಿಣ ಕರ್ನಾಟಕದ ಅಭಿವೃದ್ಧಿಯ ಬಹುತೇಕ ಕೀರ್ತಿಯ ಪಾಲನ್ನು ಒಡೆಯರ್ ಕುಟುಂಬಕ್ಕೆ ನೀಡಲಾಗುತ್ತಿದೆ. ಇದು ಪೂರ್ಣ ಸತ್ಯವಲ್ಲವೆಂಬುದು ಇತಿಹಾಸ ಬಲ್ಲ ಯಾರಿಗೂ ತಿಳಿದಿರುವುದೇ ಆಗಿದೆ. ಈ ಭಾಗದ, ವಿಶೇಷವಾಗಿ ದಕ್ಷಿಣ ಕರ್ನಾಟಕದ ಸರ್ವಾಂಗೀಣ ಪ್ರಗತಿ, ಸಾಧಿತವಾದ ಸಮಗ್ರ ಅಭಿವೃದ್ಧಿಯಲ್ಲಿ ಹೈದರಾಲಿ, ಟಿಪ್ಪು ಸುಲ್ತಾನರ ಗಮನಾರ್ಹ ಮೂಲಭೂತ ಕೊಡುಗೆಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಇದರಲ್ಲಿ ಸತ್ಯ ಸಂಗತಿ ಮರೆ ಮಾಚುವ ಕೊಳೆತು ನಾರುವ ಮತೀಯವಾದೀ, ಪಾಳೇಗಾರಿ ದುಷ್ಟ ರಾಜಕೀಯ ಹಿತಾಸಕ್ತಿಗಳಿವೆ.

ಮೈಸೂರನ್ನು ಆಳಿದ ರಾಜವಂಶಗಳಲ್ಲೊಂದಾದ ಯದುವಂಶದ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಬಿಟ್ಟರೆ ಉಳಿದ ಬಹುತೇಕ ಅರಸರ ಕೊಡುಗೆ ಗಣನೀಯವೇನಲ್ಲ ಹಾಗೂ ಹಲವಾರದ್ದು ನಕಾರಾತ್ಮಕವಾದುದು. ನಾಲ್ವಡಿ ಒಡೆಯರ್ ರವರು ತಮ್ಮ ಆಡಳಿತಾವಧಿಯಲ್ಲಿ ತಂದ ಶೈಕ್ಷಣಿಕ ವಿಸ್ತರಣೆ ಮತ್ತು ದಲಿತ, ಹಿಂದುಳಿದವರಿಗೆ ಮೀಸಲಾತಿ ಪದ್ಧತಿಯನ್ನು ರೂಪಿಸಿ ಜಾರಿಗೊಳಿಸಿದ್ದು ಶ್ಲಾಘನೀಯ. ಅವರ ಮೀಸಲಾತಿ ನೀತಿ ದೇಶದಲ್ಲಿಯೇ ಪ್ರಥಮ ಎಂದೂ ಪ್ರಶಂಸಿಸಲಾಗುತ್ತಿರುವುದು

ಪುಟ 4 ಕ್ಕೆ

## ಮಹಾರಾಜರ ಮದುವೆಯೆಂಬ ಪಾಳೇಗಾರಿ ಪ್ರದರ್ಶನ......

ಪುಟ 3 ರಿಂದ

ಅರ್ಥಪೂರ್ಣ. ಇವರನ್ನು ಹೊರತು ಪಡಿಸಿದರೆ ಮುಂದೆ ಬಂದ ಜಯಚಾಮರಾಜ ಒಡೆಯರ್ ರವರ ಆಡಳಿತದಲ್ಲಿ ಜನಪರ ಕೊಡುಗೆ ಇಲ್ಲ. ಸಂಸದರಾದ ಶ್ರೀಕಂಠದತ್ತ ಒಡೆಯರ್ ಪಾತ್ರವೂ ನಗಣ್ಯ. ಈ ಹಿಂದಿನ ರಾಜರಂತೆ ಬಹುತೇಕ ಈ ಅರಸರು ವೈಯುಕ್ತಿಕ ಭೋಗಾಸಕ್ತರು, ವಿಷಯ ಲಂಪಟರು, ಅಸಮರ್ಥ ಆಡಳಿತಗಾರರು ಮತ್ತು ಜನ ವಿರೋಧಿಗಳೂ ಆಗಿದ್ದರು. ಮೈಸೂರು ಸಂಸ್ಥಾನದಲ್ಲಿ ಸೇನಾನಿಯಾಗಿದ್ದ ಹೈದರಾಲಿ ಆಡಳಿತ ಉಸ್ತುವಾರಿ ವಹಿಸಿಕೊಂಡದ್ದೇ ಇಂತಹ ಅಸಮರ್ಥರ ಆಡಳಿತದಿಂದಾಗಿ, ರಾಜ್ಯ ಕುಸಿಯಬಾರದೆಂದು. ಮೈಸೂರು ಆ ಮುಂದೆ ಪ್ರಗತಿಯತ್ತ ಹೆಜ್ಜೆ ಹಾಕಿದ್ದು, ಮುಂದೆ ಬ್ರಿಟೀಶರ ಆಕ್ರಮಣವನ್ನು ಟಿಪ್ಪು ಪ್ರತಿರೋಧಿಸಿದ್ದು ಐತಿಹಾಸಿಕ. ವಸಾಹತುಶಾಹಿ ನೆಲೆಯೂರಿದ ಮೇಲೂ ಮೈಸೂರು ಅರಸರು ಅವರ ನಿಷ್ಠ ಸೇವಕರಾಗಿದ್ದುದರಿಂದ ಆಡಳಿತ, ವೈಭೋಗದ ಜೀವನ ಅಬಾಧಿತವಾಯಿತು.

ಹೀಗೆ ಬ್ರಿಟೀಶರ ಗುಲಾಮರಾಗಿದ್ದ ಅರಸರು ದೇಶದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆದಿರುವಾಗ 'ಸಾಮಾಜ್ಯಾಧೀಶರ' ಆಜ್ಞೆಗಳನ್ನು ಪಾಲಿಸಿದರು. ಸ್ವಾತಂತ್ರ್ಯ ಹೋರಾಟಗಳನ್ನು ಹತ್ತಿಕ್ಕಲು ಬರ್ಬರ ಕ್ರಮಗಳನ್ನು ಕೈಗೊಂಡರು. ಶಿವಪುರ ಧ್ವಜ ಸತ್ಯಾಗ್ರಹ, ಮೈಸೂರು ಜೈಲಿನಲ್ಲಿ ಸಂಭವಿಸಿದ ವಿದ್ಯಾರ್ಥಿ ಸಾವು, ವಿದುರಾಶ್ವಥದಲ್ಲಿ ಚಳುವಳಿಕಾರರ ಹತ್ಯೆ, ಬೆಂಗಳೂರಿನಲ್ಲಿ ವಿದ್ಯಾರ್ಥಿಗಳ ಮೇಲೆ ಗೋಲಿಬಾರ್ ಒಡೆಯರ್ ಆಡಳಿತದ ರಕ್ತ ಸಿಕ್ತ ಅಧ್ಯಾಯಗಳು. ಜೊತೆಗೆ ಭಾರತ ಸ್ವತಂತ್ರಗೊಂಡ ಬಳಿಕ ಮೈಸೂರು ಸಂಸ್ಥಾನವನ್ನು ವಿಲೀನಗೊಳಿಸದೇ ಸ್ವತಂತ್ರ ರಾಜ್ಯವಾಗಿಯೇ ಉಳಿಸಿಕೊಳ್ಳಲು ಹಲವು ರಾಜರೊಂದಿಗೆ ಸಂಚು ಮಾಡಿದ್ದಿದೆ. ಇದರ ವಿರುದ್ಧ ಜವಬ್ದಾರಿ ಸರ್ಕಾರಕ್ಕಾಗಿ ಜನತೆ 'ಮೈಸೂರು ಚಲೋ' ಚಳುವಳಿಯನ್ನು ಸಾರಿ ದಮನಕಾಂಡವನ್ನು ಎದುರಿಸಿಯೂ ಯಶಸ್ವಿಯಾಗಿ ನಡೆಸಿದರು. ದಾರಿಯುದ್ದಕ್ಕೂ ಬಂಧನಗಳು, ಲಾಠಿ ಚಾರ್ಜ್ ಹೋರಾಟವನ್ನು ದುರ್ಬಲಗೊಳಿಸಲಾಗಲಿಲ್ಲ. ಜನತೆಯ ಈ ಒತ್ತಡಕ್ಕೆ ಕೊನೆಗೂ ಮಣಿದು ಮೈಸೂರು ಸಂಸ್ಥಾನವನ್ನು ವಿಲೀನ ಮಾಡಲೇ ಬೇಕಾಯಿತು. ಆಗ ಜನರ ಆಕ್ರೋಶ ತಾರಕಕ್ಕೇರಿತ್ತು. ಈ ಪ್ರಕ್ರಿಯೆಯಲ್ಲಿಯೇ ದಸರಾ ಜಂಬೂ ಸವಾರಿಯ ಅಂಬಾರಿಯಲ್ಲಿ ಜಯಚಾಮರಾಜೇಂದ್ರ ಒಡೆಯರನ್ನು ಕೂಡಿಸಿ ಮೆರೆಸುವುದನ್ನು ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಖಂಡ ತುಂಡವಾಗಿ ವಿರೋಧಿಸಿದರು. ಕವಿ ಕುವೆಂಪುರವರು ಮಹಾರಾಜರನ್ನು ರಾಜ್ಯಪಾಲರನ್ನಾಗಿ ನೇಮಿಸುವುದರ ವಿರುದ್ಧ ಪ್ರಬಲ ದನಿ ಎತ್ತಿದರು. ಅರಸೊತ್ತಿಗೆ ವಿರೋಧಿಸಿ ಬರೆದ ಅವರ ಪದ್ಯಗಳೂ ಜನಪ್ರಿಯ.

ದೇಶ ಸ್ವಾತಂತ್ರ್ಯಗೊಂಡ ಬಳಿಕ ಇಂತಹ ಮಹಾರಾಜರ ಅಸ್ತಿತ್ವಕ್ಕೆ ಸ್ಥಾನವಿಲ್ಲ. ಅವರ ಆಸ್ತಿ ಜನರ ಸ್ವತ್ತು, ದೇಶದ ಸ್ವತ್ತು. ಹೀಗಾಗಿ ಅವರ ಎಲ್ಲಾ ಆಸ್ತಿ, ಸ್ಥಾನಗಳನ್ನು ಮುಟ್ಟುಗೋಲು ಹಾಕಬೇಕಿತ್ತು. ಅದನ್ನು ನೆಹರೂ ನೇತೃತ್ವದ ಕಾಂಗ್ರೆಸ್ ಸರಕಾರ, 'ಉಕ್ಕಿನ ಮನುಷ್ಯ'ನೆಂಬ ಗೃಹ ಸಚಿವ ಸರದಾರ್ ಪಟೇಲ್ ಮಾಡಲಿಲ್ಲ. ಮಾಜಿ ಮಹಾರಾಜರನ್ನು, ಪಾಳೇಗಾರಿ ಭೂಮಾಲೀಕರನ್ನು ಉಳಿಸಿ, ಪೋಷಿಸುವ ಕ್ರಮಗಳನ್ನೇ ಅವರು ಮಾಡಿದರು. ಮತ್ತು ಅವರನ್ನು ರಾಜಕೀಯ ನೆಲೆಗಳಾಗಿ ಉಳಿಸಿಕೊಂಡರು. ಹೀಗಾಗಿಯೇ ಬಹುತೇಕ ಮಾಜಿ ಮಹಾರಾಜರು ಕಾಂಗ್ರೆಸ್ ಪಕ್ಷದಲ್ಲಿ, ಕೆಲವರು ಆರೆಸ್ಸೆಸ್ ಪೋಷಿತ ಜನಸಂಘದಲ್ಲಿಯೂ ಆಶ್ರಿತರಾಗಿ ಹೊಸ ವೇಷ ಧರಿಸಿ ವಿರಾಜಿಸಿದರು. ನಮ್ಮ ರಾಜ್ಯದ ಶ್ರೀಕಂಠದತ್ತ ಒಡೆಯರ್ ಕಾಂಗ್ರೆಸ್‌ನಿಂದಲೂ, ಮತ್ತೊಮ್ಮೆ ಬಿಜೆಪಿಯಿಂದಲೂ ಪಾರ್ಲಿಮೆಂಟ್‌ನ ಸದಸ್ಯರಾಗಿದ್ದುದನ್ನು ನೆನಪಿಸಿಕೊಳ್ಳಬೇಕು. ಮಹಾರಾಜರಿಗೆ ಪಕ್ಷ ಬೇಧವಿಲ್ಲ ಅಲ್ಲವೇ! ಅಥವಾ ಈ ಪಕ್ಷಗಳಿಗೆ ಮಹಾರಾಜರ ವಿಷಯದಲ್ಲಿ ಸಮಾನ ಅರ್ಥವಂತಿಕೆ!

ಈಗ ಮದುವೆಯಾದ ಯದುವೀರನೆಂಬ ವರಶ್ರೇಷ್ಠನಿಗೆ ರಾಜಸ್ಥಾನದ ಡುಂಗರಪುರ ರಾಜಮನೆತನದ ಹರ್ಷವರ್ಧನ್‌ಸಿಂಗ್ ಪುತ್ರಿ ತ್ರಿಷಿಕಾ ಸಿಂಗ್ ಎಂಬ ವಧುವಿನೊಂದಿಗೆ ವಿವಾಹವಾಗಿದೆ. ಈ ಹರ್ಷವರ್ಧನ್‌ಸಿಂಗ್ ಬಿ.ಜೆ.ಪಿ.ಯ ಸಂಸದ. ಈ ಮೂಲಕ ಮೈಸೂರು ಅರಸರ ಮನೆತನ ಮತ್ತೆ ಬಿಜೆಪಿಯ ಡೇರೆಯೊಳಗೆ ಹೋಗಿದೆ. ಈ ವಿದ್ಯಮಾನವನ್ನು ಅಷ್ಟು ಸರಳವಾಗಿ ನೋಡಲಾಗುವುದಿಲ್ಲ ಕೂಡ. ಶ್ರೀಕಂಠದತ್ತ ಒಡೆಯರ್ ನಿಧನದ ಘಟನೆಯಿಂದ ಹಿಡಿದು ದತ್ತು ಪುತ್ರನ ಪಟ್ಟಾಭಿಷೇಕವನ್ನೂ ಒಳಗೊಂಡು ಇಲ್ಲಿಯವರೆಗೆ ನಮ್ಮ ಮಾಧ್ಯಮಗಳು ನೀಡುತ್ತಿರುವ ಆದ್ಯತೆ, ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಈ ಅವಧಿಯಲ್ಲಿ ಸಿಗುತ್ತಿರುವ ಪ್ರಾಶಸ್ತ್ಯವನ್ನು ಈ ಹಿನ್ನೆಲೆಯಲ್ಲಿ ಅವಲೋಕಿಸಬೇಕು. ಈಗಲೂ ಮೈಸೂರು ಅರಸರ ಕೈಯ್ಯಲ್ಲಿ ಅಪಾರ ಆಸ್ತಿಯೂ ಇದೆ. ಅದರ ಸುತ್ತ ವಿವಾದಗಳೂ, ವ್ಯಾಜ್ಯಗಳೂ ಮೆತ್ತಿಕೊಂಡಿವೆ. ಯದುವೀರ ಯುವಕ. ಆತ ಮತ್ತೇ, ಮತ್ತೇ ತಾನು ರಾಜಕೀಯಕ್ಕೆ ಬರುವ ಯೋಚನೆಯಲ್ಲಿ ಸದ್ಯ ಇಲ್ಲ ಎಂದು ಹೇಳುವ ಕಾರಣ ಅಥವಾ ಅರ್ಥವಾದರೂ ಏನು? ದಕ್ಷಿಣ ಕರ್ನಾಟಕದಲ್ಲಿ ತನ್ನ ನೆಲೆಯನ್ನು ವಿಸ್ತರಿಸಲು ಸರ್ವ ಪ್ರಯತ್ನ ಮಾಡುತ್ತಿರುವ ಆರೆಸ್ಸೆಸ್ ಮತ್ತು ಬಿಜೆಪಿಯ ರಾಜಕೀಯ ತಂತ್ರಕ್ಕೆ ಯದುವೀರನನ್ನು ಸೆಳೆಯಲಾಗುತ್ತಿದೆಯೇ? ಇದರಿಂದ ಮೈಸೂರು ಭಾಗದಲ್ಲಿ ಬಹಳ ಪ್ರಯೋಜನವಾಗಬಲ್ಲುದು ಎಂಬ ಲೆಕ್ಕಾಚಾರ ಅಡಗಿದೆಯೇ? (ಕಾಂಗ್ರೆಸ್ ಮುಕ್ತ ಭಾರತದ ಕಾರ್ಯಸೂಚಿಯಂತೆ!)

ಪ್ರಜಾಪ್ರಭುತ್ವದಲ್ಲಿ ರಾಜಪ್ರಭುತ್ವಕ್ಕೆ ಅವಕಾಶವೇ ಇಲ್ಲ, ಇರಕೂಡದು. ಆದರೆ ನಮ್ಮನ್ನಾಳುವ ವರ್ಗಗಳು ಇಂತಹ ಕಾಲಬಾಹೀರ ಶಕ್ತಿಗಳನ್ನು, ಮೌಲ್ಯಗಳನ್ನು ಪುನರ್ ಪ್ರತಿಷ್ಠಾಪಿಸಲು ಸದಾ ಬಯಸುತ್ತದೆ. ಪ್ರಜಾಭುತ್ವಕ್ಕೆ ಮಾರಕವಾದ ಪಾಳೇಗಾರೀ ಮೌಲ್ಯಗಳನ್ನು ಜೀವಂತವಾಗಿಡ ಬಯಸುತ್ತದೆ. ವ್ಯಕ್ತಿ ವೈಭವೀಕರಣ, 'ವ್ಯಕ್ತಿಯಾರಾಧನೆ', ವ್ಯಕ್ತಿ ಕೇಂದ್ರಿತ ರಾಜಕಾರಣಗಳು ಬಲಪಂಥೀಯರ ಆಡಳಿತ ಯಂತ್ರ ನಡೆಯಲು ಅಗತ್ಯ ನೆಲೆಗಳನ್ನಾಗಿ ರೂಪಿಸಲಾಗಿದೆ. ಇದು ಪ್ರಜಾಭುತ್ವವನ್ನು ದುರ್ಬಲಗೊಳಿಸಿ ಪಾಳೇಗಾರಿ ಶಕ್ತಿಗಳು ಮೇಲುಗೈ ಪಡೆಯಲು ಹಾದಿ ಸುಗಮಗೊಳಿಸುತ್ತವೆ. ಒಂದು ರಾಜಕೀಯ ನೆಲೆಯನ್ನೂ ನಿರ್ಮಿಸುತ್ತವೆ. ಆದ್ದರಿಂದಲೇ ಮೈಸೂರು ಅರಸರ ಜನವಿರೋಧಿ, ಶೋಷಣೆಯ ಪೀಡಕ ಇತಿಹಾಸವನ್ನು ಸಂಪತ್ತಿನ ಅಸಹ್ಯ ಪ್ರದರ್ಶನವನ್ನು ಮರೆ ಮಾಚಿ ಕೇವಲ ವೈಭವದ ಚಿತ್ರವನ್ನು ನೀಡಲು 'ತನ್ನ ಯಜಮಾನರ ಧ್ವನಿ' ಯಾಗಿರುವ ನಮ್ಮ ಮಾಧ್ಯಮಗಳು ಪ್ರಯತ್ನಿಸುತ್ತಿರುವುದರಲ್ಲಿ ಆಶ್ಚರ್ಯವೇನು?

ಆದ್ದರಿಂದ ಇಂತಹ ಪ್ರಜಾಪ್ರಭುತ್ವ ವಿರೋಧಿ ಪಾಳೇಗಾರಿ ಮೌಲ್ಯಗಳ ಅಸಹ್ಯ ಪ್ರದರ್ಶನವನ್ನು ಜನತೆ ತಿರಸ್ಕರಿಸಬೇಕು.

## ಹಿರಿಯ ರೈತ ಹೋರಾಟಗಾರ ಕಮ್ಯುನಿಸ್ಟ್ ಮುಂದಾಳು ಬಂಗಾರೇಶ್ವರ ಗೌಡ ನಿಧನ



ಉತ್ತರ ಕನ್ನಡ ಜಿಲ್ಲೆಯ ಹಿರಿಯ ರೈತ ಹೋರಾಟಗಾರ ಕಮ್ಯುನಿಸ್ಟ್ ಮುಂದಾಳು ಬಂಗಾರೇಶ್ವರ ಗೌಡ ಜೂನ್ 27ರಂದು ನಮ್ಮನ್ನಗಲಿದರು. ಅವರಿಗೆ 76 ವರ್ಷವಾಗಿತ್ತು. ಇವರು ಅವಿಭಜಿತ ಕಮ್ಯುನಿಷ್ಠ ಪಕ್ಷದ ಸಾಮಾನ್ಯ ಸದಸ್ಯರಾಗಿ 1964 ರ ನಂತರ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್ ವಾದಿ) ಸದಸ್ಯರಾಗಿ ಜೀವನದ ಕೊನೆಯ ತನಕವೂ ಅದೇ ಸಿದ್ಧಾಂತದಲ್ಲಿ ಮುಂದುವರೆದವರು.

ಅಪ್ಪಟ ಸಿದ್ಧಾಂತಬದ್ಧ ವ್ಯಕ್ತಿತ್ವದ ಇವರು ಭೂಮಿ ಹೋರಾಟದ ಮುಂಚೂಣಿ ನಾಯಕರು. ಪ್ರಾರಂಭದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಮತ್ತು ನಂತರ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಮತ್ತು ಜಿಲ್ಲಾ ಮುಂದಾಳುವಾಗಿ ಅಧ್ಯಯನಶೀಲರೂ ಆದ ಇವರು ಹೋರಾಟದ ಜೊತೆಗೆ ಜನಜೀವನದಲ್ಲಿ ಹಾಸುಹೊಕ್ಕಾದ ಮೌಢ್ಯತೆಯ ವಿರುದ್ಧ ಸಾಂಸ್ಕೃತಿಕ ಜಾಗೃತಿಗೂ ತೊಡಗಿಸಿಕೊಂಡಿದ್ದರು. ಜಿಲ್ಲೆ ಮತ್ತು ರಾಜ್ಯ-ರಾಷ್ಟ್ರ ಮಟ್ಟದ ಹಲವಾರು ಹೋರಾಟಗಳಲ್ಲಿ ಪಾಲ್ಗೊಂಡಿದ್ದರು.

ಇವರ ತಂದೆ ಕೆರಿಯಾ ಗೌಡರು ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ರೈತ ಕಾರ್ಮಿಕರ ಆಂದೋಲನದ ಭಾಗವಾಗಿ ಧಾರೇಶ್ವರ ವಕೀಲರ ಜೊತೆಗಿದ್ದರು. ಬಂಗಾರೇಶ್ವರರೂ ಕೂಡ ಎಂ.ಎಸ್. ಧಾರೇಶ್ವರ, ಪಿಕಳೆ ಮಾಸ್ತರ್, ಈರಾ ಮಾರ್ಯಾ ಮತ್ತು ಪಿ.ಜಿ.ಮಶಾಲ್ದಿಯವರ ಜೊತೆಗಾರರಾಗಿ ಶಿರಸಿ ಕೇಂದ್ರಿತವಾಗಿ ಸುತ್ತಲಿನ ಹಲವು ತಾಲೂಕುಗಳಲ್ಲಿ ಮನೆ, ನಿವೇಶನ ರಹಿತರ ಬೇಡಿಕೆಗಳಿಗಾಗಿ ಮತ್ತು ಅತಿಕ್ರಮಣ ಭೂಮಿ ಗಾಂವ್ ಠಾಣಾ ಭೂಮಿ ಸಕ್ರಮಾತಿಗೆ ಆಂದೋಲನ ಕಟ್ಟಿದರು.

ಅಂದಿನ ದಿನಗಳಲ್ಲಿ ಜಿಲ್ಲೆಗೆ ರಾಜ್ಯ ರಾಷ್ಟ್ರ ಮಟ್ಟದ ನಾಯಕರನ್ನು ಹೋರಾಟಕ್ಕೆ ಕರೆಸಿ ಮಾರ್ಗದರ್ಶನ ಪಡೆಯುತ್ತಿದ್ದರು. ಶಿರಸಿಯ ಕಾರ್ಮಿಕ ಚಳುವಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಅನಾರೋಗ್ಯದ ಕಾರಣ ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ವೈದ್ಯರ ನಿರ್ಲಕ್ಷ್ಯದಿಂದ ಅವರು ಕಾಲಿನ ಸ್ವಾಧೀನತೆಯನ್ನು ಕಳಕೊಂಡು ಒಂದು ವರ್ಷದಿಂದ ಹಾಸಿಗೆ ಹಿಡಿದಿದ್ದರು. ಇದರಿಂದ ತನ್ನ ರೈತ ಕಾರ್ಮಿಕರ ಚಳುವಳಿ0ು ಸಂಘಟನೆಯ ಕೆಲಸದಿಂದ ಬೇಗನೇ ನಿರ್ಗಮಿಸುತ್ತಿರುವ ಬಗ್ಗೆ ತೀವ್ರ ನೋವನ್ನು ತೋಡಿಕೊಂಡಿದ್ದರು. ಅನಾರೋಗ್ಯದ ಮಧ್ಯೆಯೂ ಇತ್ತೀಚೆಗೆ ತನ್ನೂರಿನಲ್ಲಿ ತಾನೇ ನೇತೃತ್ವ ವಹಿಸಿದ ನಿವೇಶನ ರಹಿತರ ಹೋರಾಟ ಹಾಗೂ ಅತಿಕ್ರಮಣ ಭೂಮಿ ಸಕ್ರಮಾತಿಯ ಆಂದೋಲನವನ್ನು ತೀವ್ರಗೊಳಿಸಲು ಕೂಡ ಸಂಗಾತಿಗಳಿಗೆ ಮಾರ್ಗದರ್ಶನ ಮಾಡಿದ್ದರು.

ಇಷ್ಟು ಬದ್ಧತೆಯ ಬಂಗಾರೇಶ್ವರರು ಅಗಲಿದಾಗ ನೂರಾರು ರೈತರು, ಹೋರಾಟದ ಸಂಗಾತಿಗಳು, ಕರ್ನಾಟಕ ಪ್ರಾಂತ ರೈತ ಸಂಘದ ಉತ್ತರ ಕನ್ನಡ ಜಿಲ್ಲಾ ಅಧ್ಯಕ್ಷರಾದ ಒಡನಾಡಿ ಮಂಜುನಾಥ ಪುಲ್ಕರ್, ಕಾರ್ಯದರ್ಶಿ ಶಾಂತಾರಾಮ ನಾಯಕ, ಸಿಐಟಿಯು ಜಿಲ್ಲಾ ಪದಾಧಿಕಾರಿಗಳಾದ ಸಿ.ಆರ್.ಶಾನಭಾಗ, ನಾಗಪ್ಪ ನಾಯ್ಕ, ಚಿಂತನ ಉತ್ತರಕನ್ನಡದ ಸಂಚಾಲಕರಾದ ವಿಠ್ಠಲ ಭಂಡಾರಿ ಮುಂತಾದವರು ಪಾಲ್ಗೊಂಡು ಅಂತಿಮ ನಮನ ಸಲ್ಲಿಸಿದರು.

ಸಿಪಿಐಎಂ ನಿಂದ ಅಂತಿಮ ನಮನ:

ಸದಾ ಜನ ಹಿತಕ್ಕೆ ತುಡಿಯುತ್ತಿದ್ದ, ರೈತ ಕಾರ್ಮಿಕರ, ಯುವಜನರ ಕುರಿತು ಕೆಲಸ ಮಾಡುತ್ತಿದ್ದ ಕಮ್ಯುನಿಷ್ಠ ಸಿದ್ಧಾಂತಕ್ಕೆ ಬದ್ಧತೆಯ ಮತ್ತು ಸಮರ್ಪಣಾ ಮನೋಭಾವದ ಬಂಗಾರೇಶ್ವರ ಗೌಡರ ನಿಧನದಿಂದ ಜಿಲ್ಲೆಯ ಕಮ್ಯುನಿಷ್ಠ ಆಂದೋಲನದ ಹಿರಿಯ ಕೊಂಡಿ ಕಳೆದು ಹೋದದಂತಾಗಿದೆ ಎಂದು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಉತ್ತರ ಕನ್ನಡ ಜಿಲ್ಲಾ ಸಮಿತಿ ಅವರಿಗೆ ಮನತುಂಬಿದ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

ತನ್ನ ಸ್ವಾರ್ಥ ಬಿಟ್ಟು ಅರವತ್ತರ ದಶಕದಿಂದಲೇ ಅವಿರತವಾಗಿ ಐವತ್ತೈದಕ್ಕೂ ಹೆಚ್ಚು ವರ್ಷ ಜಿಲ್ಲೆಯ ದುಡಿಯುವ ವರ್ಗಕ್ಕೆ ಸಮರ್ಪಿಸಿಕೊಂಡು, ಸಮಾಜ ಬದಲಾವಣೆಗೆ ಶೋಷಣೆಯಿಲ್ಲದ ಸಮಸಮಾಜದ ಕನಸು ನನಸಾಗಲು ತನ್ನಿಂದಾದಷ್ಟು ಕೆಲಸ ಮಾಡಿದ ಬಂಗಾರೇಶ್ವರರ ಆದರ್ಶವನ್ನು ಇಂದಿನ ಚಳುವಳಿಗಾರರು ಮುಂದುವರೆಸಿಕೊಂಡು ಹೋಗುವ ಪಣವನ್ನು ತೊಡುವುದಾಗಿ ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಸಮಿತಿ ತನ್ನ ಶ್ರದ್ಧಾಂಜಲಿ ಹೇಳಿಕೆಯಲ್ಲಿ ತಿಳಿಸಿದೆ.


## ಈ ವಾರ ಚರಿತ್ರೆಯಲ್ಲಿ

**26 ಜೂನ್ 1945**

ಎರಡನೇ ಮಹಾಯುದ್ಧದ ವಿನಾಶವನ್ನು ಕಂಡ ಜಗತ್ತಿನ ರಾಜಕೀಯ ಮುಖಂಡರು ಇನ್ನೊಂದು ಇಂತಹ ಮಹಾಯುದ್ಧ ನಡೆಯದಿರಲಿ ಎಂಬ ಆಶಯದಿಂದ ಸ್ಥಾಪಿಸಿದ ವಿಶ್ವ ಸಂಸ್ಥೆಯ ಸನ್ನದು ಅಂಗೀಕಾರಗೊಂಡ ದಿನ.

ಅಂದು ಅಮೆರಿಕಾದ ಸ್ಯಾನ್ ಫ್ರಾನ್ಸಿಸ್ಕೊ ನಗರದಲ್ಲಿ 50 ದೇಶಗಳ ಪ್ರತಿನಿಧಿಗಳು ಸೋವಿಯತ್ ಒಕ್ಕೂಟ, ಇಂಗ್ಲೆಂಡ್, ಅಮೆರಿಕಾ ಮತ್ತು ವಿಮೋಚನಾ-ಪೂರ್ವ ಚೀನಾದ ಪ್ರತಿನಿಧಿಗಳು ಮುಂದಿಟ್ಟ ಪ್ರಸ್ತಾವಗಳನ್ನು ಚರ್ಚಿಸಿ ವಿಶ್ವಸಂಸ್ಥೆಯ ಸನ್ನದು ಎಂಬುದನ್ನು ಅಂಗೀಕರಿಸಿದರು.

ಅಂತರ್ರಾಷ್ಟ್ರೀಯ ಶಾಂತಿ ಮತ್ತು ಸಹಕಾರ ಸ್ಥಾಪಿಸುವಲ್ಲಿ ವಿಶ್ವಸಂಸ್ಥೆಯ ಈ ಸನ್ನದ್ದು ಹಲವು ಅಡೆ-ತಡೆಗಳನ್ನು, ಮುಖ್ಯವಾಗಿ ಅದು ತನ್ನ ಕಚೇರಿಯನ್ನು ಹೊಂದಿರುವ ಅಮೆರಿಕಾದಿಂದಲೇ, ಎದುರಿಸಿದೆ ಇದನ್ನು ಹೆಚ್ಚು ಪ್ರಜಾಸತ್ತಾತ್ಮಕಗೊಳಿಸುವ ಪ್ರಯತ್ನಗಳು ಇನ್ನೂ ಯಶಸ್ವಿಯಾಗಿಲ್ಲ. ಆದರೂ ಇದರ ಪ್ರಭಾವ ಸಕಾರಾತ್ಮಕವಾಗಿದೆ ಎಂದೇ ಹೇಳಬಹುದು.



# ವೈದ್ಯಕೀಯ ವೃತ್ತಿ ಶಿಕ್ಷಣದಲ್ಲಿ ಖಾಸಗೀಯವರಿಗೆ ರಾಜ್ಯ ಸರಕಾರದ ಬಕ್ಷೀಸು

## ಸೀಟುಗಳಲ್ಲಿ 20-25ಶೇ. ಹೆಚ್ಚಳ, ಶುಲ್ಕದಲ್ಲೂ ಶೇ.30 ರಷ್ಟು ಹೆಚ್ಚಳ




**-ಬಸವರಾಜ ಪೂಜಾರ, ಎಸ್.ಎಫ್.ಐ ರಾಜ್ಯ ಉಪಾಧ್ಯಕ್ಷರು**

ಕರ್ನಾಟಕ ರಾಜ್ಯ ಸರಕಾರವು ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ನ ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ಹಂಚಲಾಗುವ ಸರ್ಕಾರಿ ಕೋಟಾದ ಸೀಟುಗಳಿಗೆ ಶೇ.30 ರಷ್ಟು ಶುಲ್ಕ ಹೆಚ್ಚಳ ಮಾಡುವ ಮೂಲಕ ಬಡ, ಹಿಂದುಳಿದ ಹಾಗೂ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳು ವೈದ್ಯರಾಗುವ ಕನಸಿಗೆ ಕೊಡಲಿ ಪೆಟ್ಟು ನೀಡಿದೆ.

ಸರ್ಕಾರವು ಬಡ, ಗ್ರಾಮೀಣ ಪ್ರದೇಶದ ವಿಧ್ಯಾರ್ಥಿಗಳ ಹಿತ ಕಾಪಾಡುವ ಬದಲಿಗೆ ಖಾಸಗೀ ಶಿಕ್ಷಣ ಸಂಸ್ಥೆಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವುದರ ಹಿಂದಿನ ಮರ್ಮವೇನು? ಎಲ್ಲರಿಗೂ ಶಿಕ್ಷಣ ಒದಗಿಸಬೇಕಾದ ಜವಾಬ್ದಾರಿ ಹೊಂದಿರುವ ಸರಕಾರವೇ ಮೊದಲಿಗೆ ಶೇ. 10 ರಷ್ಟು ಶುಲ್ಕ ಹೆಚ್ಚಳ ಮಾಡಲು ಆಫರ್ ನೀಡಿ ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ರತ್ನಗಂಬಳಿ ಹಾಸಿ, ಶುಲ್ಕ ಹೆಚ್ಚಳಕ್ಕೆ ಸಮ್ಮತಿ ಸೂಚಿಸಿತು. ಖಾಸಗಿಯವರು ಬಿಗಿ ಪಟ್ಟು ಹಿಡಿದರು. ಕೊನೆಗೆ ಶೇ.10ರ ಬದಲು 30ಶೇ. ಶುಲ್ಕ ಹೆಚ್ಚಳಕ್ಕೆ ಒಪ್ಪಿರುವುದು ನೋಡಿದ-ರೆ ವಿದ್ಯಾರ್ಥಿಗಳನ್ನು, ಅವರ ಪಾಲಕರನ್ನು ಸುಲಿಯುವಲ್ಲಿ ಖಾಸಗೀ ಶಿಕ್ಷಣ ಸಂಸ್ಥೆಗಳೊಂದಿಗೆ ರಾಜ್ಯ ಸರಕಾರವೂ ಶಾಮೀಲಾಗಿದೆಯೇ ಎಂಬ ಸಂಶಯ ಬಲವಾಗಿ ಮೂಡುತ್ತಿದೆ. ಸರಕಾರವೇ ದುಡ್ಡಿದ್ದವರು ಮಾತ್ರ ವೈದ್ಯಕೀಯ ಶಿಕ್ಷಣ ಪಡೆಯಲಿ, ಬಡವರು ಪ್ರತಿಭಾವಂತರಿದ್ದರೂ ಕೂಡ ಹಾಗೆ ಇರಲಿ ಎಂಬ ತನ್ನ ಖಾಸಗಿ ಬಂಡವಾಳಗಾರರ ಪರ ನಿಲುವನ್ನು ವ್ಯಕ್ತಪಡಿಸಿದೆ.

ಶೇ.30ರಷ್ಟು ಶುಲ್ಕ ಹೆಚ್ಚಳವೆಂದರೆ, ಕಳೆದ ಬಾರಿ ವೈದ್ಯಕೀಯ ಕೋರ್ಸಿಗೆ ಸರಕಾರೀ ಕೋಟಾದಡಿ ಸೀಟು ಪಡೆದ ವಿದ್ಯಾರ್ಥಿಗಳು ಐವತ್ತೈದು ಸಾವಿರ ರೂ. ಗಳಷ್ಟು ಶುಲ್ಕ ಕಟ್ಟಿದ್ದರೆ, ಅದೂ ಈ ವರ್ಷ ಎಪ್ಪತ್ತು ಸಾವಿರ ರೂ. ಪಾವತಿ ಮಾಡಬೇಕಿದೆ. ಇನ್ನು ಖಾಸಗೀ ಕಾಲೇಜುಗಳಲ್ಲಿ ಕಳೆದ ವರ್ಷ ನಾಲ್ಕು ಲಕ್ಷ ಇಪ್ಪತ್ತೈದು ಸಾವಿರ ಇದ್ದುದು ಈ ವರ್ಷಕ್ಕೆ ಐದು ಲಕ್ಷ ಎಪ್ಪತ್ತೈದು ಸಾವಿರಕ್ಕೆ ಏರಿಕೆಯಾಗಿದೆ. ದಂತ ವೈದ್ಯಕೀಯ ಕೋರ್ಸಗಳಿಗೂ ಕೂಡ ಸರಕಾರೀ ಶುಲ್ಕ ಮೂವತ್ತೈದು ಸಾವಿರ ಇದ್ದುದು ಈ ವರ್ಷ ನಲವತ್ತೈದು ಸಾವಿರ ಹಾಗೂ ಖಾಸಗೀ ಸೀಟಿಗೆ ಕಳೆದ ವರ್ಷ ಎರಡು ಲಕ್ಷ ಎಪ್ಪತ್ತೈದು ಸಾವಿರ ಇದ್ದುದು ಈ ವರ್ಷಕ್ಕೆ ಮೂರು ಲಕ್ಷ ತೊಂಬತ್ತು ಸಾವಿರಕ್ಕೇರಿದೆ.

ಈ ರೀತಿಯಾಗಿ ಶುಲ್ಕ ಏರಿಕೆ ಮಾಡಿರುವ ಸರಕಾರಕ್ಕೆ ರಾಜ್ಯದಲ್ಲಿ ಸಾಮಾನ್ಯ ಜನರ ಆರ್ಥಿಕಮಟ್ಟದ ಅರಿವಿಲ್ಲವೇ? ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಎದುರಾಗಿ ಜನತೆ ತತ್ತರಿಸಿದ್ದು ಗೊತ್ತಿದ್ದು ಕೂಡ ಶುಲ್ಕ ಏರಿಕೆ ಮಾಡಿದ್ದು ರಾಜ್ಯದ ವಿದ್ಯಾರ್ಥಿಗಳಿಗೆ ಹಾಗೂ ಸಾಮಾನ್ಯ ಜನರಿಗೆ ರಾಜ್ಯದಲ್ಲಿ ಆಡಳಿತ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಸರಕಾರ ಮಾಡಿದ ದ್ರೋಹವಾಗಿದೆ. ಬರಗಾಲದ ಸಮಯದಲ್ಲಿ ಶುಲ್ಕ ಹೆಚ್ಚಳ ಮಾಡಿ ಮತ್ತೆ ರೈತ, ಕೂಲಿಕಾರರನ್ನು ಸಾಲದ ಕೂಪಕ್ಕೆ ತಳ್ಳಲು ಹೊರಟಿರುವುದು ತನ್ನನ್ನು ಆರಿಸಿ ಕಳುಹಿಸಿದ ಜನಾದೇಶಕ್ಕೆ ಮಾಡುತ್ತಿರುವ ಅಪಮಾನವಾಗಿದೆ.

ರಾಜ್ಯದಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಕಾಮೆಡ್-ಕೆ ತಾಳಕ್ಕೆ ತಕ್ಕಂತೆ ಸರಕಾರ ಕುಣಿಯುತ್ತಿರುವುದರಿಂದ, ಪ್ರತಿ ವರ್ಷವು ಶುಲ್ಕ ಹೆಚ್ಚಳವಾಗುತ್ತಿದೆ. ಈ ಪ್ರಮಾಣದ ಹಣವನ್ನು ಕಟ್ಟಲು ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ. ಇದು ಬಡ, ದಲಿತ, ಹಿಂದುಳಿದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣವನ್ನು ದೂರವಾಗಿಸುವ ಹುನ್ನಾರವಲ್ಲದೇ ಇನ್ನೇನು? ಈ ಪ್ರಮಾಣದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹಣ ವಸೂಲಿ ಮಾಡಲು ಸರಕಾರವೇ ಅಧಿಕೃತವಾಗಿ ಅನುಮತಿ ನೀಡುತ್ತಿರುವುದರಿಂದ ವೃತ್ತಿ ಶಿಕ್ಷಣ ಇಂದು ಪ್ರಬಲ ಮಾಫಿಯವಾಗಿ ಬೆಳಯುತ್ತಿದೆ. ಈಗಾಗಲೇ ಏಜೆಂಟರುಗಳ ಮೂಲಕ ಲಕ್ಷಾಂತರ ರೂ ಹಣವನ್ನು ಖಾಸಗಿ ಕಾಲೇಜುಗಳು ಅಕ್ರಮವಾಗಿ ವಸೂಲಿಮಾಡುವ ದಂಧೆಯಲ್ಲಿ ತೊಡಗಿವೆ.

ಸರಕಾರ ಇದಕ್ಕೆ ಕಡಿವಾಣ ಹಾಕಿ, ಬಡ-ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣ ದೊರೆಯುವಂತೆ ಮಾಡುವ ಬದಲಾಗಿ ಸರಕಾರವೇ ಈ ಶಿಕ್ಷಣ ಮಾರಲು ಕುಮ್ಮಕ್ಕು ನೀಡುತ್ತಿದೆ. ಇದು ಗಂಭೀರ ಅಪಾಯಕಾರಿ ನಡೆಯಾಗಿದ್ದು, ತಕ್ಷಣ ಅಂಥಹ ಶಿಕ್ಷಣ ಸಂಸ್ಥೆಗಳ ಹಾಗೂ ಏಜೆಂಟರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು.

ಶುಲ್ಕ ಹೆಚ್ಚಳದ ಪರಿಣಾಮವಾಗಿ ಪ್ರತಿ ವರ್ಷವೂ ಸುಮಾರು 20 ಸಾವಿರಕ್ಕೂ ಹೆಚ್ಚು ಇಂಜನಿಯರಿಂಗ್-ಮೆಡಿಕಲ್ ಸೀಟುಗಳು ಖಾಲಿ ಉಳಿಯುತ್ತಿವೆ. ಈಗ ಮತ್ತೆ ಶುಲ್ಕ ಏರಿಸಲು ಹೊರಟಿರುವ ಸರಕಾರದ ನಿರ್ಧಾರ ಭಾರೀ ಅಪಾಯಕಾರಿಯಾಗಿದೆ. ಸರಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ಒತ್ತಡಕ್ಕೆ ಮಣಿಯುವ ಬದಲು, ಸಾಂವಿಧಾನಿಕ ಇಚ್ಛಾಶಕ್ತಿಯನ್ನು ಪ್ರದರ್ಶಿಸಿ, ವಿದ್ಯಾರ್ಥಿಗಳ ಹಿತ ಕಾಪಾಡಲು ಮುಂದಾಗಬೇಕಿದೆ. ಹಾಗೂ ಪ್ರತಿ ಸಾರಿ ಹೊಸ ಖಾಸಗೀ ಕಾಲೇಜುಗಳಿಗೆ ಅನುಮತಿ ಕೊಡುವುದನ್ನು ನಿಲ್ಲಿಸಬೇಕು. ಈಗಿರುವ ಎಲ್ಲಾ ಸರ್ಕಾರಿ ಕಾಲೇಜುಗಳಿಗೆ ಅತ್ಯಾಧುನಿಕ ಮೂಲಸೌಕರ್ಯಗಳನ್ನು ಒದಗಿಸುವುದು ತುರ್ತಾಗಿ ಆಗಬೇಕಿದೆ.

ಇನ್ನು ಸೀಟು ಹಂಚಿಕೆಯ ವಿಷಯದಲ್ಲಿಯೂ ರಾಜ್ಯ ಸರಕಾರ ಖಾಸಗೀಯವರಿಗೆ ಹೆಚ್ಚೆಚ್ಚು ಅನುಕೂಲ ಕಲ್ಪಿಸಿ ಕೊಡುತ್ತಿದೆ. ಅವರಿಗೆ ಹೆಚ್ಚಿನ ಸೀಟುಗಳನ್ನು ಬಿಟ್ಟುಕೊಡುತ್ತಿರುವುದರಿಂದಾಗಿ ವಿದ್ಯಾರ್ಥಿಗಳಿಗೆ ದುಬಾರಿ ಶುಲ್ಕ ನೀಡಿ ಅಧ್ಯಯನ ನಡೆಸಲು ಸಾಧ್ಯವಾಗುತ್ತಿಲ್ಲ. ಇದು ಕಣ್ಣಿಗೆ ರಾಚುತ್ತಿರುವ ಸತ್ಯ. ರಾಜ್ಯ ಸರಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳ ಸಂಖ್ಯೆ ವೆದ್ಯಕೀಯದಲ್ಲಿ ಶೇ. 60ರಷ್ಟು, ದಂತ ವೈದ್ಯಕೀಯದಲ್ಲಿ ಶೇ. 60ರಷ್ಟು ಎಂದು ಈ ಹಿಂದೆ ನಿಗದಿ ಮಾಡಿತ್ತು. ಆದ-ರೆ ಖಾಸಗಿ ಲಾಬಿಗೆ ಮಣಿದು, ಇದರ ಪ್ರಮಾಣ ಈಗ ವೈದ್ಯಕೀಯ ಶೇ. 40ಕ್ಕೆ, ದಂತ ವೈದ್ಯಕೀಯ ಶೇ. 35ಕ್ಕೆ ಇಳಿದಿದೆ. ಇದು ಸರ್ಕಾರದ ವಿದ್ಯಾರ್ಥಿ ವಿರೋಧಿ ಹಾಗೂ ವೃತ್ತಿಶಿಕ್ಷಣವನ್ನು ಮಾರುಕಟ್ಟೆಯ ಸರಕನ್ನಾಗಿಸುವ ಧೋರಣೆಯಾಗಿದೆ.

ಸೀಟುಗಳ ಹಂಚಿಕೆಯ ವಿಷಯದಲ್ಲಿ ಶೇ.75:ಶೇ.25 (ಸರಕಾರಿ:ಖಾಸಗೀ) ಅನುಪಾತದಂತೆ ಕ್ರಮ ಅನುಸರಣೆ ಮಾಡಬೇಕಿದೆ. ವೃತ್ತಿಶಿಕ್ಷಣದ ವಿಷಯದಲ್ಲಿ ಹಿಂದಿನ ಬಿಜೆಪಿ ಸರಕಾರವೂ ಕೂಡ ಇದೇ ನಡೆಯನ್ನು ಅನುಸರಿಸಿತ್ತು. ಶಿಕ್ಷಣದ ವಿಷಯದಲ್ಲಿ ಈಗಿನ ಇವರೆಡೂ ಪಕ್ಷಗಳ ನೀತಿ ಒಂದೇ-ಶಿಕ್ಷಣವನ್ನು ಉಳ್ಳವರು ಖರೀದಿಸಬಹುದಾದ ಸರಕಾಗಿ ಮಾಡುವುದು. ಇಸಕ್ಕೆ ವಿದ್ಯಾರ್ಥಿ ಸಮುದಾಯ ಬಲವಾದ ಪ್ರತಿರೋಧವನ್ನು ತೋರಬೇಕಾಗಿದೆ, ಎಲ್ಲರಿಗೂ ವೃತ್ತಿಶಿಕ್ಷಣದ ಅವಕಾಶ ಲಭ್ಯವಾಗುವಂತಹ ವಾತಾವರಣಸ ನಿರ್ಮಾಣವಾಗುವಂತೆ ಸರಕಾರದ ನೀತಿಗಳಲ್ಲಿ ಬದಲಾವಣೆ ತರಲು ತುರ್ತಾಗಿ ಹೋರಾಟದ ಕಾರ್ಯಕ್ರಮ ರೂಪಸಿಬೇಕಾಗಿದೆ, ಮತ್ತು ವಿದ್ಯಾರ್ಥಿಗಳ ಈ ಹೋರಾಟಕ್ಕೆ ಪ್ರಜಾಪ್ರಭುತ್ವವಾದಿ ಶಕ್ತಿಗಳೆಲ್ಲವೂ ಬೆಂಬಲ ತೋರುವುದು ಕೂಡ ಅತ್ಯಂತ ಅಗತ್

ಈಗಾಗಲೇ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯು ಈ ಶುಲ್ಕ ಹೆಚ್ಚಳದ ವಿರುದ್ಧ ರಾಜ್ಯವ್ಯಾಪಿ ಹೋರಾಟಕ್ಕೆ ಕರೆ ನೀಡಿದೆ. ಹಾಗೂ ಬೆಂಗಳೂರಿನ ಸಿ.ಇ.ಟಿ ಸೆಲ್ ಎದುರು ರಾಜ್ಯ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗಿದೆ. ಇದು ಇನ್ನಷ್ಟು ತೀವ್ರತೆಯನ್ನು ಪಡೆಯಬೇಕಿದೆ.

# ಕನಿಷ್ಟ ಕೂಲಿ ನಿಗದಿಯಲ್ಲಿ ಕಾನೂನಿನ ವಿಧಿವತ್ ಪ್ರಕ್ರಿಯೆಯನ್ನು ಕಡೆಗಣಿಸಿರುವುದಕ್ಕೆ ಕಾರ್ಮಿಕ ಸಂಘಗಳ ಆಕ್ಷೇಪ

ಕನಿಷ್ಟ ಕೂಲಿಗಳ ಸಲಹಾ ಸಮಿತಿ 23 ಉದ್ಯೋಗಗಳಲ್ಲಿ ರೂ.10500 ಕನಿಷ್ಟ ಕೂಲಿಗಳನ್ನು ಶಿಫಾರಸು ಮಾಡಿರುವುದರ ಅಂತಿಮ ಅಧಿಸೂಚನೆ ಹೊರಡಿಸುವ ಬದಲು ರಾಜ್ಯ ಸರಕಾರ ಜೂನ್29-30ರಂದು ಈ ಬಗ್ಗೆಯೇ ಈ 23 ಉದ್ಯೋಗಗಳಲ್ಲಿನ ಉದ್ಯಮಿಗಳು/ ಮಾಲಕರು ಮತ್ತು ಕಾರ್ಮಿಕ ಸಂಘಗಳ ಒಂದು ವಿಶಾಲವಾದ ಸಮಾಲೋಚನಾ ಸಭೆಯನ್ನು ಕರೆದಿದೆ. ಇದಕ್ಕೆ ಕರ್ನಾಟಕ ಕನಿಷ್ಟ ಕೂಲಿ ಸಲಹಾ ಮಂಡಳಿಯಲ್ಲಿರುವ ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ ಮತ್ತು ಬಿಎಂಎಸ್ ಆಕ್ಷೇಪ ವ್ಯಕ್ತಪಡಿಸಿದ್ದು ಈ ಮೂಲಕ ಸರಕಾರ ವಿಧಿವತ್ತಾದ ಕಾನೂನು ಪ್ರಕ್ರಿಯೆಯನ್ನು ಕಡೆಗಣಿಸುತ್ತಿದೆಯೇ ಎಂಬ ಅನುಮಾನ ಉಂಟಾಗಿದೆ ಎಂದು ಹೇಳಿವೆ.

ಈ ಬಗ್ಗೆ ಕಾರ್ಮಿಕ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯವರಿಗೆ ಈ ಬಗ್ಗೆ ಈ ಕಾರ್ಮಿಕ ಸಂಘಟನೆಗಳು ಪತ್ರ ಬರೆದು ಕಾನೂನಿನ ವಿಧಿವತ್ ಪ್ರಕ್ರಿಯೆಯನ್ನು ಕಡೆಗಣಿಸಿರುವ ಈ ಸಂವಿಧಾನೇತರ ಚಟುವಟಿಕೆಯನ್ನು ಬಲವಾಗಿ ಪ್ರತಿಭಟಿಸಿವೆ, ಮತ್ತು 23 ಉದ್ಯೋಗಗಳಿಗೆ ಕನಿಷ್ಟ ಕೂಲಿಗಳ ಸಲಹಾ ಸಮಿತಿಯ ಶಿಫಾರಸಿನಂತೆ ಅಂತಿಮ ಅಧಿಸೂಚನೆಗಳನ್ನು ಪ್ರಕಟಿಸಲು ಮುಂದಾಗುವಂತೆ ಕೋರಿವೆ.

ಕನಿಷ್ಟ ಕೂಲಿ ನಿಗದಿಯ ವಿಧಾನವೆಂದರೆ ಅದನ್ನು ನಿಯಮ5(1)(ಎ) ಸಮಿತಿಯ ಅಡಿಯಲ್ಲಿ ಅಥವ ಕರಡು/ಆಕ್ಷೇಪ/ಕನಿಷ್ಟ ಕೂಲಿ ಸಲಹಾ ಸಮಿತಿ ಶಿಫಾರಸುಗಳ ವಿಧಾನಗಳ ಮೂಲಕ ಮಾತ್ರವೇ ಮಾಡಬೇಕೇ ಹೊರತು ಈಗ ಪ್ರಯತ್ನಿಸುತ್ತಿರುವಂತೆ ಬೇರಾವ ವಿಧಾನದಿಂದಲೂ ಅಲ್ಲ.

ಕಾರ್ಮಿಕ ಇಲಾಖೆ 2014ರಲ್ಲಿ ಒಂದು ವೈಜ್ಞಾನಿಕ ಅಧ್ಯಯನವನ್ನು ನಡೆಸಿ ಶಾಂತಪ್ಪ ಸಮಿತಿ ಶಿಫಾರಸುಗಳು ಮತ್ತು ರಪ್ತಕೊಸ್ ಬ್ರೆಕ್ಟ್ ಕೇಸಿನಲ್ಲಿ ಸುಪ್ರಿಂ ಕೋರ್ಟ್ ತೀರ್ಪಿನ ಪ್ರಕಾರ ಬದುಕುಳಿಯುವ ಮಟ್ಟದ ಕೂಲಿಯನ್ನು ನಿಗದಿ ಮಾಡಲು ಒಂದು ಸೂತ್ರವನ್ನು ವಿಕಾಸಗೊಳಿಸಿ, ರೂ.10500 ಎಂದು ನಿಗದಿ ಮಾಡಿದೆ. ನಾವು, ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು 7ನೇ ವೇತನ ಆಯೋಗ ಶಿಪಾರಸು ಮಾಡಿರುವಂತೆ ರೂ.18,000 ಕನಿಷ್ಟ ಕೂಲಿಯನ್ನು ನಿಗದಿ ಮಾಡಬೇಕೆಂದು ಬಯಸಿದ್ದರೂ, ಎಲ್ಲರೂ ಸರಕಾರದ ಪ್ರತಿನಿಧಿಗಳ ನಿಲುವನ್ನು ಬೆಂಬಲಿಸಿದೆವು, ಮತ್ತು 23 ಉದ್ದಿಮೆಗಳು/ ಉದ್ಯೋಗಗಳಲ್ಲಿ ರೂ.10500 ಕನಿಷ್ಟ ಕೂಲಿಯೆಂದು ಶಿಫಾರಸು ಮಾಡಲು ನಿರ್ಧರಿಸಿದೆವು ಎಂದು ಕಾರ್ಮಿಕ ಸಂಘಟನೆಗಳು ಪತ್ರದಲ್ಲಿ ನೆನಪಿಸಿವೆ.

ಇದುವರೆಗೆ ಸರಕಾರ ಕನಿಷ್ಟ ಕೂಲಿ ಸಲಹಾ ಸಮಿತಿಯ ಶಿಫಾರಸುಗಳನ್ನು ಸ್ವೀಕರಿಸುತ್ತಿತ್ತು ಮತ್ತು ಅಂತಿಮ ಅಧಿಸೂಚನೆ ಪ್ರಕಟಿಸುತ್ತಿತ್ತು. ಈಗ, ಸರಕಾರ ಕಾನೂನಿನ ವಿಧಿವತ್ ಪ್ರಕ್ರಿಯೆಯನ್ನು ಕಡೆಗಣಿಸಿ ಇಂತಹ ಒಂದು ವಿಶಾಲ ಸಭೆಯನ್ನು ಏರ್ಪಡಿಸುತ್ತಿರುವುದು ನಮಗೆ ಕಾಣ ಬರುತ್ತಿದೆ. ಈ ಹಂತದಲ್ಲಿ ಪ್ರತಿಯೊಂದು ಕಾರ್ಖಾನೆಯ ಮಾಲಕರು ಮತ್ತು ಅಲ್ಲಿನ ಕಾರ್ಮಿಕ ಸಂಘವನ್ನು ಕರೆಯುವುದೆಂದರೆ ಅದು ಕನಿಷ್ಟ ಕೂಲಿ ನಿಗದಿಯ ಸಾರ್ವತ್ರಿಕ ಸ್ವರೂಪವನ್ನು ಕೈಬಿಟ್ಟು ಕಾರ್ಖಾನೆವಾರು/ಉದ್ದಿಮೆವಾರು ಮಾತುಕತೆಗಳನ್ನು/ ರಾಜಿ ಸಂಧಾನಗಳನ್ನು ನಡೆಸಿದಂತಾಗುತ್ತದೆ ಎಂದು ಕಾರ್ಮಿಕ ಸಂಘಟನೆಗಳು ತಮ್ಮ ಪತ್ರದಲ್ಲಿ ಅಭಿಪ್ರಾಯ ಪಟ್ಟಿವೆ.

ಸಾಮಾನ್ಯವಾಗಿ ಕಾರ್ಮಿಕ ವಿಷಯಗಳನ್ನು ಕಾರ್ಮಿಕ ಆಯುಕ್ತರು ಮತ್ತು ಅವರ ಕೈಕೆಳಗೆ ಕೆಲಸ ಮಾಡುವ ಆಧಿಕಾರಿಗಳು ರಾಜ್ಯ ಸರಕಾರದ ಕಾರ್ಮಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ನೀಡಿರುವ ಅಧಿಕಾರದಂತೆ ನಿರ್ಧರಿಸುತ್ತಾರೆ. ಮೊತ್ತಮೊದಲ ಬಾರಿಗೆ ಸಲಹಾಗಾರರು ಎಂಬ ಒಂದು ಸಂವಿಧಾನೇತರ ಹುದ್ದೆಯನ್ನು ನಿರ್ಮಿಸಲಾಗಿದೆ, ಅದರ ಚಟುವಟಿಕೆಗಳಲ್ಲಿ ಪ್ರಸಕ್ತ ಸಮಾಲೋಚನೆಯೂ ಸೇರಿದೆ ಎಂದು ಅವು ಹೇಳಿವೆ.

# ಕೊಬ್ಬರಿಗೆ 15 ಸಾವಿರ ಬೆಂಬಲ ಬೆಲೆ ನಿಗದಿ ಮಾಡಿ

## ತುಮಕೂರು ತೆಂಗು ಬೆಳೆಗಾರರ ಆಗ್ರಹ

ತುಮಕೂರು ಜಿಲ್ಲೆ ಮತ್ತು ರಾಜ್ಯದಾದ್ಯಂತ ಕೊಬ್ಬರಿ ಬೆಲೆ ದಿಡೀರ್ ಕುಸಿತದಿಂದಾಗಿ ಕೊಬ್ಬರಿ ಮತ್ತು ತೆಂಗು ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಗು-ರಿಯಾಗಿದ್ದು ಸರ್ಕಾರಗಳು ಈ ಕೂಡಲೇ ಮಧ್ಯ ಪ್ರವೇಶಿಸಿ ರೈತರಿಂದ ನೇರ ಖರೀದಿಯ ಜೊತೆ-ಗೆ ಕನಿಷ್ಠ 15 ಸಾವಿರ ಬೆಂಬಲ ಬೆಲೆ ನಿಗದಿ ಮಾಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ತುಮಕೂರು ಜಿಲ್ಲಾ ಸಂಚಾಲಕರಾದ ಸಿ.ಅಜ್ಜಪ್ಪನವರು ಆಗ್ರಹಿಸಿದ್ದಾರೆ.

ಕೈಸಾಲ ಮಾಡಿ ಕೊಬ್ಬರಿ ಬೆಳದ ರೈತರಿಗೆ ಸರಿಯಾದ ಬೆಲೆ ಸಿಗದೆ ಸಾಲದ ಸುಳಿಯಿಂದ ರೈತರ ಕುಟುಂಬಗಳನ್ನು ಶಾಶ್ವತವಾದ ನಿದ್ದೆಗೆ ಕೇಂದ್ರ-ರಾಜ್ಯ ಸರ್ಕಾರಗಳು ದೂಡುತ್ತಿವೆ ಎಂದೂ, ಸರ್ಕಾರದ ಆನ್‌ಲೈನ್ ವ್ಯಾಪಾರವೂ ಸಹ ಬಂಡವಾಳಗಾರರಿಗೆ ರವಾನೆದಾರಿಗೆ ಮಾತ್ರ ಅನುಕೂಲವಾಗಿದ್ದು ರೈತರಿಗೆ ಯಾವುದೇ ರೀತಿಯ ಪ್ರಯೋಜನವಿಲ್ಲದಂತಾಗಿದೆ, ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಕೂಡಲೇ ತೆಂಗು ಬೆಳೆಗಾರರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು ಮತ್ತು ಉತ್ಪಾದನೆಗಾಗಿ ಪಡೆದಿರುವ ಸಾಲಗಳನ್ನು ಮನ್ನಾ ಮಾಡುವುದರ ಜೊತೆಗೆ ಕೊಬ್ಬರಿಗೆ 15 ಸಾವಿರ ಬೆಂಬಲ ಬೆಲೆ ನಿಗದಿಮಾಡಬೇಕು ಎಂದು ಮತ್ತೊಬ್ಬ ಜಿಲ್ಲಾ ಸಹ ಸಂಚಾಲಕರಾದ ಎಂ. ನೌಷಾದ್ ಸೆಹಗನ್ ಈ ಆಗ್ರಹಕ್ಕೆ ದನಿಗೂಡಿಸಿದ್ದಾರೆ.



**ಸೆಪ್ಟೆಂಬರ್ 2, 2016**

ಎಸ್.ವರಲಕ್ಷ್ಮಿ

# ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಾಕೆ?

**ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಸರಕಾರ ಎರಡು ವರ್ಷಗಳ ಆಳ್ವಿಕೆಯ ಸಾಧನೆಗಳನ್ನು ಅದ್ದೂರಿಯ ಕಾರ್ಯಕ್ರಮಗಳು, ಟಿವಿ, ಪತ್ರಿಕಾ ಜಾಹೀರಾತುಗಳ ಮೂಲಕ ಜನಗಳಿಗೆ 'ತಲುಪಿಸಲು' ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ, ಆ ಜನಸಾಮಾನ್ಯರ ಒಂದು ಪ್ರಮುಖ ವಿಭಾಗ, ದೇಶದ ಕೋಟ್ಯಂತರ ಕಾರ್ಮಿಕರು ಮತ್ತು ನೌಕರರು ಈ ಸಪ್ಟಂಬರ್ 2ರಂದು ಮತ್ತೆ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ಇಷ್ಟು ದೊಡ್ಡ ಜನವಿಭಾಗವೊಂದು ಏಕೆ ಮತ್ತೆ ಹೋರಾಟದ ಕಣಕ್ಕಿಳಿದಿದೆ? ಈ ಸರಕಾರದಿಂದ ಅವರು ಏನನ್ನು ಕೇಳುತ್ತಿದ್ದಾರೆ? ಈ ವಾರದಿಂದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿಯವರು ಈ ಮಹಾಮುಷ್ಕರದ ಬೇಡಿಕೆಗಳ ಬಗ್ಗೆ ನಮ್ಮ ಓದುಗರಿಗೆ ತಿಳಿಸುತ್ತಿದ್ದಾರೆ.**

**ಕಳೆದ ಸಂಚಿಕೆಯಲ್ಲಿ ರೂ.18,000 ಕನಿಷ್ಟ ಕೂಲಿಯ ಬೇಡಿಕೆಯೊಂದಿಗೆ ಅವರು ಆರಂಭಿಸಿದ್ದಾರೆ. ಈ ಮಹಾ ಮುಷ್ಕರ ಎತ್ತಿರುವ ಇನ್ನೊಂದು ಮಹತ್ವದ ಪ್ರಶ್ನೆಯೆಂದರೆ ಹೆಚ್ಚುತ್ತಿರುವ ನಿರುದ್ಯೋಗದ್ದು. ನಿರುದ್ಯೋಗಿಗಳು ದೇಶದ ಕಾರ್ಮಿಕ ವರ್ಗದ ಅವಿಭಾಜ್ಯ ಅಂಗ. ಅವರನ್ನು ದೇಶದ ಆರ್ಥಿಕ ವ್ಯವಸ್ಥೆ ಉತ್ಪಾದಕ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಮಾಡಿದೆ. ಇಂತಹ ಧೋರಣೆಗಳ ವಿರುದ್ಧ, ಉದ್ಯೋಗಾವಕಾಶಗಳ ನಿರ್ಮಾಣಕ್ಕಾಗಿ ಹೋರಾಡುವುದು ದೇಶದ ಒಟ್ಟು ಹಿತದೃಷ್ಟಿಯಿಂದ ಕಾರ್ಮಿಕ ಆಂದೋಲನದ ಕರ್ತವ್ಯವಾಗಿದೆ. ಈ ಸಂಚಿಕೆಯಲ್ಲಿ ಲೇಖಕರು ಸಪ್ಟಂಬರ್2 ರ ಸಾರ್ವತ್ರಿಕ ಮುಷ್ಕರದ ಈ ಬೇಡಿಕೆಯನ್ನು ಪರಿಶೀಲಿಸುತ್ತಾರೆ**

## 2 ನಿರುದ್ಯೋಗ ತಡೆಗಟ್ಟಿ ಉದ್ಯೋಗಗಳನ್ನು ಸೃಷ್ಟಿಸಲು ನಿರ್ದಿಷ್ಠ ಕ್ರಮಗಳನ್ನು ಕೈಗೊಳ್ಳಬೇಕು

ವರ್ಷಕ್ಕೆ 2.8 ಕೋಟಿ ಉದ್ಯೋಗ ಒದಗಿಸುತ್ತೇನೆ ಎಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ ದೇಶದ ಪ್ರಧಾನಿಗಳು ಉದ್ಯೋಗ ರಹಿತ ಬೆಳವಣಿಗೆಯನ್ನು ಬದಲಿಸಿ ಉದ್ಯೋಗಗಳನ್ನು ಸೃಷ್ಠಿಸಲು ಪ್ರಯತ್ನಿಸುತ್ತಿದ್ದಾರೆಯೇ? ಖಂಡಿತಾ ಇಲ್ಲ. ಸಿಐಟಿಯುವಿನ ಸಂಸ್ಥಾಪಕ ಅಧ್ಯಕ್ಷರಾದ ಕಾಂ. ಬಿ.ಟಿ. ರಣದಿವೆರವರು ವ್ಯಾಖ್ಯಾನಿಸಿದಂತೆ "ಎಲ್ಲಾ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ನಿಜವಾದ ಆಧಾರವಾಗಿರುವ ಹಕ್ಕು ಕೆಲಸದ ಹಕ್ಕು, ಈ ಹಕ್ಕು ಇಲ್ಲದೆ ಇದ್ದಾಗ ಹಲವು ಪ್ರಜಾಸತ್ತಾತ್ಮಕ ಹಕ್ಕುಗಳು ಕೇವಲ ಸಾಂಕೇತಿಕ ಅಲಂಕಾರಿಕ ಹಕ್ಕುಗಳಷ್ಟೇ." ಈ ದೃಷ್ಠಿಯಿಂದ ಹಿಂದಿನಿಂದಲೂ ಕಾರ್ಮಿಕ ಚಳುವಳಿಗಳು ನಿರುದ್ಯೋಗ ತಡೆಗಟ್ಟುವ ಬೇಡಿಕೆಯನ್ನು ಮುಂದಿಡುತ್ತಾ ಬಂದಿವೆ.

2015–16ರಲ್ಲಿ ಜಿಡಿಪಿಯ ಬೆಳವಣಿಗೆ ದರ 7.5% ರಷ್ಟು ಎಂದು ಸರಕಾರವು ಹೇಳುತ್ತದೆ. ಆದರೆ ಉದ್ಯೋಗಾವಕಾಶಗಳಲ್ಲಾ ಗಲೀ, ವೇತನ ಮತ್ತು ಸಾಮಾಜಿಕ ಸೌಲಭ್ಯಗಳಲ್ಲಾಗಲೀ, ಉದ್ಯೋಗ ಸೃಷ್ಠಿಯಲ್ಲಿನ ಹೂಡಿಕೆಗಳಲ್ಲಾಗಲೀ ಹೆಚ್ಚಳವಾಗಿಲ್ಲ. ಆದ್ದರಿಂದ ಸರಕಾರದ ಹೇಳಿಕೆಯನ್ನೇ ಪ್ರಶ್ನಿಸುವಂತಾಗಿದೆ. ಉದ್ಯೋಗಾವಕಾಶಗಳು ನಿರ್ಮಾಣಗೊಳ್ಳುವ ಬದಲು, ಸೆಪ್ಟಂಬರ್ 2015ರಿಂದ ಡಿಸೆಂಬರ್ 2015ರ ವರೆಗಿನ ತ್ರೈಮಾಸಿಕ ಅವಧಿಯಲ್ಲಿ ಪ್ರಮುಖ ಕೈಗಾರಿಕೆಗಳಾದ ಚರ್ಮದ ಉದ್ಯಮದಲ್ಲಿ 8000, ಲೋಹಗಳ ಉದ್ಯಮದಲ್ಲಿ 12000, ವಾಹನ ತಯಾರಿಕೆ ಕ್ಷೇತ್ರದಲ್ಲಿ 13000, ವಜ್ರ ಮತ್ತು ಆಭರಣ ಕ್ಷೇತ್ರದಲ್ಲಿ 19000, ಸಾರಿಗೆ ಕ್ಷೇತ್ರದಲ್ಲಿ 4000, ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ 14000, ಕೈಮಗ್ಗ ಮತ್ತು ವಿದ್ಯತ್ ಮಗ್ಗಗಳ 11000 ಉದ್ಯೋಗಗಳು ಕಡಿತಗೊಂಡಿವೆ.

ಬಂಡವಾಳಶಾಹಿಯ ಉತ್ಪಾದನಾ ವೆಚ್ಚ ಕಡಿಮೆ ಮಾಡಲಿಕ್ಕಾಗಿ ತಂತ್ರಜ್ಞಾನದ ಫಲವಾಗಿ ರೋಬೋಗಳು ಹುಟ್ಟಿಕೊಂಡಿವೆ. ಸ್ಮಾರ್ಟ್ ಫೋನ್‌ಗಳನ್ನು ತಯಾರಿಸುವ ಆ್ಯಪಲ್, ಸ್ಯಾಮಸಂಗ್, ಮೈಕ್ರೋಸಾಪ್ಟ್ ಮತ್ತಿತರ ಮೊಬೈಲ್ ಕಂಪನಿಗಳಿಗೆ ಎಲೆಕ್ಟ್ರಾನಿಕ್ ಸಾಧನಗಳನ್ನು ಉತ್ಪಾದಿಸುತ್ತಿರುವ ಪಾಕ್ಸಖಾನ್ ಕಂಪನಿಯಲ್ಲಿ 1 ಲಕ್ಷ10 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈ ರೋಬೋಗಳನ್ನು ಬಳಕೆ ಮಾಡುತ್ತಿರುವುದರಿಂದ 60 ಸಾವಿರ ಕಾರ್ಮಿಕರನ್ನು ಕೆಲಸದಿಂದ ತೆಗೆಯಲಾಗುತ್ತಿದೆ.

ಅಮೆಜಾನ್ ಕಂಪನಿಯಲ್ಲಿ ಆರ್ಡರ್‌ಗಳನ್ನು ತೆಗೆದುಕೊಳ್ಳುವುದು ಕೂಡ ಇಂತಹ ರೋಬೋಗಳೇ.

ಕಾರುಗಳ ಉತ್ಪಾದನಾ ಘಟಕಗಳಲ್ಲೂ ರೋಬೋಗಳ ಬಳಕೆ ಹೆಚ್ಚುತ್ತದೆ. ಕೇಂದ್ರ ಸರ್ಕಾರದ HRS ಪತ್ರಗಳನ್ನು ವಿಂಗಡಿಸಲು, ಬ್ಯಾಂಕಿನಲ್ಲಿ ನೋಟುಗಳನ್ನು ಲೆಕ್ಕ ಹಾಕುವುದು ಅತ್ಯುನ್ನತ ತಂತ್ರಜ್ಞಾನದ ಮಿಷನಗಳೇ.

ಉದಾರೀಕರಣ ನೀತಿಗಳಿಂದ ಹಲವು ಗೃಹಾಧಾರಿತ ಮತ್ತು ಅಸಂಘಟಿತ ಕೈಗಾರಿಕೆಗಳಾದ ಕೈಮಗ್ಗ, ಹಂಚು, ಕುಂಬಾರಿಕೆ, ಮರಗೆಲಸ, ಅಕ್ಕಸಾಲಿಗರಂತಹ ಕೆಲಸಗಳು ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಕಣ್ಮರೆಯಾಗುತ್ತಿವೆ. ಕ್ಯಾನ್ಸರ್ ತಡೆಗಟ್ಟಲು ತಂಬಾಕಿನ ಮೇಲೆ ವಿಶ್ವಸಂಸ್ಥೆ ನಿಷೇಧ ಹೇರಿದ ಪರಿಣಾಮ ತಂಬಾಕಿನ ಬೆಳೆಗಾರರು, ತಂಬಾಕು ಎಲೆಯನ್ನು ಮಾರ್ಪಡಿಸಿ ಅದರಿಂದ ಬೇರೆ ಪದಾರ್ಥಗಳನ್ನು ತಯಾರು ಮಾಡುವವರು ಕೋಟಿಗಟ್ಟಲೆ ಬೀಡಿ ಕಾರ್ಮಿಕರು ಸಂಪೂರ್ಣವಾಗಿ ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ.

ಸರ್ಕಾರಿ ಸ್ಕೀಮಗಳನ್ನೊದಗಿಸಲು ಇದ್ದ 73 ಕೇಂದ್ರ ಸರ್ಕಾರದ ಯೋಜನೆಗಳನ್ನು 33 ಯೋಜನೆಗಳಿಗೆ ವಿಲೀನಗೊಳಿಸಿದ್ದರಿಂದ ಲಕ್ಷಾಂತರ ದುಡಿಮೆಗಾರರು ಕೆಲಸ ಕಳೆದು ಕೊಂಡಿದ್ದಾರೆ.

ಕೃಷಿ ಬಿಕ್ಕಟ್ಟಿನಿಂದ ಕೋಟಿಗಟ್ಟಲೆ ಗ್ರಾಮಾಂತರ ಜನತೆ ನಿರುದ್ಯೋಗಿಗಳಾಗಿ ಮಾರ್ಪಾಡಾಗುತ್ತಿದ್ದಾರೆ.

ಸಾರ್ವಜನಿಕ ಕೈಗಾರಿಕೆಗಳನ್ನು ರೋಗಗ್ರಸ್ಥ ಎಂದು ಮುಟ್ಟುತ್ತಿರುವುದರಿಂದ ಲಕ್ಷಾಂತರ ಉದ್ಯೋಗಗಳು ಕಡಿತಗೊಳ್ಳುತ್ತಿವೆ. ಐಟಿಐ, ಹೆಚ್‌ಎಂಟಿ, ಕೆಜಿಎಫ್ ಚಿನ್ನದ ಗಣಿ, ಬಿನ್ನಿಮಿಲ್, ಗೋಖಾಕ್‌ಮಿಲ್, ಮಿನರ್ವಮಿಲ್, ರಾಜಾ ಮಿಲ್ ಮುಂತಾದ ಮಿಲ್‌ಗಳು, ಸಕ್ಕರೆ ಕಾರ್ಖಾನೆಗಳು ಹೀಗೆ ಇದಕ್ಕೆ ಉದಾಹರಣೆಗಳು ಹಲವು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವೆಚ್ಚ ಹೆಚ್ಚುತ್ತಿದೆ ಎಂಬ ನೆಪಹೂಡಿ ಮಾಡುತ್ತಿರುವ ಇಲಾಖೆಗಳ ವಿಲೀನ ಹುದ್ದೆಗಳ ಕಡಿತದಿಂದಾಗಿ ಲಕ್ಷಗಟ್ಟಲೆ ಪ್ರಮಾಣದಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಲಾಗಿದೆ.

ಅಧಿಕೃತ ಅಂಕಿ ಅಂಶಗಳ ಪ್ರಕಾರ ಭಾರತದ ನಿರುದ್ಯೋಗದ ದರ 2001 ರಲ್ಲಿದ್ದ 6.8%ದಿಂದ 2011 ರಲ್ಲಿ 9.6% ಕ್ಕೆ ಏರಿದೆ. ನಿಜವಾದ ದರ ಇನ್ನೂ ಹೆಚ್ಚಿದೆ. ಪದವಿ, ಉನ್ನತ ಪದವಿ ಹಾಗೂ ತಾಂತ್ರಿಕ ಪದವಿಗಳನ್ನು ಪಡೆದ 10 ಲಕ್ಷ ಭಾರತೀಯರು ಉದ್ಯೋಗದ ಹುಡುಕಾಟದಲ್ಲಿದ್ದಾರೆ. ಭಾರತದಲ್ಲಿ ಉನ್ನತ ಹಂತದ ಶಿಕ್ಷಣ ಪಡೆದ 15% ರಷ್ಟು ಜನ ಉದ್ಯೋಗದ ನಿರೀಕ್ಷೆಯಲ್ಲಿದ್ದಾರೆ.

ಹಣಕಾಸು ಬಂಡವಾಳ ನಡೆಸಿರುವ ಸಾಮ್ರಾಜ್ಯಶಾಹಿ ಜಾಗತೀಕರಣದ ಆಕ್ರಮಣ ಹಾಗೂ ಅಭಿವೃಧಿ ಹೊಂದುತ್ತಿರುವ ದೇಶಗಳ ಬಂಡವಾಳಶಾಹಿ ವರ್ಗದ ಸರಕಾರಗಳು ಅನುಸರಿಸುತ್ತಿರುವ ಜನ ವಿರೋಧಿ ಧೋರಣೆಗಳಿಂದಾಗಿ ನಿರುದ್ಯೋಗದ ಬಾಧೆ ನಮ್ಮ ದೇಶದಲ್ಲಿ ಅತ್ಯಂತ ಗಂಭೀರ ಮಟ್ಟ ತಲುಪಿದೆ. ಇವು ನವ–ಉದಾರವಾದದ ಸಿದ್ಧಾಂತದ ಅಡಿಯಲ್ಲಿರುವ ಐಎಂಎಫ್–ವಿಶ್ವಬ್ಯಾಂಕ್ ನಿರ್ದೇಶಿತ ಧೋರಣೆಗಳು ಎಂಬುದನ್ನು ಅರ್ಥಮಾಡಿಕೊಳ್ಳುವುದು ಅತ್ಯವಶ್ಯಕ. ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು ಸದಾ ತೀವ್ರಗೊಳ್ಳುತ್ತಿರುವುದು ನಿರುದ್ಯೋಗ ಹಾಗೂ ಅರೆ–ಉದ್ಯೋಗದ ಬೆಳವಣಿಗೆ ಕ್ಯಾನ್ಸರ್ ರೀತಿಯಲ್ಲಿ ಉಲ್ಬಣಗೊಳ್ಳಲು ಕಾರಣವಾಗಿ ಒಂದು ಶಾಶ್ವತ ವ್ಯಾಧಿಯ ರೂಪ ಪಡೆದಿದೆ. ಈ ಪರಿಸ್ಥಿತಿ ಕಾರ್ಮಿಕ ಚಳುವಳಿಗೂ ಗಂಭೀರ ಸವಾಲನ್ನು ಒಡ್ಡಿದೆ.

'ಉದ್ಯೋಗ ರಹಿತ ಬೆಳವಣಿಗೆ'ಯ ಅಪಾಯಕಾರಿ ಆಟವನ್ನು ಆಡುತ್ತಿರುವ ನಡೆಸುತ್ತಿರುವ ಬಹುರಾಷ್ಟ್ರೀಯ ಕಂಪನಿ(ಎಂಎನ್‌ಸಿ)ಗಳಿಗೆ ಹಾಗೂ ಅಂತರರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಕೇಂದ್ರದ ನರೇಂದ್ರ ಮೋದಿ ಸರ್ಕಾರ ಸಂಪೂರ್ಣವಾಗಿ ಶರಣಾಗಿದೆ. ಹಾಗಾಗಿ, ಈಗಾಗಲೇ ತುಂಬಾ ಗಂಭೀರ ಸ್ವರೂಪವನ್ನು ಪಡೆದುಕೊಂಡಿರುವ ದೇಶದ ನಿರುದ್ಯೋಗ ಬರಲಿರುವ ದಿನಗಳಲ್ಲಿ ಮತ್ತಷ್ಟು ಉಗ್ರತೆಯನ್ನು ಪಡೆದುಕೊಳ್ಳಲಿದೆ.

ನಮ್ಮ ದೇಶದಲ್ಲಿ ನಿರುದ್ಯೋಗದ ಸ್ಫೋಟಕ ಬೆಳವಣಿಗೆಗೆ ಕಾಣಿಕೆ ಕೊಟ್ಟಿರುವ ಬಹುದೊಡ್ಡ ಅಂಶಗಳೆಂದರೆ– ನಮ್ಮ ಆರ್ಥಿಕ ವ್ಯವಸ್ಥೆ ಸರಕುಗಳನ್ನು ಉತ್ಪಾದಿಸುವ ರಂಗವಾಗಿರುವ ಬದಲು ಲಾಭಕೋರ ಎಮ್.ಎನ್.ಸಿಗಳಿಗೆ ಮಾರುಕಟ್ಟೆಯ ಸ್ಥಳವಾಗಿ ವೇಗವಾಗಿ ಪರಿವರ್ತಿತಗೊಳ್ಳುತ್ತಿರುವುದು; ನವೀನ ಯೋಜನೆಗಳಲ್ಲಿ ದೊಡ್ಡ ಹೂಡಿಕೆ ಇಲ್ಲದಿರುವುದು; ಚಾಲ್ತಿಯಲ್ಲಿರುವ ಉದ್ದಿಮೆಗಳಲ್ಲಿ ರೋಗಗ್ರಸ್ಥತೆ, ಮುಚ್ಚುವಿಕೆ, ವಿಲೀನ/ಸ್ವಾಧೀನಗಳು ಭಾರೀ ಪ್ರಮಾಣದಲ್ಲಿ ಕೆಲಸಗಾರರನ್ನು ಕಡಿತಮಾಡಲು ಕಾರಣವಾಗುತ್ತಿದೆ.

ಸದಾ ಹೆಚ್ಚುತ್ತಿರುವ ಗ್ರಾಮೀಣ ಬಡತನದಿಂದಾಗಿ ಭೂಹೀನ ಕೃಷಿಕೂಲಿಕಾರರ ಸಂಖ್ಯೆಯಲ್ಲಿ ಭಾರೀ ಹೆಚ್ಚಳ ಆಗುತ್ತಿದೆ. ದೇಶದಲ್ಲಿ ಕೃಷಿಯಲ್ಲಿ ಬಂಡವಾಳಶಾಹಿ ಮಾದರಿ ಉತ್ಪಾದನೆಯ ಬೆಳವಣಿಗೆಯಿಂದಾಗಿ ಕೃಷಿಕಾರ್ಮಿಕರಿಗೆ ಒಂದು ವರ್ಷದಲ್ಲಿ ಸಿಗುವ ಫಲಕಾರಿ ಉದ್ಯೋಗದ ದಿನಗಳ ಸಂಖ್ಯೆ ಇಳಿಮುಖಗೊಳ್ಳುತ್ತಿರುವುದು ನಿರುದ್ಯೋಗದ ಹೆಚ್ಚಳಕ್ಕೆ ಮತ್ತೊಂದು ಕಾರಣ. ಕಾರ್ಷಿಕ ಬಿಕ್ಕಟ್ಟು ಮುಂದುವರೆಯುತ್ತಿದ್ದು, ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ರೈತರಿಗೂ ಕೂಡ ಕೃಷಿ ಮಾಡುವುದು ನಷ್ಟದ ಬಾಬತ್ತಾಗಿ ಪರಿಣಮಿಸಿರುವುದರಿಂದ ಭೂಮಿ ಕೇಂದ್ರಿಕರಣದತ್ತ ಹಸ್ತಾಂತರಗೊಳ್ಳುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಕೃಷಿಯಿಂದ ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಜನತೆ ವಲಸೆ ಹೋಗಿ ನಿರುದ್ಯೋಗಿಗಳ ಮೀಸಲು ಸೈನ್ಯವನ್ನು ಸೇರಿಕೊಳ್ಳುವಂತಾಗಿದೆ ಮತ್ತು ಅದು ಆತಂಕಕಾರಿ ಪ್ರಮಾಣದಲ್ಲಿ ಹಿಗ್ಗುವಂತಾಗಿದೆ. ಕಾರ್ಷಿಕ ಬಿಕ್ಕಟ್ಟಿನ ಫಲಿತಾಂಶವಾಗಿ ನಗರ ಕೇಂದ್ರಗಳತ್ತ ಗ್ರಾಮೀಣ ಜನ ಸಮೂಹದ ವಲಸೆ ಅವರಿಗೆ ಫಲಕಾರಿ ಉದ್ಯೋಗವನ್ನು ಒದಗಿಸದೆ ನಗರ ಪ್ರದೇಶದ ಅಪಾರ ನಿರುದ್ಯೋಗವನ್ನು ಮತ್ತಷ್ಟು ಉಲ್ಬಣಗೊಳಿಸುತ್ತಿದೆ.

ನಮ್ಮ ದೇಶದಲ್ಲಿ ಅರೆ ಉದ್ಯೋಗ, ಬಾಲ ಕಾರ್ಮಿಕರ ದುಡಿಮೆಯೂ ಒಂದು ದೊಡ್ಡ ಸಮಸ್ಯೆಯಾಗಿದೆ.

ಯುವ ಮತ್ತು ಶಿಕ್ಷಿತ ನಿರುದ್ಯೋಗಸ್ಥರ ಸಂ–ಖ್ಯೆಯೂ ಹೆಚ್ಚುತ್ತಿದೆ. ಯುವ ಜನರ ನಿರುದ್ಯೋಗದ ಅಂಶವನ್ನು ಆರ್ಥಿಕ ಹಾಗೂ ಸಾಮಾಜಿಕ ದೃಷ್ಠಿ ಕೋನದಿಂದ ಗ್ರಹಿಸಬೇಕಾಗಿದೆ. ಶಿಕ್ಷಿತ ಯುವಜನರಿಗೆ ನಿರುದ್ಯೋಗ ಎಂದರೆ ಅವರನ್ನು ದೇಶ ಕಟ್ಟುವ ಉತ್ಪಾದನಾ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಹಾಗೂ ಕಾಣಿಕೆ ನೀಡದಂತೆ "ಹೊರಗಿಡುವುದು" ಎಂದಾಗುತ್ತದೆ. ಯುವಜನ ಸ್ವಭಾವತಃ ಮತ್ತು ಮಾನಸಿಕವಾಗಿ ಹೆಚ್ಚು ಪಕ್ಕಾಗುವವರು ಕೂಡಾ. ಯುವ ಜನರನ್ನು ಸಾಮಾಜಿಕ ಪ್ರಗತಿಯಲ್ಲಿ ವಿವೇಚನಾಯುಕ್ತವಾಗಿ ತೊಡಗಿಸಿಕೊಳ್ಳುವಂತೆ ಮಾಡುವುದು ಪ್ರಪಂಚದಾದ್ಯಂತ ಎದುರಿಸುತ್ತಿರುವ ಒಂದು ಸವಾಲು.

ನಿರುದ್ಯೋಗಿಗಳು ದೇಶದ ಕಾರ್ಮಿಕ ವರ್ಗದ ಅವಿಭಾಜ್ಯ ಅಂಗ. ಅವರನ್ನು ದೇಶದ ಆರ್ಥಿಕ ವ್ಯವಸ್ಥೆ ಉತ್ಪಾದಕ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಮಾಡಿದೆ. ಇಂತಹ ಧೋರಣೆಗಳ ವಿರುದ್ಧ, ಉದ್ಯೋಗಾವಕಾಶಗಳ ನಿರ್ಮಾಣಕ್ಕಾಗಿ ಹೋರಾಡುವುದು ದೇಶದ ಒಟ್ಟು ಹಿತದೃಷ್ಟಿಯಿಂದ ಕಾರ್ಮಿಕ ಆಂದೋಲನದ ಕರ್ತವ್ಯವಾಗಿದೆ. ■

> "ಕೆಲವು ಕಾರ್ಮಿಕರನ್ನು ವಿಪರೀತವಾಗಿ ದುಡಿಸಿಕೊಂಡು ಉಳಿದವರನ್ನು ನಿರುದ್ಯೋಗಿಗಳನ್ನಾಗಿ, ದರಿದ್ರರನ್ನಾಗಿ, ಮೀಸಲು ಸೈನ್ಯವಾಗಿ ಇರಿಸಿಕೊಳ್ಳುವುದು ಬಂಡವಾಳಶಾಹಿ ಉತ್ಪಾದನಾ ವಿಧಾನದ ಮೂಲ ಸ್ವಭಾವವೇ ಆಗಿದೆ."
>
> – *ಕಾರ್ಲ್‌ಮಾರ್ಕ್ಸ್*






# ಕೃಷಿಯಲ್ಲಿ ವಿದೇಶಿ ಬಂಡವಾಳ

## ಶ್ರಮ ನಮ್ಮ ಬಡ ರೈತರದ್ದು ಲಾಭ ವಿದೇಶಿ ಕಂಪನಿಗಳಿಗೆ

**ಮಾರುತಿ ಮಾನ್ಪಡೆ**
ಅಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ

ದೇಶ ಸ್ವಾತಂತ್ರ್ಯದ ನಂತರ ಜಾರಿಯಾದ 5 ಪಂಚವಾರ್ಷಿಕ ಯೋಜನೆಗಳಲ್ಲು ಕೃಷಿಗೆ ಪ್ರಧಾನ ಆದ್ಯತೆಯನ್ನು ಕೊಡಲಾಗಿತ್ತು ಮತ್ತು ದೇಶೀಯ ಬಂಡವಾಳ ಕೃಷಿ ಕ್ಷೇತ್ರದಲ್ಲಿ ಯಥೇಚ್ಛವಾಗಿ ಹೂಡಿಕೆಯಾಗುತ್ತಿತ್ತು. ಇದರ ಪರಿಣಾಮವಾಗಿ ಭಾರತ ಕೃಷಿಯಲ್ಲಿ ಸ್ವಾವಲಂಬನೆಯನ್ನು ಗಳಿಸಿ ಬೀಜೋತ್ಪಾದನೆ, ಆಹಾರ ಉತ್ಪಾದನೆ ಮಾಡುವ ಮೂಲಕ ಆಹಾರದ ಸ್ವಾವಲಂಬನೆಯನ್ನು ಸಾಧಿಸಿ 125 ಕೋಟಿ ಜನರಿಗೆ ಅನ್ನ ನೀಡಲು ಸಾಧ್ಯವಾಯಿತು. ಇದನ್ನೇ ಅಂದಿನ ಸರ್ಕಾರ ಹಸಿರು ಕ್ರಾಂತಿ (ಗ್ರೀನ್ ರೆವಲ್ಯೂಷನ್) ಎಂದು ಕರೆಯಿತು.

ಪ್ರಸ್ತುತ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಕೃಷಿ ಕ್ಷೇತ್ರದಲ್ಲಿ ಶೇ 100 ರಷ್ಟು ವಿದೇಶಿ ಬಂಡವಾಳಕ್ಕೆ ಅವಕಾಶ ಮಾಡಿಕೊಟ್ಟು ಅದಕ್ಕಾಗಿಯೇ ಈ ದೇಶದ ನೆಲದ ಕಾನೂನುಗಳನ್ನೇ ಬದಲಾಯಿಸುತ್ತಿರುವುದು ಆತಂಕ ಮೂಡಿಸಿದೆ. ಭಾರತದ ಭೂಸುಧಾರಣಾ ಕಾನೂನುಗಳ ಪ್ರಕಾರ ಯಾವುದೇ ವಿದೇಶಿಯರಿಗೆ ಅಥವಾ ವಿದೇಶಿ ಕಂಪನಿಗಳಿಗೆ ಭಾರತದ ಕೃಷಿ ಭೂಮಿಯನ್ನು ಕೊಂಡುಕೊಳ್ಳುವ ಹಕ್ಕಿರಲಿಲ್ಲ. ಇದ‍ಕ್ಕೆ ತಿದ್ದುಪಡಿ ತಂದು ಭಾರತದ ರೈತರಿಂದ ವಿದೇಶಿ ಕಂಪನಿಗಳ ಕೈಗೆ ಕೃಷಿಯೋಗ್ಯ ಭೂಮಿಯನ್ನು ವರ್ಗಾಯಿಸುವ ವ್ಯವಸ್ಥಿತ ಸಂಚು ನಡೆಯುತ್ತಿದೆ. ಇದರ ಮೂಲಕ ವಿದೇಶಿ ಕಂಪನಿಗಳು ಕೃಷಿ ಮಾರುಕಟ್ಟೆಯ ಮೇಲೆ ಹಿಡಿತ ಸಾಧಿಸಿ ಆಮೂಲಕ ಕೃಷಿ ಕ್ಷೇತ್ರದ ಬೀಜೋತ್ಪಾದನೆ, ತಂತ್ರಜ್ಞಾನಗಳನ್ನು ತಮ್ಮದಾಗಿಸಿಕೊಳ್ಳಲು ಅನುಕೂಲವಾಗುವಂತೆ ಇನ್ನೊಂದೆಡೆ ಕೃಷಿ ಮಾರುಕಟ್ಟೆ ಕಾಯ್ದೆಗೂ (ಎಪಿಎಂಸಿ ಕಾಯ್ದೆ) ತಿದ್ದುಪಡಿಯನ್ನು ಕೇಂದ್ರ ಸರ್ಕಾರ ತಂದಿದೆ. ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡುವ ಮೂಲಕ ದೇಶದ ಕೃಷಿ ಭೂಮಿಯನ್ನು ವಿದೇಶಿ ಕಂಪನಿಗಳಿಗೆ ಗುತ್ತಿಗೆ ನೀಡಿ ಕಂಪನಿಗಳಿಂದ ಗುತ್ತಿಗೆ ಕೃಷಿ ಮಾಡಿಸುವುದು ಅವರ ಉದ್ದೇಶವಾಗಿದೆ. ಈಗಾಗಲೇ ಭಾರತದಲ್ಲಿ ಗುತ್ತಿಗೆ ಕೃಷಿ ಜೀವಂತವಾಗಿದ್ದು ಈ ಗುತ್ತಿಗೆ ಕೃಷಿಯಲ್ಲಿ ರೈತರು ಪ್ರಧಾನವಾಗಿ ತೊಡಗಿಸಿಕೊಂಡಿದ್ದಾರೆ. ಈ ಬಡಪಾಯಿ ರೈತರನ್ನು ಕೃಷಿಯಿಂದ ಹೊರದಬ್ಬಿ ಆ ಜಾಗಗಳಲ್ಲಿ ಕಂಪನಿಗಳ ಮೂಲಕ ಕೃಷಿ ನಡೆಸುವುದು ಇದರ ಮೂಲ ಉದ್ದೇಶ.

**ಕೃಷಿಯನ್ನು ನಷ್ಟದಾಯಕಗೊಳಿಸಿದ ಮುಕ್ತ ಮಾರುಕಟ್ಟೆ ನೀತಿ–ಗ್ಯಾಟ್**

ಸರ್ಕಾರ ಮತ್ತು ಕಂಪನಿಗಳು ಇದರಿಂದ ರೈತರಿಗೆ ಲಾಭವಾಗುತ್ತದೆಂದು ಕೇಳುತ್ತಾರೆ ಆದರೆ ರೈತರು ತಮ್ಮ ಭೂಮಿಯನ್ನು ಕಳೆದುಕೊಳ್ಳುವುದನ್ನು ಬಿಟ್ಟರೆ ಬೇರೆ ಯಾವ ಲಾಭವೂ ಆಗುವುದಿಲ್ಲ. ಕೇಂದ್ರ ಸರ್ಕಾರ ಕೃಷಿಯಲ್ಲಿ ಅಮೇರಿಕಾದ ಮಾದರಿಯಲ್ಲಿ ಕಂಪನಿ ಕೃಷಿಯನ್ನು ಜಾರಿಗೆ ತರಬೇಕೆಂದು ವಾದ ಮಂಡಿಸುತ್ತಿದೆ. ಆದರೆ ಇಲ್ಲಿ ಗಮನಿಸಬೇಕಾದ ಒಂದು ವಿಷಯವೆಂದರೆ ಅಮೇರಿಕಾರದಲ್ಲಿ ಕೃಷಿ ಅವಲಂಬಿತರು ಕೇವಲ ಶೇ 3 ರಷ್ಟಿದ್ದರೆ ಭಾರತದಲ್ಲಿ ಇದರ ಸಂಖ್ಯೆ ಶೇ 64 ರಷ್ಟಿದೆ.

ರೈತರ ಕೃಷಿಯನ್ನು ರಕ್ಷಿಸುವುದು ಯಾವುದೇ ಒಂದು ನಾಗರೀಕ ಸರ್ಕಾರದ ಜವಾಬ್ದಾರಿಯಾಗಿದೆ. ಆದರೆ ಪಿ.ವಿ.ನರಸಿಂಹರಾವ್ ಈ ದೇಶದ ಪ್ರಧಾನಿ ಮತ್ತು ಮನಮೋಹನ್‌ಸಿಂಗ್ ಹಣಕಾಸು ಸಚಿವರಾಗಿದ್ದಾಗ ಜನತೆಯ ಪ್ರತಿರೋಧದ ನಡುವೆಯೂ ಮಾಡಿಕೊಂಡ ಗ್ಯಾಟ್ ಒಪ್ಪಂದಕ್ಕೆ ಕೃಷಿಯನ್ನು ಸೇರ್ಪಡೆಗೊಳಿಸಿ ಗಣನೀಯ ಪ್ರಗತಿಯನ್ನು ಸಾಧಿಸುತ್ತೇವೆಂದು ಸುಳ್ಳು ಭರವಸೆಗಳನ್ನು ಕೊಟ್ಟು ಕೃಷಿ ಕ್ಷೇತ್ರವನ್ನು ಲಾಭದಾಯಕವಲ್ಲದಂತೆ ಮಾಡಿದರು. ಇದಕ್ಕೆ ಮುಖ್ಯವಾಗಿ ಕಾರಣ ಅವರು ಜಾರಿಗೆ ತಂದ ಮುಕ್ತ ಮಾರುಕಟ್ಟೆ ನೀತಿ.

**ಬಿತ್ತನೆ ಬೀಜ ವಿದೇಶದಿಂದ,
ಕೃಷಿ ತಂತ್ರಜ್ಞಾನ ವಿದೇಶದಿಂದ,
ರಸಗೊಬ್ಬರ ವಿದೇಶದಿಂದ,
ಕೀಟನಾಶಕ ವಿದೇಶದಿಂದ,
ಮಾರುಕಟ್ಟೆಯನ್ನು ವಿದೇಶಿಗರ ಕೈಗೆ
ಕೊಟ್ಟು ಭಾರತವನ್ನು ಸಂಪೂರ್ಣ
ಗುಲಾಮಗಿರಿಗೆ ತಳ್ಳಲಾಗುತ್ತಿದೆ.
ಶ್ರಮ ಮಾತ್ರ ಭಾರತೀಯ
ಬಡ ರೈತರದ್ದು
ಲಾಭ ವಿದೇಶಿ ಕಂಪನಿಗಳಿಗೆ.
ಗ್ಯಾಟ್ ಒಪ್ಪಂದದಿಂದ ಕೃಷಿ ಕ್ಷೇತ್ರದ
ಮೇಲಾದ ದುಷ್ಪರಿಣಾಮ ಮತ್ತು
ರೈತರ ಸಾಲು ಸಾಲು ಆತ್ಮಹತ್ಯೆಗಳು
ನಮ್ಮ ಎದುರಿಗಿರುವಾಗಲೇ
ಮತ್ತೊಮ್ಮೆ ಕೃಷಿ ಕ್ಷೇತ್ರದಲ್ಲಿ
ವಿದೇಶಿ ಬಂಡವಾಳವನ್ನು ಆಹ್ವಾನಿಸಿ
ಕಂಪನಿ ಕೃಷಿ, ಗುತ್ತಿಗೆ ಕೃಷಿಗೆ ಅವಕಾಶ
ಕಲ್ಪಿಸಿಕೊಡುವುದು
ಅತ್ಯಂತ ಅಪಾಯಕಾರಿ.**

ನಮ್ಮ ದೇಶದಲ್ಲೇ ಬೆಳೆಯುತ್ತಿದ್ದ ಬೇಳೆಕಾಳುಗಳು, ಹತ್ತಿ, ರೇಷ್ಮೆ, ಸಕ್ಕರೆ, ಎಣ್ಣೆಗಳನ್ನು ವಿದೇಶಗಳಿಂದ ಅಗ್ಗದ ದರಕ್ಕೆ ಆಮದು ಮಾಡಿಕೊಂಡು ದೇಶೀಯ ಉತ್ಪನ್ನಗಳಿಗೆ ಮಾರುಕಟ್ಟೆ ಇಲ್ಲದಂತೆ ಮಾಡಲಾಯಿತು. ಇದರ ಪರಿಣಾಮವಾಗಿ ಅಲ್ಲಿಂದ ಇಲ್ಲಿಯವರೆಗು ದೇಶದಲ್ಲಿ 3,25,000 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಸರ್ಕಾರಿ ಅಂಕಿ ಅಂಶಗಳ ಪ್ರಕಾರವೇ ಈಗಲೂ ಪ್ರತಿ ಅರ್ಧಗಂಟೆಗೊಬ್ಬ ರೈತ ಸಾಲಬಾಧೆಯಿಂದ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಇದೇ ಸಂದರ್ಭದಲ್ಲಿ ಭಾರತದ ಕೃಷಿ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರಗಳನ್ನು ಕಂಡುಕೊಂಡು ರೈತರನ್ನು ಭೂಮಿಯಲ್ಲೇ ಉಳಿಸಿ, ರೈತರ ಕೃಷಿಯನ್ನು ಬಲಪಡಿಸುವ ಯಾವುದೇ ಗಂಭೀರ ಯೋಜನೆಗಳನ್ನು ಆಳುವ ಸರ್ಕಾರಗಳು ಕೈಗೆತ್ತಿಕೊಳ್ಳಲಿಲ್ಲ. ಬದಲಾಗಿ ರೈತರ ಭೂಮಿಯನ್ನು ಕಂಪನಿಗಳಿಗೆ ವರ್ಗಾಯಿಸುವ ಯೋಜನೆಗಳನ್ನು ಬರದಿಂದ ಕೈಗೆತ್ತಿಕೊಂಡವು.

**ಸ್ವಾಮಿನಾಥನ್ ವರದಿಯ ಜಾರಿ– ಈಗ ಅಸಾಧ್ಯವೆನ್ನುವ ಸರಕಾರ**

ಗ್ಯಾಟ್ ಒಪ್ಪಂದದಿಂದ ಕೃಷಿ ಕ್ಷೇತ್ರದ ಮೇಲಾದ ದುಷ್ಪರಿಣಾಮ ಮತ್ತು ರೈತರ ಸಾಲು ಸಾಲು ಆತ್ಮಹತ್ಯೆಗಳು ನಮ್ಮ ಎದುರಿಗಿರುವಾಗಲೇ ಮತ್ತೊಮ್ಮೆ ಕೃಷಿ ಕ್ಷೇತ್ರದಲ್ಲಿ ವಿದೇಶಿ ಬಂಡವಾಳವನ್ನು ಆಹ್ವಾನಿಸಿ ಕಂಪನಿ ಕೃಷಿ, ಗುತ್ತಿಗೆ ಕೃಷಿಗೆ ಅವಕಾಶ ಕಲ್ಪಿಸಿಕೊಡುವುದು ಅತ್ಯಂತ ಅಪಾಯಕಾರಿಯಾಗಿದೆ. ದೇಶದ ಪ್ರಧಾನಿ ನರೇಂದ್ರ ಮೋದಿಯವರು ಎರಡು ವರ್ಷಗಳ ಹಿಂದೆ ಚುನಾವಣಾ ಪ್ರಚಾರಗಳನ್ನು ನಡೆಸುವಾಗ ಗ್ರಾಮೀಣ ಪ್ರದೇಶಗಳಲ್ಲಿ ನಡೆಸಿದ ಸುಮಾರು 500 ಕ್ಕೂ ಹೆಚ್ಚು ಬಹಿರಂಗ ಸಭೆಗಳಲ್ಲಿ 'ಕೃಷಿ ಕ್ಷೇತ್ರ ಸಂಕಷ್ಟದಲ್ಲಿದ್ದು ಅದನ್ನು ಹೊರತರಲು ಕೃಷಿ ತಜ್ಞ ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯನ್ನು ಜಾರಿಗೊಳಿಸುತ್ತೇವೆ" ಎಂದು ಭರವಸೆ ಕೊಟ್ಟಿದ್ದರು ಆದರೆ ಅಧಿಕಾರಕ್ಕೆ ಬಂದ ಮೇಲೆ ಕೃಷಿ ಉತ್ಪನ್ನಗಳಿಗೆ ಉತ್ಪಾದನಾ ವೆಚ್ಚದ ಶೇಕಡಾ 50 ರಷ್ಟು ಸೇರಿಸಿ ಬೆಂಬಲ ಬೆಲೆ ನಿಗದಿಗೊಳಿಸಬೇಕೆನ್ನುವ ಮಹತ್ತರವಾದ ಶಿಫಾರಸ್ಸು ನೀಡಿರುವ ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯನ್ನು ಜಾರಿಗೊಳಿಸಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಸಲ್ಲಿಸಿದೆ. ಇದರಿಂದ ಸಂಕಷ್ಟದಲ್ಲಿದ್ದ ರೈತರನ್ನು ಮತ್ತಷ್ಟು ಕಷ್ಟಕ್ಕೆ ತಳ್ಳುವ ಕೆಲಸ ಮಾಡಿದಂತಾಗಿದೆ.

ಭಾರತದಲ್ಲೇ ಬಂಡವಾಳದ ಪ್ರಮಾಣ ಅಧಿಕವಾಗಿರುವಾಗ, ಕೃಷಿ ತಂತ್ರಜ್ಞಾನ ಅಧಿಕವಾಗಿರುವಾಗ ವಿದೇಶಿ ಬಂಡವಾಳವನ್ನು ಆಹ್ವಾನ ಮಾಡುವ ಮೂಲಕ ದೇಶದ ಬೀಜೋತ್ಪಾದನೆ, ಕೃಷಿ ತಂತ್ರಜ್ಞಾನ ಮತ್ತು ಮಾರುಕಟ್ಟೆಯನ್ನು ವಿದೇಶಿಯರ ಕೈಗೆ ಕೊಡಲು ಕೇಂದ್ರ ಸರ್ಕಾರ ಹೊರಟಿದೆ, ಅದರಲ್ಲೂ ಮುಖ್ಯವಾಗಿ ಬೀಜೋತ್ಪಾದನೆ ಮಾಡುವ ಮಾನ್‌ಸಾಂಟೋ, ಕಾರ್ಗಿಲ್‌ನಂತಹ ದೈತ್ಯ ಕಂಪನಿಗಳು ದೇಶದ ಕೃಷಿ ವಿಶ್ವವಿದ್ಯಾಲಯಗಳನ್ನು ನಿಯಂತ್ರಿಸುತ್ತಿವೆ.

ದೇಶದಲ್ಲಿ 8 ಲಕ್ಷ ಕೋಟಿ ರೂ ಪ್ರತಿವರ್ಷ ಕೃಷಿ ಸಾಲವನ್ನು ನೀಡುತ್ತಿದ್ದರೂ ಇದು ಸಾಮಾನ್ಯ ರೈತರ ಕೈಗೆ ಸಿಗುತ್ತಿಲ್ಲ ಬದಲಾಗಿ ಇದರ ಬಹುಪಾಲು ಕೃಷಿ ಯಂತ್ರೋಪಕರಣಗಳನ್ನು ತಯಾರಿಸುವ ಕಂಪನಿಗಳ ಪಾಲಾಗುತ್ತಿದೆ. ಇಂತಹ ಲೋಪದೋಷಗಳನ್ನು ತಡೆಗಟ್ಟಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಂಭೀರ ಪ್ರಯತ್ನ ನಡೆಸಲಿಲ್ಲ.

**ಸ್ವಾವಲಂಬನೆಗೆ ಸಂಚಕಾರ**

ಕೃಷಿ ಕೇವಲ ಆಹಾರ ಉತ್ಪಾದನೆ ಮಾತ್ರವಲ್ಲದೆ ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸಿದೆ. ಜಗತ್ತಿನ ಎರಡನೇ ಅತಿಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಭಾರತದಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಕೃಷಿ ಕ್ಷೇತ್ರ ಮೊದಲ ಸ್ಥಾನದಲ್ಲಿದೆ. ಇಂತಹ ಸಂದರ್ಭದಲ್ಲಿ ಕೃಷಿಯಿಂದ ರೈತರನ್ನು ಹೊರದಬ್ಬಿ ಅವರನ್ನು ನಿರುದ್ಯೋಗಿಗಳನ್ನಾಗಿಸಲು ಮೋದಿ ಸರ್ಕಾರ ಮುಂದಾಗುತ್ತಿದೆ.

ಕೃಷಿ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯಿಂದ ದೇಶಿ ಕೃಷಿ ತನ್ನ ಸ್ವಾವಲಂಬನೆಯನ್ನು ಕಳೆದುಕೊಳ್ಳುತ್ತದೆ. ಬಿತ್ತನೆ ಬೀಜ ವಿದೇಶದಿಂದ, ಕೃಷಿ ತಂತ್ರಜ್ಞಾನ ವಿದೇಶದಿಂದ, ರಸಗೊಬ್ಬರ ವಿದೇಶದಿಂದ, ಕೀಟನಾಶಕ ವಿದೇಶದಿಂದ, ಮಾರುಕಟ್ಟೆಯನ್ನು ವಿದೇಶಿಗರ ಕೈಗೆ ಕೊಟ್ಟು ಭಾರತವನ್ನು ಸಂಪೂರ್ಣ ಗುಲಾಮಗಿರಿಗೆ ತಳ್ಳುವ ಹುನ್ನಾರ ಇದರ ಹಿಂದಿದೆ. ಶ್ರಮ ಮಾತ್ರ ಭಾರತೀಯ ಬಡ ರೈತರದ್ದು ಲಾಭ ವಿದೇಶಿ ಕಂಪನಿಗಳಿಗೆ. ಯಾವುದೇ ವಿದೇಶಿ ಕಂಪನಿಗಳು ಭಾರತದ ನೆಲದ ಕಾನೂನಿಗೆ ಗೌರವವನ್ನು ನೀಡುವುದಿಲ್ಲ ಎಂಬುದು ಹಿಂದಿನ ಹಲವು ಪ್ರಕರಣಗಳಲ್ಲಿ ಸಾಬೀತಾಗಿದೆ (ಉದಾ: ಭೂಪಾಲ್ ಅನಿಲ ದುರಂತಕ್ಕೆ ಕಾರಣವಾದ ವಿದೇಶಿ ಮೂಲದ ಕಂಪನಿ ಮಾಡಿದ ಮೋಸ.) ಬದಲಾಗಿ ಅವರ ಕಂಪನಿಯ ಕಾನೂನಿನ ಅಡಿಯಲ್ಲೇ ಕೆಲಸ ಮಾಡುವ ಎಲ್ಲ ಅಪಾಯಗಳು ನಮ್ಮ ಮುಂದಿದೆ.

**ಪರ್ಯಾಯ ದಾರಿ– ರೈತರ ಪ್ರಶ್ನೆ ದೇಶದ ಪ್ರಶ್ನೆ**

ಕೃಷಿ ಉತ್ಪನ್ನಗಳ ಮಾರುಕಟ್ಟೆಯ ಸರಪಳಿಯನ್ನು ರೈತರಿಗೆ ಪೂರಕವಾಗಿ ರೂಪಿಸದಿದ್ದರೆ ರೈತರನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಒಂದು ಕಡೆ ಸಣ್ಣ ರೈತರುಗಳನ್ನು ಒಗ್ಗೂಡಿಸಿ ಸಹಕಾರಿ ಕೃಷಿಗೆ ಹೆಚ್ಚು ಒತ್ತು ನೀಡಬೇಕು. ಇದೇ ರೀತಿಯ ಪ್ರಯೋಗಗಳನ್ನು ಕೇರಳ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಎಡರಂಗದ ಸರ್ಕಾರಗಳು ನಡೆಸಿ ಯಶಸ್ವಿಯಾಗಿ ಆಹಾರದ ಸ್ವಾವಲಂಬನೆಯನ್ನು ಸಾಧಿಸಿವೆ. ಅದೇ ರೀತಿ ಪ್ರಸ್ತುತ ಕೇರಳ ಸರ್ಕಾರ ಕೃಷಿ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಖರೀದಿಸಿ ಮಾವೆಲಿ ಸ್ಟೋರ್‌ಗಳ ಮೂಲಕ ಗ್ರಾಹಕರಿಗೆ ಕಡಿಮೆ ಬೆಲೆಗೆ ನೀಡುವ ವಿನೂತನ ಯೋಜನೆಯನ್ನು ಸಹಕಾರಿ ತತ್ವದ ಅಡಿಯಲ್ಲಿ ನಡೆಸುತ್ತಿದೆ. ಇದೇ ರೀತಿಯ ಪ್ರಯೋಗಗಳನ್ನು ದೇಶದಾದ್ಯಂತ ಮಾಡಿದರೆ ಮಾತ್ರ ರೈತ ಕೃಷಿ ಉಳಿಯಲು ಸಾಧ್ಯ.

ರೈತ ಕೃಷಿಗೆ ಮಾರಕವಾಗಿರುವ, ದೇಶದ ಸ್ವಾವಲಂಬನೆಗೆ ಧಕ್ಕೆಯುಂಟುಮಾಡುವ ಕಂಪನಿ ಕೃಷಿಯನ್ನು ನಿಲ್ಲಿಸಿ, ಕೃಷಿಯಲ್ಲಿನ ವಿದೇಶಿ ಬಂಡವಾಳವನ್ನು ತಡೆಗಟ್ಟಿ, ದೇಶಿಯ ತಂತ್ರಜ್ಞಾನ ಮತ್ತು ದೇಶೀಯ ವಿಶ್ವವಿದ್ಯಾಲಯಗಳನ್ನು ಬಲಪಡಿಸಿದರೆ, ದೇಶಿಯ ವಿಜ್ಞಾನಿಗಳನ್ನು ಪ್ರೋತ್ಸಾಹಿಸಿದರೆ, ಮಾರುಕಟ್ಟೆಯನ್ನು ರೈತರಿಗೆ ಪೂರಕವಾಗಿ ಬಲಪಡಿಸಿದರೆ ಮಾತ್ರ ಭಾರತದ ಬೆನ್ನೆಲುಬು ಅನ್ನದಾತ ಬದುಕುಳಿಯಲು ಸಾಧ್ಯ. ಇದನ್ನು ಬರಿ ರೈತರ ಪ್ರಶ್ನೆ ಮಾತ್ರವಲ್ಲದೆ ದೇಶದ ಪ್ರಶ್ನೆಯನ್ನಾಗಿ ನೋಡಬೇಕಾಗಿದೆ.

ಈ ನೀತಿಗಳಿಂದ ಬಾಧಿತರಾಗುವ ದೇಶದ ರೈತರನ್ನು ಒಗ್ಗೂಡಿಸಿ ಅವರಿಗೆ ತಿಳುವಳಿಕೆ ಮೂಡಿಸಿ ಚಳುವಳಿಯನ್ನು ನಡೆಸುವ ತುರ್ತು ಅಗತ್ಯದಲ್ಲಿ ದೇಶದ ರೈತ ಚಳುವಳಿಗಳಿವೆ. ಇದಕ್ಕಾಗಿ ಹಿಂದಿನಿಂದಲೂ ದೇಶದ ಎಲ್ಲ ರೈತ ಸಂಘಟನೆಗಳು ವಿಷಯಾಧಾರಿತವಾಗಿ ದೇಶದಾದ್ಯಂತ ಪ್ರಬಲ ಚಳುವಳಿಗಳನ್ನು ನಡೆಸಲು ಮುಂದಾಗಿವೆ. ಇದಕ್ಕಾಗಿ ಇದೇ ಜುಲೈ 1 ರಿಂದ 3 ವರೆಗೆ ಬೆಂಗಳೂರಿನಲ್ಲಿ ನಡೆಯುವ ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸಭೆ ಈ ಎಲ್ಲಾ ವಿಚಾರಗಳನ್ನು ಗಂಭೀರವಾಗಿ ಚರ್ಚಿಸಿ ಮುಂದಿನ ಹೋರಾಟದ ರೂಪುರೇಷೆಗಳನ್ನು ರೂಪಿಸುತ್ತದೆ. ■




# ಕರ್ನಾಟಕದ ಹೊಸ ಭೂಸ್ವಾಧೀನ ಆದೇಶ

## 1894ರ ಕರಾಳ ಭೂಸ್ವಾಧೀನ ಕಾಯ್ದೆಯ ಪಡಿಯಚ್ಚು?

**ದೇಶದ ಜನತೆಯ ಒತ್ತಾಯದ ಮೇರೆಗೆ, ತನಗೆ ಇಷ್ಟವಿಲ್ಲದಿದ್ದರೂ, ಸ್ವಲ್ಪವಾದರೂ ಜನತೆಗೆ ನೆರವಾಗಬಲ್ಲ ಭೂ ಸ್ವಾಧೀನ ಕಾಯ್ದೆ ಜಾರಿಗೆ ತಂದ ಇದೇ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದ ಕಾಯ್ದೆಯನ್ನು ಅದೇ ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರಕಾರ ಬುಡಮೇಲು ಮಾಡಿದೆ. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ಭೂಸ್ವಾಧೀನ ಕಾಯ್ದೆ- 2013ನ್ನು ಬುಡಮೇಲು ಮಾಡಿ, ಮೂರು ಬಾರಿ ಸುಗ್ರೀವಾಜ್ಞೆ ಹೊರಡಿಸಿ ಅದನ್ನು ಮರಳಿ ಕರಾಳ ಕಾಯ್ದೆಯನ್ನಾಗಿಸಲು ಶತಾಯ ಗತಾಯ ವಿಫಲ ಪ್ರಯತ್ನ ಮಾಡಿದ ಕ್ರಮಗಳ ಮುಂದುವರೆದ ಭಾಗವಾಗಿಯೇ ಇದು ಬಂದಿದೆ. ಈ ಮೂಲಕ ಭೂಸಂತ್ರಸ್ತರ ಬಗ್ಗೆ ಕಾಂಗ್ರೆಸ್‌ನ ಕಾಳಜಿ ಎಷ್ಟು ಹುಸಿ ಎಂಬುದು ಮತ್ತೊಮ್ಮೆ ಬಯಲಾಗಿದೆ.**


**ಯು.ಬಸವರಾಜ**
ಪ್ರಧಾನ ಕಾರ್ಯದರ್ಶಿ, ಕೆಪಿಆರ್‌ಎಸ್

ಕರ್ನಾಟಕ ರಾಜ್ಯ ಸರಕಾರ ಮೇ 31, 2016ರಂದು ವಸತಿ, ಸ್ಮಶಾನ, ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉಪವಿದ್ಯುತ್ ಕೇಂದ್ರಗಳ ನಿರ್ಮಾಣ, ಒಳಚರಂಡಿ, ರಸ್ತೆ ನಿರ್ಮಾಣ ಮತ್ತು ಅಗಲೀಕರಣ, ರೈಲ್ವೇ ಮಾರ್ಗ ನಿರ್ಮಾಣ, ರೈಲ್ವೇ ಕೆಳಸೇತುವೆ ಮತ್ತು ಮೇಲು ಸೇತುವೆ, ಬಂದರು, ವಿಮಾನ ನಿಲ್ದಾಣ ಹಾಗೂ ಇನ್ನಿತರ ಸಾರ್ವಜನಿಕ ಉಪಯುಕ್ತತೆಯುಳ್ಳ ಸರ್ಕಾರದ ಯೋಜನೆಗಳಿಗೆ ಗರಿಷ್ಠ 100 ಎಕರೆಗೆ ಮೀರದಂತೆ ಭೂಕೋರಿಕೆ ಇಲಾಖೆ/ಫಲಾನುಭವಿ ಸಂಸ್ಥೆಗಳು ಖಾಸಗೀ ಜಮೀನನ್ನು ಭೂಮಾಲೀಕರಿಂದ ನೇರವಾಗಿ ಖರೀದಿಸಲು ಅನುಮತಿ ನೀಡಿ ಆದೇಶ ಹೊರಡಿಸಿದೆ.

ಈಗಾಗಲೇ ದೇಶದಾದ್ಯಂತ ಭೂಸ್ವಾಧೀನ ಪ್ರಕ್ರಿಯೆಗೆ ನೆರವಾಗಲು ಕೇಂದ್ರ ಸರಕಾರ 2014ರಿಂದ ಜಾರಿಗೆ ಬರುವಂತೆ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ – 2013" ಇದ್ದಾಗಲೂ, ಈ ಹೊಸ ಆದೇಶವನ್ನು ಸರಕಾರ ಹೊರಡಿಸಿರುವುದು ವಿಶೇಷವಾಗಿದೆ. ಸದರಿ ಆದೇಶವನ್ನು, ಸದರಿ ಭೂಸ್ವಾಧೀನ ಕಾಯ್ದೆ–2013ನ್ನು ಮತ್ತು ಇದರ ಜಾರಿಗಾಗಿ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು– 2015"ದ ನಿಯಮ 31ನ್ನು ಬಳಸಿಯೇ ಕರ್ನಾಟಕ ಸರಕಾರ ಆದೇಶಿಸಿರುವುದು ಇನ್ನೊಂದು ವಿಶೇಷ. ಇದರ ಅಗತ್ಯವಿತ್ತೇ ಎಂಬ ಪ್ರಶ್ನೆಯನ್ನು ನೀವು ಎತ್ತಿದರೆ, ಕರ್ನಾಟಕ ಸರಕಾರ ಖಂಡಿತಾ ಹೌದು ಎನ್ನುತ್ತದೆ ಮತ್ತು ಈ ಆದೇಶದ ಹಿನ್ನೆಲೆಯಲ್ಲಿಯೇ ಅಂದರೆ ಪ್ರಸ್ತಾವನೆಯಲ್ಲಿ ಈ ಕುರಿತು ತನ್ನ ಉತ್ತರ ನೀಡಿದೆ.

ಸಾರ್ವಜನಿಕರಿಗೆ ಅಗತ್ಯವಾದ, ಮೇಲೆ ಸೂಚಿಸಲಾದ ವಸತಿ ಮತ್ತಿತರೇ ಮೂಲ ಸೌಕರ್ಯಗಳಿಗೆ ಜಮೀನನ್ನು ತ್ವರಿತವಾಗಿ ಪಡೆಯಲು ಮತ್ತು ಅಂತಹ ಜಮೀನನ್ನು ತ್ವರಿತವಾಗಿ ಪಡೆಯಲಾಗದ ಕಾರಣದಿಂದಾಗಿ, ಯೋಜನೆಯ ಅನುಷ್ಠಾನದ ವಿಳಂಬಗೊಂಡು ಸರ್ಕಾರ–ಕ್ಕೆ ಉಂಟಾಗುವ ಹೆಚ್ಚಿನ ಆರ್ಥಿಕ ಹೊರೆಯನ್ನು ತಡೆಯುವ ಈ ಎರಡು ಪ್ರಮುಖ ಕಾರಣಗಳಿಗಾಗಿ ಈ ಆದೇಶದ ಅಗತ್ಯವಿತ್ತು ಎಂದು ರಾಜ್ಯ ಸರಕಾರ ವಿವರಿಸಿದೆ. ಭೂಸ್ವಾಧೀನ ಕಾಯ್ದೆ– 2013 ರಂತೆ ಇಂತಹ ಸೌಕರ್ಯಗಳಿಗೆ ಭೂಮಿಯನ್ನು ಪಡೆಯುವುದು, ಒಂದೆಡೆ ರೈತರ ಅಥವಾ ಜಮೀನಿನ ಒಡೆಯರ ಒಪ್ಪಿಗೆಯನ್ನು ಪಡೆಯುವ ಮತ್ತು ಇನ್ನೊಂದೆಡೆ ಸ್ವಾಧೀನದಿಂದಾಗುವ ಸಾಮಾಜಿಕ ಹಾಗೂ ಪರಿಸರದ ಮೇಲಿನ ಪರಿಣಾಮ ಗುರುತಿಸುವ ಪ್ರಕ್ರಿಯೆಯ ಕಾರಣಗಳಿಂದಾಗಿ, ಯೋಜನೆಯ ಅನುಷ್ಠಾನದ ಪ್ರಗತಿಯಲ್ಲಿ ವಿಳಂಬವಾಗುವ ಪ್ರಕ್ರಿಯೆಯ ಅಂಶವನ್ನು ಇದು ಎತ್ತಿತೋರಿದೆ. ಅದೇ ರೀತಿ, 1894ರ ಕಾಯ್ದೆಯ ಒಪ್ಪಂದದ ದರದ ಮೂಲಕ ಸರ್ಕಾರದ ಯೋಜನೆಗಳಿಗೆ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಅವಕಾಶ ಈ ಹೊಸ ಭೂಸ್ವಾಧೀನ ಕಾಯ್ದೆಯಲ್ಲಿ ಇಲ್ಲವೆಂಬ ಇನ್ನೊಂದು ಅಂಶವನ್ನು ನೆನಪಿಸಿ, ತ್ವರಿತ ಭೂಸ್ವಾಧೀನದ ಪ್ರಕ್ರಿಯೆಗೆ ಅದರ ಅಗತ್ಯದ ಕುರಿತು ಮಾತನಾಡಿದೆ.

ನಿಜ, ಮೇಲೆ ತಿಳಿಸಲಾದ ಮೂಲ ಸೌಕರ್ಯ ಮತ್ತಿತರೇ ಸಾರ್ವಜನಿಕ ಉಪಯುಕ್ತತೆಯುಳ್ಳ ಸರ್ಕಾರದ ಯೋಜನೆಗಳಿಗೆ, ತ್ವರಿತವಾಗಿ ಜಮೀನು ಸಿಗಬೇಕು ಮತ್ತು ಅಂತಹ ವಿಳಂಬದಿಂದಾಗುವ ಆರ್ಥಿಕ ಹೊರೆಯನ್ನು ತಡೆಯಬೇಕು ಎಂಬ



ಸರಕಾರದ ವಿಚಾರ ಒಪ್ಪಬಹುದಾದುದೇ ಆಗಿದೆ.

ಆದರೆ, ರಾಜ್ಯ ಸರಕಾರ ಈ ಕಾರಣದಿಂದಾಗಿ ಸಾಮಾಜಿಕ ಹಾಗೂ ಪರಿಸರದ ಮೇಲಾಗುವ ಪರಿಣಾಮದ ಕುರಿತ ಅಧ್ಯಯನ ಮತ್ತು ಅದರ ಮೇಲೆ ಕ್ರಮವಹಿಸುವುದನ್ನು ತಡೆಯಲು ಮುಂದಾಗಿರುವುದು ಆಶ್ಚರ್ಯಕರವಾಗಿದೆ. ಇದನ್ನು ತಡೆಯುವ ಬದಲು, ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಮಾಡಿಕೊಳ್ಳುತ್ತಲೇ ಈ ಕುರಿತು ಕ್ರಮವಹಿಸಬಹುದಾಗಿತ್ತು, ಆದರೆ ಸರಕಾರ ಅದನ್ಯಾಕೆ ಒಪ್ಪುತ್ತಿಲ್ಲ? ಅದೇ ರೀತಿ. ಯಾವುದರಿಂದಾಗಿ ರೈತರ ಜಮೀನುಗಳಿಗೆ ಸರಿಯಾದ ಮಾರುಕಟ್ಟೆ ದರ ದೊರೆಯದೇ ನಷ್ಟ ಅಥವ ಅನ್ಯಾಯ ಉಂಟಾಗುತ್ತಿತ್ತೆನ್ನಲಾಗಿದೆಯೋ ಹಾಗೂ ಆ ರೀತಿಯ ದರ ನಿಗದಿಗೆ ಯಾವುದೇ ಸಮರ್ಪಕ ಮಾನದಂಡಗಳಿರಲಿಲ್ಲವೆನ್ನಲಾಗಿದೆಯೋ, ಅಂತಹ ದರದ ಕುರಿತ ಕ್ರಮವನ್ನು ಭೂಸ್ವಾಧೀನ ಕಾಯ್ದೆ–2013–ರ ಅಂಗೀಕಾರದ ಸಂದರ್ಭದಲ್ಲಿ ಪಾರ್ಲಿಮೆಂಟ್ ಒಪ್ಪದೇ ತಿರಸ್ಕರಿಸಿದೆ. ರೈತರಿಗೆ ಹಿಂದಿನ 1894ರ ಕರಾಳ ಹಾಗೂ ಬಲವಂತದ ಭೂಸ್ವಾಧೀನ ಕಾಯ್ದೆ ಜಾರಿಯಲ್ಲಿದ್ದ ಪರಿಸ್ಥಿತಿಗೆ ಹೋಲಿಸಿದರೆ, ಕೊಂಚವಾದರೂ ಪರವಾ ಇಲ್ಲಾ ಎಂಬಂತಹ ದರ ನಿಗದಿಗೆ ಅವಕಾಶ ನೀಡಿರುವ ಭೂಸ್ವಾಧೀನ ಕಾಯ್ದೆ–2013ರ ದರ ನಿಗದಿಯ ಪ್ರಸ್ತಾಪವನ್ನು ಕೂಡಾ, ಮರಳಿ ರಾಜ್ಯ ಸರಕಾರ ತಿರಸ್ಕರಿಸಿ, ಈ 'ಒಪ್ಪಂದದ ದರ'ವನ್ನೇ ಯಾಕೆ ಈ ಮೂಲಕ ಪ್ರತಿಪಾದಿಸುತ್ತಿದೆ? ಇದರ ಉದ್ದೇಶವೇನು? ಎಂಬ ಎರಡು ಪ್ರಶ್ನೆಗಳು ಮತ್ತು ಅದೇ ರೀತಿ, ಭೂಸ್ವಾಧೀನ ಕಾಯ್ದೆ–2013 ರ ಕಲಂ 46ನ್ನು ಬಳಸಿ ಈ ಆದೇಶ ಹೊರಡಿಸಿದುದರ ಹಿಂದಿನ ಔಚಿತ್ಯವೇನು ಎಂಬುದು ಸೇರಿದಂತೆ, ಈ ಎಲ್ಲ ಪ್ರಶ್ನೆಗಳು ರಾಜ್ಯದ ರೈತರನ್ನು, ನಮ್ಮೆಲ್ಲರನ್ನು ಮರಳಿ ಕಾಡುತ್ತಿವೆ.

**ಸಾಮಾಜಿಕ ಪರಿಣಾಮ ಗುರುತಿಸುವುದೇಕೆ ಬೇಡ!**

ಭೂ ಸ್ವಾಧೀನ ಕಾಯ್ದೆ–2013 ಭೂಸ್ವಾಧೀನ ದಿಂದಾಗುವ ಸಾಮಾಜಿಕ ಹಾಗೂ ಪರಿಸರದ ಮೇಲಿನ ಪರಿಣಾಮಗಳನ್ನು ಗುರುತಿಸಲು ಮತ್ತು ಅಂತಹ ವರದಿಯನ್ನಾಧರಿಸಿ ಸೂಕ್ತ ಕ್ರಮಗಳನ್ನು ತಗೆದುಕೊಳ್ಳುವುದನ್ನು ಅಗತ್ಯವೆಂದು ಭಾವಿಸಿ ಆ ಕುರಿತು ಕ್ರಮವಹಿಸುವುದನ್ನು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಕಡ್ಡಾಯಗೊಳಿಸಿದೆ. ಆದರೇ ರಾಜ್ಯ ಸರಕಾರ ಭೂ ಸ್ವಾಧೀನದ ಹೊಸ ಆದೇಶದಲ್ಲಿ ಅದನ್ನು ಕೈಬಿಟ್ಟಿದೆ. ಸಾಮಾನ್ಯವಾಗಿ, ಈ ಹೊಸ ಆದೇಶವು, ಕೈಗಾರಿಕೆ ಸ್ಥಾಪನೆ ಕುರಿತು ಮಾತನಾಡುವುದಿಲ್ಲ ಆದಾಗಲೂ, ಮೂಲ ಸೌಕರ್ಯಗಳ ಯೋಜನೆಯಲ್ಲಿ, ಅಂತಹ ಸಾಮಾಜಿಕ ಹಾಗೂ ಪರಿಸರದ ಮೇಲೆ ಭೂ ಸ್ವಾಧೀನದ ಪರಿಣಾಮಗಳು ಗಂಭಿರವಾಗಿಯೇನು ಇರುವುದಿಲ್ಲವೆಂಬ ಅಭಿಪ್ರಾಯದಿಂದಲೇನಾದರೂ, ಸಾಮಾಜಿಕ ಹಾಗೂ ಪರಿಸರದ ಮೇಲಿನ ಪರಿಣಾಮಗಳ ಕುರಿತ ಅಧ್ಯಯನವನ್ನು ಕೈಬಿಟ್ಟಿರಬಹುದೇ? ಒಂದು ವೇಳೆ, ಅದೇ ಉದ್ದೇಶವನ್ನು ಹೊಂದಿದ್ದರೂ, ಅದು ಸರಿಯಾದ ಕ್ರಮವಾಗಿಲ್ಲ! ಭೂಸ್ವಾಧೀನದ ಸಾಮಾಜಿಕ ಹಾಗೂ ಪರಿಸರದ ಪರಿಣಾಮ ಅದೆಷ್ಟೇ ಪ್ರಮಾಣದಿದ್ದರೂ ಅದರಿಂದಾಗುವ ಬಾಧೆಗೆ ಪರಿಹಾರ ಒದಗಿಸಬೇಕಾಗುತ್ತದೆ. ಮೇಲಾಗಿ, ಇದು ಕೇವಲ ಒಂದು ಪ್ರದೇಶದ 100 ಎಕರೆ–ಯ ಪ್ರಶ್ನೆ ಮಾತ್ರವಾಗಿಲ್ಲ, ರಾಜ್ಯದಾದ್ಯಂತ ಎಲ್ಲಾ ತಾಲೂಕುಗಳಲ್ಲೂ ಮೂಲ ಸೌಕರ್ಯಕ್ಕಾಗಿ ಭೂ ಸ್ವಾಧೀನ ಮಾಡುವಾಗ ಅದರ ಪ್ರಮಾಣ ಅಗಾಧವಾದುದು ಮತ್ತು ಗಂಭೀರವಾದುದೇ ಆಗಿರುತ್ತದೆ. ಮಾತ್ರವಲ್ಲ, ಈ ಆದೇಶದ ಪ್ರಶ್ನೆ ಮಾತ್ರವೇ ಅಲ್ಲ, ಈ ಆದೇಶ ಹೊರಡಿಸಿದ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು– 2015"ರ ನಿಯಮ 31, ಕೈಗಾರಿಕಾ ಉದ್ದೇಶಕ್ಕಾಗಿ ಗರಿಷ್ಠ 500 ಎಕರೆವರೆಗೂ ಸ್ವಾಧೀನ ಮಾಡಿಕೊಳ್ಳಬಹುದಾದ ಜಮೀನಿಗೂ ಈ ವಿಚಾರದಲ್ಲಿ ರಿಯಾಯಿತಿ ನೀಡಿರುವುದನ್ನು ಗಮನಿಸಿದರೆ ಅದರ ಅಗಾಧತೆ ಅರ್ಥವಾಗಬಹುದಾಗಿದೆ.

**ಗೋಸುಂಬೆ ಭೂದರ**

ಈ ಆದೇಶವು ಭೂದರ ನಿಗದಿಗೆ ಸೂಚಿಸುವ ಮಾರ್ಗಸೂಚಿಯ 5ನೇ ಅಂಶವೂ, ಸದರಿ ಆದೇಶದಂತೆ ಸ್ವಾಧೀನ ಪಡಿಸಿಕೊಳ್ಳುವ ಜಮೀನುಗಳ ದರವೂ ಯಾವುದೇ ಕಾರಣಕ್ಕೆ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣಕಾಯ್ದೆ – 2013"ರ ಕಲಂ 26ರಡಿ ನಿಗದಿಪಡಿಸುವ ಭೂ ಮೌಲ್ಯದ ಗರಿಷ್ಠ ಮಿತಿಯನ್ನು ಮೀರುತ್ತಿಲ್ಲವೆಂಬುದನ್ನು ದರ ನಿರ್ಧರಣಾ ಸಲಹಾ ಸಮಿತಿಯು ಖಚಿತ ಪಡಿಸಿಕೊಂಡು ನಿಗದಿಸಲು ಸೂಚಿಸುತ್ತದೆ. ಇದು ಬಹಳ ಸ್ಪಷ್ಟವಾಗಿ, ಭೂ ಸ್ವಾಧೀನ ಕಾಯ್ದೆ–2013 ರಂತೆ ಸ್ವಲ್ಪವಾದರೂ ಪರವಾ ಇಲ್ಲಾವೆಂಬ ಭೂಬೆಲೆ ಭೂಸಂತ್ರಸ್ತರಿಗೆ ಸಿಗದಂತೆ ನೋಡಿಕೊಳ್ಳುತ್ತಿರುವುದನ್ನು ಖಚಿತಪಡಿಸುತ್ತಿದೆ.

ಒಪ್ಪಂದದ ದರ ಹೇಗೆ ನಿಗದಿಸಲಾಗುತ್ತದೆ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಮಿತ್ತಲ್, ಜಿಂದಾಲ್ ಹಾಗೂ ಭ್ರಾಹ್ಮಿಣಿ ಸ್ಟೀಲ್ಸ ಕಂಪೆನಿಗಳಿಗಾಗಿ ಭೂಬೆಲೆ ನಿಗದಿಸುವಾಗ ಅಲ್ಲಿನ ತಾಲೂಕ ಆಡಳಿತ ಮತ್ತು ಭೂ ನೊಂದಣಾಧಿಕಾರಿಗಳು ಆಯಾ ಪ್ರದೇಶದಲ್ಲಿ ಮಾರಾಟವಾಗುವ ಜಮೀನುಗಳಿಗೆ ನಿಗದಿಸಿದ ಕನಿಷ್ಠ ಮಾರ್ಗಸೂಚಿ ಬೆಲೆಗಿಂತಲೂ, ಕಡಿಮೆ ಬೆಲೆಯನ್ನು ಭೂ ಬೆಲೆಯೆಂದು ನಿಗದಿಸಿರುವುದನ್ನು ನೋಡಿದ್ದೇವೆ. ಉದಾಹರಣೆಗೆ, ಭ್ರಾಹ್ಮಿಣಿ ಸ್ಟೀಲ್ಸಗಾಗಿ ಸ್ವಾಧೀನ ಪಡಿಸಿಕೊಂಡ ಬಳ್ಳಾರಿ ತಾಲೂಕಿನ ಕೊಳಗಲ್ಲು ಗ್ರಾಮದ ಕನಿಷ್ಠ ಮಾರ್ಗಸೂಚಿ ಬೆಲೆ 12 ಲಕ್ಷ ರೂಗಳೆಂದಿದ್ದರೂ, ಅಲ್ಲಿ ಕೇವಲ 05,06,08ಲಕ್ಷ ರೂಗಳೆಂದು ಮೂರು ರೀತಿಯಲ್ಲಿ ಕಡಿಮೆ ಭೂ ಬೆಲೆ ನಿಗದಿಸಿ ವಂಚಿಸಲಾಗಿದೆ. ಸಾಮಾನ್ಯವಾಗಿ ರೈತರು ಮತ್ತಿತರರು ತಮಗೆ ಜಮೀನು/ನಿವೇಶನ ಖರೀದಿಸಿ ನೊಂದಣಿ ಮಾಡಿಸುವಾಗ ಅಲ್ಲಿ ಮಾರ್ಗಸೂಚಿ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿಸಿದ್ದರೂ ಉಪನೊಂದಣಾಧಿಕಾರಿಗಳು ಅಲ್ಲಿನ ಮಾರ್ಗಸೂಚಿ ಬೆಲೆಗಿಂತ ಕಡಿಮೆ ಬೆಲೆಗೆ ನೊಂದಣಿ ಮಾಡಲು ಒಪ್ಪುವುದಿಲ್ಲ. ಮಾತ್ರವಲ್ಲ ಮಾರ್ಗಸೂಚಿ ಬೆಲೆಗೆ ನೊಂದಣಿ ಮಾಡುತ್ತಾರೆ. ವಾಸ್ತವ ಸ್ಥಿತಿ ಹೀಗಿರುವಾಗ, ಅದಕ್ಕಿಂತಲೂ ಕಡಿಮೆ ಬೆಲೆ ನಿಗದಿಸುವುದು ಅದು ಯಾವ ರೀತಿಯ ಒಪ್ಪಂದದ ದರವಾದಿತು? ಇದು ಒಪ್ಪಂದದ ದರವಲ್ಲ, ಬದಲಿಗೆ ಮಾಲೀಕರೊಂದಿಗೆ ಶಾಮೀಲಾದ ರೈತರು ಮತ್ತು ಭೂಸಂತ್ರಸ್ತರನ್ನು ಲೂಟಿ ಮಾಡುವ ಲೂಟಿಕೋರ ದರವಾಗದೇ?!

ನಿಜ, ಈ ವಿಚಾರದಲ್ಲಿ ಖರೀದಿಸುವುದು ಇಲ್ಲಿ ಸರಕಾರವೇ ಆಗಿರಬಹುದಾದುರಿಂದ ಅಂತಹ ಪರಿಸ್ತಿತಿ ಉದ್ಭವಿಸದೆಂದರೂ ಕೂಡಾ, ಇಲ್ಲಿ ಭೂಬೆಲೆ ನಿಗದಿಗೆ ಅಗತ್ಯ ಸಮರ್ಪಕ ಮಾನದಂಡಗಳಿಲ್ಲದೇ ಇರುವುದರಿಂದ ಬೆಲೆ ನಿಗದಿಯು ಅಧಿಕಾರಿಗಳ ಮರ್ಜಿಯಲ್ಲಿರುವುದರಿಂದ, ಬೆಲೆಗಾಗಿ ರೈತರು ಅಥವಾ ಭೂ ಸಂತ್ರಸ್ಥರು ಭೂಸ್ವಾಧೀನಾದಿಕಾರಿಗಳಿಗೆ ಗರಿಷ್ಠ ಕಮಿಷನ್ ಅಥವಾ ಲಂಚ ನೀಡಬೇಕಾದ ಒತ್ತಡ ಬರಲಿದೆ. ಇದರಿಂದ ಒಂದೆಡೆ ಭೂ ಸಂತ್ರಸ್ತರಿಗೆ, ಇನ್ನೊಂದೆಡೆ ಸರಕಾರಕ್ಕೆ ಅಥವಾ ಇಲಾಖೆಗಳ ಜೇಬಿಗೆ ಕತ್ತರಿ ಬೀಳಲಿದೆ ಮತ್ತು ಭ್ರಷ್ಟಾಚಾರಕ್ಕೆ ಕುಮ್ಮಕ್ಕಾಗಲಿದೆ. ಅದೇ ರೀತಿ, ಈ ಒಪ್ಪಂದದ ದರವೆಂಬ ಹೆಸರಿನ ಗೋಸುಂಬೆ ದರವೂ ಏನೇ ಆದರೂ ಭೂಸ್ವಾಧೀನ ಕಾಯ್ದೆ–2015–ರ ದರ ನಿಗದಿಯ ನಿಯಮಗಳಂತೆ ನಿಗದಿಸುವ ಬೆಲೆಗೆ ಸರಿದೂಗದಾಗಿದೆ. ಈ ಕಾಯ್ದೆಯ ಪ್ರಕಾರ, ಕೊನೆಯ ಪಕ್ಷ ಕನಿಷ್ಟ ಮಾರ್ಗ ಸೂಚಿ ಬೆಲೆಯ ನಾಲ್ಕರಷ್ಟು ಗ್ರಾಮೀಣ ಪ್ರದೇಶದ ಜಮೀನುಗಳಿಗೆ ಮತ್ತು ನಗರಗಳ ಜಮೀನುಗಳಿಗೆ ಮೂರರಷ್ಟು ಗರಿಷ್ಠ ಬೆಲೆಯನ್ನು ನೀಡಬೇಕಾಗುತ್ತದೆ. ಈ ಬೆಲೆಯೂ ಕೂಡಾ ಈ ಹೊಸ ಆದೇಶದಲ್ಲಿ ಭೂ ಸಂತ್ರಸ್ತರಿಗೆ ಸಿಗದಾಗಿದೆ.

**ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಸೌಲಭ್ಯಗಳೂ ಇದರಲ್ಲಿಲ್ಲ**

ಅದೇ ರೀತಿ, ಸರಕಾರ ಭೂಸ್ವಾಧೀನ ಕಾಯ್ದೆ–2013 ರ ಕಲಂ 46ನ್ನು ಬಳಸಿ ಆದೇಶ ಹೊರಡಿಸಿದ ಔಚಿತ್ಯವನ್ನು ಗಮನಿಸುದಾದರೆ, ಈ ಕಾಯ್ದೆಯ ಕಲಂ 46 ಸದರಿ ಸಂಸ್ಥೆಗಳಿಗೆ, ಭೂ ಸ್ವಾಧೀನ ಕಾಯ್ದೆಯಿಂದ ನುಣುಚಿಕೊಳ್ಳಲು ಅವಕಾಶ ನೀಡುವ ಕಳ್ಳಗಿಂಡಿಯಾಗಿದೆ. ಅದೇ ರೀತಿ, ಈ ಕಾಯ್ದೆಯ ಜಾರಿಗೆ ರೂಪಿಸಲಾದ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣದ (ಕರ್ನಾಟಕ) ನಿಯಮಗಳು– 2015ರ ನಿಯಮ 31 ಕೂಡಾ ಸಂಸ್ಥೆಗಳಿಗೆ ನುಣುಚಿಕೊಳ್ಳಲು ಅವಕಾಶ ನೀಡುವ ಕಳ್ಳಗಿಂಡಿಯ ಪಾರು ರಾಜಮಾರ್ಗವಾಗಿದೆ. ಇದು ಅದಾಗಲೇ ಮೇಲೆ ವಿಮರ್ಶಿಸಲಾದ ಹೊಣೆಗಾರಿಕೆಗಳಿಂದ ಸರಕಾರ ಮತ್ತು ಸಂಸ್ಥೆಗಳು ನುಣುಚಿಕೊಳ್ಳಲು ಅವಕಾಶ ನೀಡುವುದು ಮಾತ್ರವೇ ಅಲ್ಲ, ಭೂ ಸ್ವಾಧೀನ ಕಾಯ್ದೆ ವಿಧಿಸುವ ಭೂ ಸಂತ್ರಸ್ತರಿಗೆ ನೀಡಬೇಕಾದ ಪುನರ್‌ವಸತಿ ಮತ್ತು

**ಪುಟ 11 ಕ್ಕೆ**






ರೈತರ ಬೆಳೆಗೆ ಮಾರುಕಟ್ಟೆಯಲ್ಲಿ ನ್ಯಾಯಬದ್ದ ಬೆಲೆ ಒದಗಿಸುವ ಪ್ರಶ್ನೆಯ ಹಿನ್ನೆಲೆಯಲ್ಲಿ ಕನಿಷ್ಟ ಬೆಂಬಲ ಬೆಲೆಯ ಸೂತ್ರ ಬಂದಿದ್ದು ಈಗ ನವ-ಉದಾರವಾದದ ಅಡಿಯಲ್ಲಿ ಅದು ಮಾರುಕಟ್ಟೆಯನ್ನು 'ವಿರೂಪ'ಗೊಳಿಸುವ ಅಂಶ ಎಂಬ ಪರಿಕಲ್ಪನೆ ಯನ್ನು ತರಲಾಗಿದೆ. ಕೃಷಿಯ ಕಂಪನೀಕರಣಕ್ಕೆ ಪೂರಕವಾಗಿ ಕೃಷಿ ಮಾರುಕಟ್ಟೆಯಲ್ಲಿ ಖಾಸಗಿ ಬಂಡವಾಳದ ಹುಚ್ಚು ಹರಿದಾಟಕ್ಕೆ ಅವಕಾಶ ಮಾಡಿಕೊಡಬೇಕೆಂಬ ಉದ್ದೇಶದಿಂದ ರೈತ ವಿರೋಧಿಯಾದ ನೀತಿಯನ್ನು ಜಾರಿಗೆ ತರಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ರೈತ ಚಳುವಳಿಗಳಲ್ಲದೇ ರಾಜ್ಯ ಸರಕಾರಗಳೂ ರಾಜಕೀಯ ಹೋರಾಟಕ್ಕೆ ಮುಂದಾಗಬೇಕು ಎನ್ನುತ್ತಾರೆ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ **ಜಿ.ಸಿ. ಬಯ್ಯಾರೆಡ್ಡಿ**ಯವರು. 'ಜನಶಕ್ತಿ'ಯ ಪರವಾಗಿ ಈ ಸಂದರ್ಶನ ನಡೆಸಿದವರು **ಟಿ.ಯಶವಂತ.**

## ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ :

# 'ಜೂಜುಕೋರ ಬಂಡವಾಳಿಗರ ಹಿತ ಕಾಯುವ ನೀತಿ ಹಿಮ್ಮೆಟ್ಟಿಸಿ ಸಮಗ್ರ ಪರ್ಯಾಯ ರೂಪಿಸ ಬೇಕು

**ಜನಶಕ್ತಿ: ರೈತರ ಆತ್ಮಹತ್ಯೆಗಳ ಕಾರಣಗಳಲ್ಲಿ ಬೆಳೆಯ ಬೆಲೆ ಕುಸಿತ ಒಂದು ಸಾಮಾನ್ಯ ಅಂಶವಾಗಿರುವಾಗ ಸರಕಾರಗಳ ಮುಂದೆ ರೈತ ಚಳುವಳಿಯಾಗಿ ನೀವು ಇಡುತ್ತಿರುವ ಅಜೆಂಡಾ ಏನು ?**

**ಜಿ.ಸಿ. ಬಯ್ಯಾರೆಡ್ಡಿ:** ರಾಷ್ಟ್ರದ ರೈತ ಚಳುವಳಿಯ ಶಿಫಾರಸ್ಸುಗಳು, ಹಲವು ಇತರ ಅಧ್ಯಯನಗಳು ಹಾಗೂ ಇದೆಲ್ಲವುಗಳ ಜೊತೆಗೆ ಡಾ. ಸ್ವಾಮಿನಾಥನ್ ಆಯೋಗದ ಸೂತ್ರ ಇವೆಲ್ಲವೂ ಸ್ಪಷ್ಟವಾಗಿ ದೃಢಪಡಿಸಿದ ಅಂಶ ಈ ಬೆಳೆಗೆ ನ್ಯಾಯಬದ್ದ ಬೆಲೆಯ ಪ್ರಶ್ನೆ.

**'ಸಿ2+50%' ಸೂತ್ರ**

'ಸಿ2+50%' ಎಂದರೆ ಬೆಳೆಯ ಉತ್ಪಾದನಾ ವೆಚ್ಚ ಮತ್ತು ಅದರ ಮೇಲೆ ಶೇ. 50 ಲಾಭ ಬರುವಂತೆ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿ ಮಾಡಬೇಕು. ಇದು ಒಂದು ವೈಜ್ಞಾನಿಕ ಅಧ್ಯಯನದ ಆಧಾರದಲ್ಲಿ ಮೂಡಿಬಂದಿರುವ ಸೂತ್ರ. ಕೇಂದ್ರ ಸರಕಾರಕ್ಕೆ ಸಲ್ಲಿಸಿರುವ ಈ ಶಿಫಾರಸ್ಸುಗಳು ಎಲ್ಲ ರಾಜ್ಯಗಳಿಗೂ ಅನ್ವಯವಾಗುತ್ತವೆ.

ಇದು ರೈತರನ್ನು ರಕ್ಷಿಸುವ ಪ್ರಧಾನ ಸೂತ್ರ. ರೈತ ಚಳುವಳಿಗಳು ದೇಶದೆಲ್ಲೆಡೆ ವೈಜ್ಞಾನಿಕವಾಗಿ ತಾವೇ ಉತ್ಪಾದನಾ ವೆಚ್ಚವನ್ನು ಲೆಕ್ಕಾಚಾರ ಮಾಡುವಂತಾಗಬೇಕು. ರೈತರಿಗೆ ಈ ಬಗೆಗೆ ಮನನ ಮಾಡಿಸುವುದು ಮತ್ತೊಂದು ಪ್ರಮುಖ ಅಂಶ. 2014 ರ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ನರೇಂದ್ರ ಮೋದಿಯವರು ಕೃಷಿ ಉತ್ಪನ್ನಗಳಿಗೆ ಡಾ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಾದ 'ಸಿ2+50 ಶೇ.' ಸೂತ್ರದಂತೆ ಬೆಂಬಲ ಬೆಲೆ ಕೊಡುವುದಾಗಿ ಪ್ರಚಾರ ಭಾಷಣಗಳಲ್ಲಿ ಸಾರಿ ಸಾರಿ ಹೇಳಿದ್ದರು. ಆದರೆ ಅಧಿಕಾರಕ್ಕೆ ಬಂದ ಮೇಲೆ ಈ ಸಂಬಂಧ ಕೊಟ್ಟ ಭರವಸೆಗೆ ವಿರುದ್ದವಾಗಿ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿ ಕೃಷಿ ಕ್ಷೇತ್ರವು ಮಾರುಕಟ್ಟೆ ನಿಯಮದಂತೆ ನಡೆಯಲು ಬಿಡಬೇಕು. ಕೃಷಿಗೆ ಬೆಂಬಲ ಬೆಲೆ ನೀಡಿಕೆಗೂ ಒಂದು ಮಿತಿ ಇರಬೇಕು ಎಂದಿದ್ದಾರೆ.

- **ಈಗ ಚಾಲ್ತಿಯಲ್ಲಿರುವ ಬೆಂಬಲ ಬೆಲೆಯ ಸ್ವರೂಪ ಏನು? ಇದು ರೈತರಿಗೆ ಅನುಕೂಲಕರವಾಗಿದೆಯೇ? ರೈತರ ಮೇಲಿನ ಪರಿಣಾಮಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಬಹಳಷ್ಟು ರೈತರಿಗೆ ಉತ್ಪಾದನಾ ವೆಚ್ಚವನ್ನು ಲೆಕ್ಕಾಚಾರ ಮಾಡುವ ವಿಧಾನ ಗೊತ್ತಿಲ್ಲ. ಅವರು ಉತ್ಪಾದನಾ ವೆಚ್ಚದಲ್ಲಿ ಕೇವಲ ಬೀಜ, ಗೊಬ್ಬರ, ಕೀಟನಾಶಕ ಮುಂತಾದವುಗಳನ್ನಷ್ಟೆ ಲೆಕ್ಕ ಹಾಕುತ್ತಾರೆ. ಹೊಲ-ಗದ್ದೆಗಳಲ್ಲಿ ಕುಟುಂಬ ಸದಸ್ಯರ ದುಡಿಮೆ, ಕೊಟ್ಟಿಗೆ ಗೊಬ್ಬರದ ಬೆಲೆ, ಕೃಷಿ ಸಾಧನ, ಸಲಕರಣೆಗಳ ಮೇಲಿನ ಹೂಡಿಕೆ ಮತ್ತು ಅವುಗಳ ಸವಕಳಿ ವೆಚ್ಚ, ಕೃಷಿಯಲ್ಲಿ ಪ್ರಾಣಿಗಳ ಬಳಕೆ ಇಂಥವುಗಳನ್ನೆಲ್ಲಾ ಅವರು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ. ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕ ಹಾಕಿ ಅದರ ಮೇಲೆ ಶೇ. 50 ರಷ್ಟು ಲಾಭವಾಗಿ ಸಿಗಬೇಕೆಂಬ ಅಂಶ ಮೊದಲು ರೈತರಿಗೆ ಮನನ ಆಗಬೇಕು. ರೈತರು ಕೃಷಿ ಉತ್ಪನ್ನಗಳಿಗೆ ಬೆಲೆಯನ್ನು ವೈಜ್ಞಾನಿಕವಾಗಿ ತಾವು ಅನುಭವಿಸಿ ಆ ಮೂಲಕ ದೃಢವಾಗಿ ಕೇಳುವಂತಾಗಬೇಕು.

ರಾಜ್ಯದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲೆ ಸಮಿತಿಯ ಮೂಲಕ ಇತ್ತೀಚೆಗೆ ಕೃಷಿ ಉತ್ಪನ್ನಗಳ ವೆಚ್ಚವನ್ನು ರೈತರೇ ಲೆಕ್ಕ ಮಾಡುವ ಪ್ರಯೋಗಗಳು ನಡೆದಿದ್ದು ರಾಗಿ, ಭತ್ತ, ಟೆಮೊಟೋ, ರೇಷ್ಮೆ ಇತ್ಯಾದಿ ಬೆಳೆಗಳಿಗೆ ರೈತರು ಬೆಂಬಲ ಬೆಲೆ ನಿಗದಿ ಮಾಡಿದ ವಿಧಾನವನ್ನು ಕರ್ನಾಟಕ ಕೃಷಿ ಬೆಲೆ ಅಯೋಗವು ಮೆಚ್ಚಿಕೊಂಡಿದೆ. ಆಯೋಗದ ಅಧ್ಯಕ್ಷರು ಆಯೋಗದ ಕೆಲಸ ಶೇ. 90 ರಷ್ಟು ಸರಾಗವಾಗಿದೆ ಎಂದು ಹೇಳಿ ಅದರಂತೆ ಕೃಷಿಬೆಲೆ ಶಿಫಾರಸ್ಸು ಮಾಡಿದ್ದಾರೆ. ಲೆಕ್ಕಾಚಾರ ಮಾಡಿದ ರೈತರಿಗೂ ಇದು ಒಂದು ಹೊಸ ಜ್ಞಾನೋದಯದಂತೆ ಕಂಡು ಬಂದಿದೆ. ಆದರೆ ಇದು ಜಾರಿಯಾಗಬೇಕು.

ಬೆಂಬಲ ಬೆಲೆಯ ಪ್ರಶ್ನೆಯಲ್ಲಿ ಕೇಂದ್ರ ಸರಕಾರದ್ದೇ ಶೇ. 80 ರಷ್ಟು

**ಪುಟ 15 ಕ್ಕೆ**

# ಹವಾಮಾನ ವೈಪರೀತ್ಯ, ಕೃಷಿಯ ಮೇಲೆ ಪರಿಣಾಮ ಮತ್ತು ರೈತರಿಗೆ ರಕ್ಷಣೆ

ಜಿ ವಿ ಶ್ರೀರಾಮರೆಡ್ಡಿ

**ಜಗತ್ತಿನ ಶ್ರೀಮಂತ ದೇಶಗಳ ಆಳರಸರ ಲಾಭದಾಹದ ಧೋರಣೆಗಳಿಂದಾಗಿ ಉಂಟಾಗಿರುವ ಹವಾಮಾನ ವೈಪರೀತ್ಯ ಭಾರತದಂತಹ ದೇಶಗಳ ಕೃಷಿಯ ಮೇಲೆ ಬಹಳ ದುಷ್ಪರಿಣಾಮಗಳನ್ನು ಬೀರಲಾರಂಭಿಸಿದೆ. ಇದರಿಂದ ಕೃಷಿಗೆ ರಕ್ಷಣೆ ಸಿಗಬೇಕಾಗಿದೆ. ಆದರೆ ರೈತರ ರಕ್ಷಣೆ ಇಲ್ಲದೆ, ಕೃಷಿಯ ರಕ್ಷಣೆ ಅಗುವುದಿಲ್ಲ. ಕೃಷಿಯ ರಕ್ಷಣೆ ಇಲ್ಲದಿದ್ದರೆ ಈ ದೇಶದ ರಕ್ಷಣೆ ಆಗುವುದಿಲ್ಲ., ಒಟ್ಟಿನಲ್ಲಿ ಹೇಳುವುದಾದರೆ, ರೈತ ಉಳಿದರೆ ದೇಶ ಉಳಿಯುತ್ತೆ, ಇಲ್ಲದಿದ್ದರೆ ದೇಶ ಉಳಿಯೋದಿಲ್ಲ, ಇದನ್ನು ಸ್ಪಷ್ಟವಾಗಿ ನಾವು ಅರ್ಥ ಮಾಡಿಕೊಳ್ಳಬೇಕು ಎನ್ನುತ್ತಾರೆ ಜಿ.ವಿ.ಶ್ರೀರಾಮ ರೆಡ್ಡಿ, ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರು. ಇದು ಅವರು ಜೂನ್ 15ರಂದು ಕರ್ನಾಟಕ ಪ್ರಾಂತ ರೈತ ಸಂಘ ಏರ್ಪಡಿಸಿದ್ದ 'ಹವಾಮಾನ ವೈಪರೀತ್ಯ-ಕಾರಣಗಳು ಮತ್ತು ಪರಿಹಾರಗಳು' ಎಂಬ ವಿಚಾರ ಸಂಕಿರಣದಲ್ಲಿ ಹವಾಮಾನ ವೈಪರೀತ್ಯದ ದುಷ್ಪರಿಣಾಮಗಳಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಹಾರ ಕುರಿತಂತೆ ಮಾಡಿದ ಭಾಷಣದ ಸಂಗ್ರಹ.**

ಹವಾಮಾನದ ಬದಲಾವಣೆ ಮತ್ತು ವೈಪರೀತ್ಯ ಇಡೀ ದೇಶದ ಕೃಷಿ ಮೇಲೆ ಅತ್ಯಂತ ಗಂಭೀರವಾದಂತ ಪರಿಣಾಮ ಬೀರುತ್ತಾ ಇದೆ ಎಂಬ ಅಂಶವನ್ನು ಪರಿಣಿತರು ಮಾಡಿದ್ದಾರೆ. ಈ ಬಗ್ಗೆ ಚರ್ಚೆ ಮೂರು ದಶಕಗಳ ಹಿಂದೇನೇ ಪ್ರಾರಂಭವಾಯಿತು. ಬಹಳ ಪ್ರಮುಖವಾಗಿ ರಿಯೋ ಡಿ ಜನೈರೋದಲ್ಲಿ ನಡೆದ ಹವಾಮಾನ ವೈಪರೀತ್ಯದ ಒಂದು ಸಮ್ಮೇಳನ ಅಲ್ಲಿಂದ 3 ತಿಂಗಳ ಹಿಂದೆ ಪ್ಯಾರೀಸ್‌ನಲ್ಲಿ ನಡೆದ ಹವಾಮಾನ ಪರಿಣಾಮದ ಸಮ್ಮೇಳನ ಈ ಎರಡರ ಮಧ್ಯೆ ಕೆಲವು ಮುಖ್ಯವಾದಂತ ಅಂಶಗಳನ್ನು ನಾವು ಗಮನಿಸಬೇಕಾಗಿದೆ.

ರಿಯೋ ಡಿ ಜನೈರೋದಲ್ಲಿ ನಡೆದಂತಹ ಹವಾಮಾನ ಸಮಾವೇಶದಲ್ಲಿ ಅತ್ಯಂತ ಪ್ರಮುಖವಾದಂತ ವಿಚಾರಗಳು ಚರ್ಚೆಯಾದವು. ಆ ಸಂದರ್ಭದಲ್ಲಿ ಕ್ಯೂಬಾದ ಆಗಿನ ಅಧ್ಯಕ್ಷ ಫಿಡಲ್ ಕ್ಯಾಸ್ಟ್ರೋರವರು ಒಂದು ದೀರ್ಘ ಭಾಷಣವನ್ನು ಮಾಡಿದ್ದರು. ಆ ಭಾಷಣದಲ್ಲಿ ಅವರು ಈ ಹವಾಮಾನ ವೈಪರೀತ್ಯದ ಹಿಂದಿನ ನಿಜವಾದಂತಹ ಶಕ್ತಿಗಳು, ಈ ಜಗತ್ತಿನ ಮಾನವ ಜನಾಂಗದ ಪ್ರಥಮ ಶತ್ರುಗಳು ಯಾರು ಎಂಬ ಅಂಶವನ್ನು ಸ್ಪಷ್ಟ ಮಾಡಿದ್ದರು. ಈ ಶಕ್ತಿಗಳೆಂದರೆ, ಜಗತ್ತಿನಲ್ಲಿ ಅತ್ಯಂತ ಮುಂದುವರೆದಂತಹ ಬಂಡವಾಳಶಾಹಿ ದೇಶಗಳು, ಅದರಲ್ಲಿ ಪ್ರಮುಖವಾಗಿ ಅಮೇರಿಕಾ ಮತ್ತು ಯೂರೋಪಿನ ದೇಶಗಳು. ಹಾಗೇ ಕೈಗಾರಿಕೆಯಲ್ಲಿ ಅತ್ಯಂತ ಮುಂದುವರೆದಂತಹ ದೇಶಗಳು.

ಇವತ್ತು ಹವಾಮಾನ ವೈಪರೀತ್ಯದ ಮತ್ತು ಬದಲಾವಣೆಗೆ ಪ್ರಮುಖ ಕಾರಣಗಳು ಪರಿಸರದ ಒಳಗಡೆಗೆ ಕಾರ್ಬನ್ ಡೈ ಆಕ್ಸೈಡ್, ಅಂದರೆ ಇಂಗಾಲ ಅಂಶ ಇವೆರಡು ಹೆಚ್ಚು ಪ್ರವೇಶ ಆಗ್ತಾ ಇದೆ, ಅದರ ಜೊತೆಗೆ ಹಲವಾರು ರಾಸಾಯನಿಕ ವಸ್ತುಗಳ ಪ್ರವೇಶ. ರಿಯೋ ಡಿ ಜನೈರೋದಲ್ಲಿ ಈ ಅಂಶವನ್ನು ಗುರುತಿಸಲಾಗಿತ್ತು.

ಆ ಸಮ್ಮೇಳನದಲ್ಲಿ ಲ್ಯಾಟೀನ್ ಅಮೇರಿಕಾದ ದೇಶಗಳ ಪ್ರತಿನಿಧಿಗಳು ಅಮೇರಿಕಾ, ಲ್ಯಾಟಿನ್ ಅಮೇರಿಕಾವನ್ನು ಒಂದು ಕಸದ ಬುಟ್ಟಿಯಾಗಿ ಮಾರ್ಪಾಟು ಮಾಡಿದೆ ಎಂದು ದೂಷಿಸಿದರು. ಲ್ಯಾಟಿನ್ ಅಮೇರಿಕಾದ ದೇಶಗಳನ್ನ ತನ್ನ ಹಿಡಿತದಲ್ಲಿ ಇಟ್ಟುಕೊಂಡಿದ್ದ ಅಮೇರಿಕಾ ಅವರ ಮೇಲೆ ಹಲವಾರು ರೀತಿಯಾದಂತ ಬಲವಂತದ ಒಪ್ಪಂದಗಳನ್ನು ಹೇರಿ ತನ್ನ ದೇಶದಲ್ಲಿ, ತನ್ನ ದೇಶಕ್ಕೆ ಅಗತ್ಯ ಇರುವಂತಹ ಎಲ್ಲಾ ವಸ್ತುಗಳನ್ನು ತಯಾರು ಮಾಡಲಿಕ್ಕೆ ಅಲ್ಲಿ ಕಾರ್ಖಾನೆಗಳನ್ನು ಹಾಕಿದರು. ಅಲ್ಲಿ ಸಾಕಷ್ಟು ಪ್ರತಿರೋಧ ಬಂದ ಮೇಲೆ ಏಷ್ಯಾದ ಮತ್ತು ಆಫ್ರಿಕಾದ ಹಿಂದುಳಿದ ದೇಶಗಳಿಗೆ ಹೊರಟಿದ್ದಾರೆ. ಹೀಗೆ ಜಗತ್ತಿನ ಬಂಡವಾಳಶಾಹಿ ದೇಶಗಳೇ ತಮ್ಮ ಆರ್ಥಿಕ ಅಭಿವೃದ್ಧಿಗೋಸ್ಕರ ಬಡದೇಶಗಳನ್ನು ಉಪಯೋಗಿಸಿ ಆ ದೇಶಗಳಲ್ಲಿ ತನಗೆ ಬೇಕಾದಂತಹ ಕಾರ್ಖಾನೆಗಳನ್ನು ಕೈಗಾರಿಕೆಗಳನ್ನು ಪ್ರಾರಂಭ ಮಾಡಿ ಅವುಗಳ ಮುಖಾಂತರ ವಾತಾವರಣವನ್ನು ಕೆಡಿಸುವಂತ ಅಪಾಯಕಾರಿ ಪ್ರಯತ್ನವನ್ನು ಮಾಡಿವೆ ಮತ್ತು ಮಾಡುತ್ತಾ ಇದೆ.



ಆದ್ದರಿಂದ ಅಭಿವೃದ್ಧಿ ಹೊಂದುತ್ತಿರುವ ಮತ್ತು ಬಡದೇಶಗಳಲ್ಲಿ ಆಗುತ್ತಿರುವ ಹವಾಮಾನ ವೈಪರೀತ್ಯಕ್ಕೆ ಅಭಿವೃದ್ಧಿ ಹೊಂದಿರುವಂತ ದೇಶಗಳ ಜವಾಬ್ದಾರಿಯೇ ಹೆಚ್ಚು. ಆದ್ದರಿಂದ ಆ ಬಡದೇಶಗಳಿಗೆ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಪರಿಹಾರಗಳನ್ನು ಕೊಡಬೇಕು ಎಂಬುದು ರಿಯೋ ಡಿ ಜನೈರೋ ಮ್ಮೇಳನದಲ್ಲಿ ಕೇಳಿ ಬಂದ ಒಂದು ಮುಖ್ಯ ಅಂಶ. ಆದರೆ ಇದುವರೆಗೂ

**ಪುಟ 11 ಕ್ಕೆ**




# ಕೃಷಿಗೆ ಮಾರಕವಾಗಲಿದೆ ಹವಾಮಾನ ವೈಪರೀತ್ಯ

**ಹವಾಮಾನ ಬದಲಾವಣೆಯು ಕೃಷಿ, ರೈತ ಮತ್ತು ಜೀವ ಸಂಕುಲವನ್ನೇ ವಿನಾಶಕ್ಕೆ ದೂಡುವ ರೀತಿಯಲ್ಲಿ ಬರುತ್ತಿದೆ. ಇದು ಕೇವಲ ತಾಂತ್ರಿಕ ಬಿಕ್ಕಟ್ಟು ಎಂದು ಯೋಚಿಸುವುದು ತಪ್ಪಾಗುತ್ತದೆ. ನಮ್ಮ ಸದ್ಯದ ಉತ್ಪಾದನಾ ಸಂಬಂಧಗಳೇ ಈ ಪರಿಸ್ಥಿತಿಯನ್ನು ನಿಭಾಯಿಸಲು ಇರುವ ತೊಡಕುಗಳು, ನಿಖರವಾಗಿ ಹೇಳಬೇಕೆಂದರೆ ಬಂಡವಾಳಶಾಹಿ ಅಥವಾ ಸಾಮ್ರಾಜ್ಯಶಾಹಿ ಸೃಷ್ಟಿಸಿರುವ ಅಸಮಾನ ಜಾಗತಿಕ ಸಮಾಜವೇ ಈ ಹವಾಮಾನದ ಬಿಕ್ಕಟ್ಟನ್ನು ಸರಿಪಡಿಸಲು ನಿಜವಾದ ಅಡ್ಡಿ.**

**ಟಿ.ಎಲ್. ಕೃಷ್ಣೇಗೌಡ**

ಜಾಗತಿಕ ತಾಪಮಾನ ಏರಿಕೆ ಮತ್ತು ಅದರಿಂದಾಗುವ ಪರಿಣಾಮಗಳ ಮೂಲ ಕಾರಣಗಳೇನು? ಯಾವುದೇ ಉತ್ಪಾದನಾ ಪ್ರಕ್ರಿಯೆಯಲ್ಲಿ ಪರಿಹಾರಕ್ಕೆ ಇಂಗಾಲದ ಡೈ ಆಕ್ಸೈಡ್‌ನ್ನು ಬಿಡುಗಡೆ ಮಾಡುವ ನೈಸರ್ಗಿಕವಾಗಿ ಸಿಗುವ ಡೀಸೆಲ್, ಪೆಟ್ರೋಲ್, ಕಲ್ಲಿದ್ದಲು ಮುಂತಾದುವುಗಳನ್ನು ಕೈಗಾರಿಕಾ ಉತ್ಪಾದನೆಯಲ್ಲಿ ಬಳಸುವುದು. ಈ ಇಂಗಾಲದ ಡೈ ಆಕ್ಸೈಡ್ ಹವಾಮಾನದಲ್ಲಿನ ತಾಪಮಾನ ಹೆಚ್ಚಳಕ್ಕೆ ಕಾರಣವಾಗಿ ಭೂಮಿಯ ಸರಾಸರಿ ಉಷ್ಣಾಂಶದ ಹೆಚ್ಚಳಕ್ಕೂ ಕಾರಣವಾಗುತ್ತದೆ. ಇದು ಭೂಮಿಯ ಹವಾಮಾನ ಬದಲಾವಣೆಗೆ ಕಾರಣವಾಗಿ ಗಂಭೀರ ಪರಿಸ್ಥಿತಿಗಳಿಗೆ ದೂಡುತ್ತದೆ. ಇದರ ನಕಾರಾತ್ಮಕ ಪರಿಣಾಮಗಳೆಂದರೆ ಅನಿರೀಕ್ಷಿತ, ಮಳೆ, ಮಳೆ ಬೀಳುವ ಪ್ರಮಾಣದಲ್ಲಿ ಇಳಿಕೆ ಅಥವಾ ಏರಿಕೆ, ವಿಪರೀತ ಉಷ್ಣಾಂಶದಿಂದ ಕೂಡಿದ ಬೇಸಿಗೆ, ಚಳಿಗಾಲದಲ್ಲಿ ಹಿಂದಿನಷ್ಟು ಚಳಿಯಿಲ್ಲದಿರುವುದು. ಬಿರುಗಾಳಿ, ಸಮುದ್ರ ಮಟ್ಟದಲ್ಲಿ ಹೆಚ್ಚಳದಿಂದಾಗಿ ಸಮುದ್ರ ದಂಡೆಗಳ ಕೊರೆತ, ಹಲವಾರು ದ್ವೀಪ ಪ್ರದೇಶಗಳ ಮುಳುಗಡೆ, ಹಿಮ ಪರ್ವತಗಳ ಕರಗುವಿಕೆಯಿಂದ ಪ್ರವಾಹ ಇವು ನಿತ್ಯದ ಸಂಗತಿಗಳಾಗಬಹುದು. ಪರಿಸರಕ್ಕೆ ನಾವು ಹೀಗೆ ಇಂಗಾಲವನ್ನು ಸೇರಿಸುತ್ತಾ ಹೋದರೆ ಈ ರೀತಿಯ ವೈಪರೀತ್ಯಗಳು ಇನ್ನೂ ತೀವ್ರಗೊಳ್ಳುತ್ತವೆ. ಹವಾಮಾನದಲ್ಲಾಗುತ್ತಿರುವ ಈ ಬದಲಾವಣೆಗಳನ್ನು ನಿಯಂತ್ರಿಸದಿದ್ದರೆ, ಭೂಮಿಯ ಜೀವ ಸಂಕುಲಕ್ಕೆ ಅಪಾಯ ಬಂದೊದಗಬಹುದು. ಕಾಡುಗಳು ನಾಶವಾಗಬಹದು, ಪ್ರಾಣಿ ಮತ್ತು ಸಸ್ಯ ಸಂಕುಲಗಳು ನಾಶಹೊಂದಿ, ಕೃಷಿ ಅವನತಿಯತ್ತ ಸಾಗಬಹುದು. ಈ ರೀತಿಯ ಬದಲಾವಣೆಗಳು ಈಗಾಗಲೇ ಕಾಣತೊಡಗಿವೆ. ಅಷ್ಟೊಂದು ವ್ಯಾಪಕವಲ್ಲದಿದ್ದರೂ, ಜಾಗತಿಕ ಉಷ್ಣಾಂಶ ಏರಿಕೆಯನ್ನೂ ತಡೆಗಟ್ಟದಿದ್ದರೆ ಅಂತಹ ವಿನಾಶ ಖಂಡಿತ ಜರುಗುತ್ತದೆ.

ಅರಣ್ಯ ನಾಶ, ಮೀಥೇನ್ ಅನಿಲದ ಬಿಡುಗಡೆಯ ಮೂಲಕ ಜಾಗತಿಕ ಇಂಗಾಲದ ಸರಪಳಿಯ ಮೇಲೆ ಧಾಳಿ ಮಾಡಿದಾಗಲೂ ಜಾಗತಿಕ ತಾಪಮಾನಕ್ಕೆ ಕಾರಣವಾಗುವ ಎಲ್ಲಾ ಅನಿಲಗಳನ್ನು ಹಸಿರುಮನೆ ಅನಿಲಗಳು ಎರಡು ಕರೆಯುತ್ತೇವೆ. ಅದರಲ್ಲೂ ಮುಖ್ಯವಾದುದು ಇಂಗಾಲದ ಡೈ ಆಕ್ಸೈಡ್.

ಜಾಗತಿಕ ತಾಪಮಾನ ಹೆಚ್ಚಳದಿಂದಾಗಿ ಜಗತ್ತು ಎದುರಿಸುತ್ತಿರುವ ಇವತ್ತಿನ ಸನ್ನಿವೇಶವನ್ನು ಜಾಗತಿಕವಾಗಿಯೂ ಬಿಕ್ಕಟ್ಟು ಎಂದು ಕರೆಯಬಹುದು. ಇದಕ್ಕೆ ಕಾರಣವೇನೆಂದರೆ, ಆಧುನಿಕ ಕೈಗಾರಿಕಾ ಉತ್ಪನ್ನದ ಬಹುಪಾಲು ಖನಿಜಾನಿಲವನ್ನೇ ಅವಲಂಬಿಸಿರುವುದು. ಆದ-ರೆ ಕೆಲವು ಪರಿಸರವಾದಿಗಳು ಹೇಳುವಂತೆ ಈ ರೀತಿಯ ಅವಲಂಬನೆಯನ್ನೂ ಐತಿಹಾಸಿಕ ತಪ್ಪು ಎನ್ನಲಾಗದು. ಈ ರೀತಿಯ ಖನಿಜಾನಿಗಳು ಇಲ್ಲದಿದ್ದರೆ, ಉತ್ಪಾದನಾ ಶಕ್ತಿಗಳ ಹೆಚ್ಚಳಕ್ಕಾಗಿ ಜೈವಿಕ ಇಂಧನಗಳನ್ನೇ ನಾಶಪಡಿಸುವ ಅಪಾಯವಿತ್ತು. ಖನಿಜಾನಿಗಳ ಅನ್ವೇಷಣೆಗೆ ಮತ್ತು ಅವುಗಳ ಬಳಕೆಯಿಂದಾಗಿ ಮನುಷ್ಯನ ಉತ್ಪಾದನಾ ಸಾಮರ್ಥ್ಯದಲ್ಲಿ ಅನಿರೀಕ್ಷಿತ ಪ್ರಗತಿಯಾಯಿತು. ಆದರೆ ಇದೇ ಖನಿಜಾನಿಲಗಳ ಬಳಕೆಯು ಮಾನವ ಕುಲಕ್ಕೆ ಅಪಾಯವನ್ನೂ ತಂದೊಡ್ಡುತ್ತಿದೆ. ಖನಿಜಾನಿಲಗಳನ್ನು ಬಳಸದಂತಹ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವಲ್ಲಿ ನಾವು ವಿಫಲವಾದರೆ ಖಂಡಿತ ಮಾನವ ಕುಲಕ್ಕೆ ಈ ಬೆಳವಣಿಗೆಗಳು ಬೆದರಿಕೆಯಾಗುತ್ತವೆ.

### ತಾಂತ್ರಿಕ ಬಿಕ್ಕಟ್ಟಷ್ಟೇ ಅಲ್ಲ

ಹಾಗಿದ್ದಾಗ್ಯೂ ಜಾಗತಿಕ ತಾಪಮಾನ ಏರಿಕೆ-ಯು ಕೇವಲ ತಂತ್ರಜ್ಞಾನದ ಅಭಿವೃದ್ಧಿಯಿಂದಲೇ ಸರಿಪಡಿಸಬಹುದಾದ ತಾಂತ್ರಿಕ ಬಿಕ್ಕಟ್ಟು ಎಂದು ಯೋಚಿಸುವುದು ತಪ್ಪಾಗುತ್ತದೆ. ನಮ್ಮ ಸದ್ಯದ ಉತ್ಪಾದನಾ ಸಂಬಂಧಗಳೇ ಈ ಪರಿಸ್ಥಿತಿಯನ್ನು ನಿಭಾಯಿಸಲು ಇರುವ ತೊಡಕುಗಳು ಎಂಬುದು ಸರಿಯಾದ ನಿಲುವಾಗಬಹುದು. ನಿಖರವಾಗಿ ಹೇಳಬೇಕೆಂದರೆ ಬಂಡವಾಳಶಾಹಿ ಅಥವಾ ಸಾಮ್ರಾಜ್ಯಶಾಹಿ ಸೃಷ್ಟಿಸಿರುವ ಅಸಮಾನ ಜಾಗತಿಕ ಸಮಾಜವೇ ಈ ಹವಾಮಾನದ ಬಿಕ್ಕಟ್ಟನ್ನು ಸರಿಪಡಿಸಲು ನಿಜವಾದ ಅಡ್ಡಿ. ಹವಾಮಾನದ ಬಿಕ್ಕಟ್ಟನ್ನು ಸರಿಪಡಿಸುವ ಹಾದಿಯಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳ ನಡುವಿನ ಅಂತರ ಇದರಲ್ಲಿ ಮುಖ್ಯವಾದುದ್ದು. ಜಾಗತಿಕ ತಾಪಮಾನಕ್ಕೆ ಕಾರಣವಾಗಿರುವ ದೇಶಗಳು ಅಥವಾ ಅವರ ಬಂಡವಾಳ ತಮಗೆ ಧ-ಕ್ಕೆಯಾಗದಂತೆ, ಲಾಭಕ್ಕೆ ಕುತ್ತು ಬಾರದಂತೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಬಂಡವಾಳದಾರರು ತಮ್ಮ ಲಾಭಕ್ಕೆ ಅಡ್ಡಿಯಾಗದಂತೆ ಈ ಸಮಸ್ಯೆಗೆ ಪರಿಹಾರ ಹುಡುಕಲು ಬಯಸುತ್ತಾರೆ. ಇದು ಇದುವರೆಗೆ ಹವಾಮಾನ ಬದಲಾವಣೆ ಕುರಿತ ಅಂತರಾಷ್ಟ್ರೀಯ ವೇದಿಕೆಗಳಲ್ಲಿ ನಡೆದು ಬಂದಿರುವ ಬೆಳವಣಿಗೆ.

ಜಾಗತಿಕ ತಾಪಮಾನಕ್ಕೆ ಕಾರಣವಾಗುತ್ತಿರುವ ಇಂಗಾಲದ ಡೈ ಆಕ್ಸೈಡ್‌ನ್ನು ಅಭಿವೃದ್ಧಿ ಹೊಂದಿದ ದೇಶಗಳು ದೊಡ್ಡ ಪ್ರಮಾಣದಲ್ಲಿ ಬಿಡುಗಡೆ ಮಾಡುತ್ತಿವೆ ಎಂಬುದು ಸತ್ಯ. 1870ರಿಂದ 2000 (ಅಂದರೆ ಕೈಗಾರಿಕಾ ಕ್ರಾಂತಿಯ ನಂತರ) ಅವಧಿಗೆ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಪಾಲಿಗಿಂತ ಎಷ್ಟೋ ಹೆಚ್ಚು ಇಂಗಾಲವನ್ನು ಪರಿಸರಕ್ಕೆ ಬಿಡುಗಡೆ ಮಾಡಿವೆ. ಹಾಗಾಗಿ ಅಮೇರಿಕಾ, ಯೂರೋಪ್ ಒಕ್ಕೂಟ ಸೇರಿದಂತೆ ಅಭಿವೃದ್ಧಿ ಹೊಂದಿರುವ ದೇಶಗಳು ಕಾರ್ಬನ್ ಬಿಡುಗಡೆಯ ಮೇಲೆ ಸ್ವ-ಯಂ ನಿಯಂತ್ರಣ ಹೇರಿಕೊಳ್ಳಬೇಕು, ಅಂದರೆ ತಮ್ಮ ಕೈಗಾರಿಕಾ ಚಟುವಟಿಕೆಗಳ ಮೇಲೆ ನಿಯಂತ್ರಣ ಹಾಕಬೇಕು, ಇದಕ್ಕಾಗಿ ಹೆಚ್ಚಿನ ಹಣಕಾಸಿನ ನೆರವು ನೀಡಬೇಕು. ಆದರೆ ಹಾಗೆ ಮಾಡಲು ನಿರಾಕರಿಸುವ ಈ ದೇಶಗಳು ಇನ್ನೂ ಕೈಗಾರಿಕೆಯಲ್ಲಿ ಪ್ರಗತಿ ಕಾಣಬೇಕಿರುವ ಬಡದೇಶಗಳನ್ನು ಕಾರ್ಬನ್ ಬಿಡುಗಡೆ ಮಾಡುವುದನ್ನು ನಿಯಂತ್ರಿಸಲು ಒತ್ತಾಯಿಸುತ್ತಿವೆ. ಇದರಿಂದಾಗಿ ಈ ದೇಶಗಳು ಕೈಗಾರಿಕೆಯಲ್ಲಿ ಪ್ರಗತಿ ಸಾಧಿಸದಂತೆ, ಆ ಮೂಲಕ ಶಾಶ್ವತವಾಗಿ ಇನ್ನೂ ಅವಲಂಬಿತ ದೇಶಗಳಾಗೇ ಉಳಿಯುವಂತೆ ಮಾಡುವ ಹುನ್ನಾರವನ್ನು ಶ್ರೀಮಂತ ದೇಶಗಳು ಮಾಡುತ್ತಿವೆ. ಪ್ಯಾರೀಸ್ ಒಪ್ಪಂದದಲ್ಲಿ ಈ ವಿಚಾರದಲ್ಲಿ ಶ್ರೀಮಂತ ದೇಶಗಳು ಯಶಸಾಧಿಸಿದ್ದು, ಅಮೇರಿಕಾ ಇದನ್ನು ಐತಿಹಾಸಿಕ ಯಶಸ್ಸು ಎಂದು ಬಣ್ಣಿಸಿದೆ. ಆದರೆ ಭಾರತದಂತಹ ಇನ್ನೂ ಕೈಗಾರಿಕೆಯಲ್ಲಿ ಸಾಕಷ್ಟು ಹಿಂದುಳಿದಿರುವ ದೇಶಗಳು ಕಾರ್ಬನ್ ಹೊರಸೂಸುವಿಕೆಯನ್ನು ನಿಯಂತ್ರಿಸಿಕೊಳ್ಳುವಂತೆ ಒತ್ತಡ ಹೇರಲಾಗಿದೆ. ಚೈನಾ ಇಂತಹ ಒತ್ತಡಗಳನ್ನು ಮೀರಿ ನಿಂತಿದೆ.

### ಹವಾಮಾನ ವೈಪರೀತ್ಯ ಮತ್ತು ಭಾರತದ ಕೃಷಿ :

ಹವಾಮಾನದಲ್ಲಿ ಬದಲಾವಣೆಗಳು ಕೃಷಿಗೆ ಮಾರಕವಾಗುತ್ತಿವೆ. ವಿಶೇಷವಾಗಿ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಇದು ಆಹಾರ ಭದ್ರತೆಗೆ ಮಾರಕ ಪರಿಣಾಮಗಳನ್ನು ಉಂಟು ಮಾಡಬಹುದು. ಹವಾಮಾನದಲ್ಲಿನ ಉಷ್ಣಾಂಶದಲ್ಲಿನ ದಿಢೀರ್ ಹೆಚ್ಚಳ ಅದರಲ್ಲೂ ಚಳಿಗಾಲದ ಉಷ್ಣಾಂಶದಲ್ಲಿನ ಏರಿಕೆಯಿಂದಾಗಿ ನಮ್ಮ ಬೆಳೆ ವಿಧಾನವನ್ನೇ ಬದಲಾಯಿಸ ಬೇಕಾಗಬಹುದು. ನಾವೀಗ ನಿರ್ಧಿಷ್ಠ ಕೃಷಿ ಪೂರಕ ಪರಿಸರದಲ್ಲಿ ಬೆಳೆಗಳನ್ನು ಬೆಳೆಸುತ್ತಿದ್ದೇವೆ. ಹವಾಮಾನ ಬದಲಾವಣೆಯಿಂದಾಗಿ ಈ ರೀತಿ ಬೆಳೆ ಬೆಳೆಯಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಬಹುದು.




ಭಾರತದಲ್ಲಿ ಸರಾಸರಿ ವಾರ್ಷಿಕ ಉಷ್ಣಾಂಶ 1850ಕ್ಕೆ ಹೋಲಿಸಿದರೆ ಈಗ ಶೇ.0.72 ಡಿಗ್ರಿ ಸೆಲ್ಸಿಯಸ್ ನಷ್ಟು ಹೆಚ್ಚಳವಾಗಿದೆ. ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶಗಳೆರಡರಲ್ಲೂ ಏರಿಕೆಯಾಗಿದ್ದರೂ ಚಳಿಗಾಲದ ಉಷ್ಣಾಂಶದಲ್ಲಿ ಹೆಚ್ಚು ಏರಿಕೆ ಕಂಡುಬಂದಿದೆ. ಈ ರೀತಿಯ ಬದಲಾವಣೆಯಿಂದಾಗಿ ಮಳೆ ಬೀಳುವ ರೀತಿಯಲ್ಲಿ ವ್ಯತ್ಯಾಸವಾಗಿದೆ. ಇದರ ಗತಿ ಈಗ ನಿಧಾನವಾಗಿದ್ದರೂ ನಂತರ ದಿನಗಳಲ್ಲಿ ಇದೇ ಮುಖ್ಯ ಅಂಶವಾಗಲಿದೆ.

ಸರಾಸರಿ ವಾರ್ಷಿಕ ಮಳೆಯಲ್ಲಿ 1900ನೇ ಇಸ್ವಿಯಿಂದ ಇಲ್ಲಿಯವರೆಗೆ ತುಂಬಾ ವ್ಯತ್ಯಾಸವೇನು ಆಗಿಲ್ಲ. ಆದರೆ ಮಳೆ ಬೀಳುವ ದಿನಗಳು ಮತ್ತು ಪ್ರಮಾಣದಲ್ಲಿ ವ್ಯತ್ಯಾಸವಾಗಿದೆ. ಇದರಿಂದಾಗಿ ಕೆಲವು ಪ್ರದೇಶಗಳಲ್ಲಿ ಬೆಳೆ ಬೆಳೆಯುವ ಪ್ರದೇಶ ಮತ್ತು ಕಾಲವನ್ನು ಬದಲಾಯಿಸಿ ಕೊಳ್ಳಬೇಕಾಗಿ ಬಂದಿದೆ. ಹಿಮಾಚಲದಲ್ಲಿ ಸೇಬು ಬೆಳೆಯುವ ಘಟ್ಟಗಳ ಕಡೆ ಸರಿಯುತ್ತಿದೆ, ಪಂಜಾಬಿನಲ್ಲಿ ಗೋಧಿಯನ್ನು ಹಂಗಾಮಿಗಿಂತ ಮುಂದಾಗಿ ಬಿತ್ತಬೇಕಾಗಿ ಬಂದಿದೆ. ಹಾಗೆಯೇ ತಮಿಳುನಾಡಿನಲ್ಲಿ ಭತ್ತ ಬೆಳೆಯುವ ರೈತರು ಕಾಲ ಬದಲಾಯಿಸಿಕೊಳ್ಳುವ ಒತ್ತಡ ಎದುರಿಸುತ್ತಿದ್ದಾರೆ.

### ಅಸಮಾನತೆಯ ಮೇಲೂ ಪರಿಣಾಮ

ಹವಾಮಾನ ವ್ಯತ್ಯಾಸದಿಂದಾಗಿ ಇಳುವರಿಯ ಮೇಲೂ ಸಾಕಷ್ಟು ಪರಿಣಾಮಗಳು ಉಂಟಾಗುತ್ತಿವೆ. 1970ರಿಂದ ಇಲ್ಲಿಯವರೆಗೆ ದ್ವಿದಳ ಧ್ಯಾನ್ಯಗಳು, ಎಣ್ಣೆಕಾಳುಗಳ ಇಳುವರಿಯಲ್ಲಿ ಅಂತಹ ವ್ಯತ್ಯಾಸಗಳೇನೂ ಆಗಿಲ್ಲ. ಆದರೆ ಹೆಚ್ಚಳವೂ ಆಗಿಲ್ಲ, ಇದಕ್ಕೆ ಹವಾಮಾನ ಬದಲಾವಣೆಯ ಕಾರಣದ ಜೊತೆಗೆ ಇತರೆ ಕಾರಣಗಳು ಏನು ಎಂಬುದನ್ನು ಕಂಡು ಕೊಳ್ಳಬೇಕಿದೆ.

ಹವಾಮಾನ ವೈಪರೀತ್ಯದಿಂದಾಗಿ ಬೆಳೆಗಳ ವಿಧಾನ ಮತ್ತು ಅವುಗಳಿಗೆ ತಗಲುತ್ತಿರುವ ರೋಗಗಳು ಬದಲಾಗಿವೆ. ಹಾಗಾಗಿ ಬೆಳೆ ಬೆಳೆಯುವ, ರೋಗ ನಿಯಂತ್ರಿಸಲು ರೈತರು ಹೆಚ್ಚು ಹೂಡಿಕೆ ಮಾಡಬೇಕಾಗಿ ಬಂದಿದೆ. ಸಾರ್ವಜನಿಕ ಹೂಡಿಕೆ ಕಡಿಮೆಯಾಗಿರುವ ಈ ಸಂದರ್ಭದಲ್ಲಿ ರೈತ ವಿಪರೀತ ಒತ್ತಡದಲ್ಲಿ ವ್ಯವಸಾಯ ಮಾಡಿ ನಷ್ಟಕ್ಕೊಳಗಾಗುತ್ತಿದ್ದಾನೆ. ಆದ್ದ-ರಿಂದ ಆತ್ಮಹತ್ಯೆಗಳೂ ಹೆಚ್ಚಾಗುತ್ತಿವೆ.

ಹವಾಮಾನ ವೈಪರೀತ್ಯದಿಂದ ಉಂಟಾಗುತ್ತಿರುವ ಪರಿಣಾಮಗಳು ಈಗಾಗಲೇ ಇರುವ ಗ್ರಾಮೀಣ ಅಸಮಾನತೆಯನ್ನು ಮತ್ತಷ್ಟು ಹೆಚ್ಚು ಮಾಡುತ್ತಿವೆ. ವಾತಾವರಣದಲ್ಲಿ ಉಷ್ಣಾಂಶ ಏರಿಕೆ ಕಂಡ ವರ್ಷಗಳಲ್ಲಿ ಇಳುವರಿ ಕಡಿಮೆ ಆಗುತ್ತಿರುವುದನ್ನೂ ಕಾಣಬಹುದು. ಹವಾಮಾನ ವೈಪರೀತ್ಯದಿಂದ ಭಾರತದ ರೈತಾಪಿಯ ವಿವಿಧ ವರ್ಗಗಳ ಮೇಲೆ ಬೇರೆ, ಬೇರೆ ರೀತಿಯ ಪರಿಣಾಮಗಳು ಉಂಟಾಗುತ್ತಿವೆ. ಶ್ರೀಮಂತ ರೈತರು ಬೆಳೆಯುವ ಬೆಳೆಗೆ ಬರುವ ಖರ್ಚಿಗಿಂತ, ಬಡವರು ಮಾಡಬೇಕಾದ ಖರ್ಚು ಹೆಚ್ಚಾಗುತ್ತಿದೆ. ಇದರಿಂದ ಬಡರೈತರ ಆದಾಯವೂ ಕುಗ್ಗಿ ಏನೂ ಲಾಭವಿಲ್ಲದೆ ಕೃಷಿ ಮಾಡುವಂತಾಗಿದೆ. ಹವಾಮಾನ ವೈಪರೀತ್ಯವೂ ಬಡವ ಮತ್ತು ಶ್ರೀಮಂತರ ನಡುವಿನ ಕಂದರವನ್ನು ದೊಡ್ಡದು ಮಾಡುತ್ತಿದೆ.

ಹವಾಮಾನ ಬದಲಾವಣೆಯು ಕೃಷಿ, ರೈತ ಮತ್ತು ಜೀವ ಸಂಕುಲವನ್ನೇ ವಿನಾಶಕ್ಕೆ ದೂಡುವ ರೀತಿಯಲ್ಲಿ ಬರುತ್ತಿದೆ. ಮುಂದಿನ ದಿನಗಳಲ್ಲಿ ಉಷ್ಣಾಂಶದಲ್ಲಿನ ಏರಿಕೆಯು ಇನ್ನೂ ತೀವ್ರಗೊಳ್ಳಲಿದೆ ಎಂಬ ಎಚ್ಚರಿಕೆಯನ್ನು ಅನೇಕ ವಿಜ್ಞಾನಿಗಳು ನೀಡಿದ್ದಾರೆ. ಆದರೆ ಹವಾಮಾನ ಬದಲಾವಣೆಗೆ ಮುಖ್ಯ ಕಾರಣಕರ್ತರಾದ ಶ್ರೀಮಂತ ದೇಶಗಳು ಮತ್ತು ಅಲ್ಲಿನ ಬಂಡವಾಳದಾರರು ಇದನ್ನು ತಡೆಯಲು ಯಾವ ಪ್ರಯತ್ನವನ್ನು ಮಾಡದೆ, ತಮ್ಮ ಲಾಭದ ದಾಹದಲ್ಲಿ ಮತ್ತಷ್ಟು ಪರಿಸರ ಹಾನಿಗೆ ಮುನ್ನುಗುತ್ತಿದ್ದಾರೆ. ಇದರ ವಿರುದ್ಧ ಧ್ವನಿಯೆತ್ತಬೇಕಾದ ಭಾರತ ಸರ್ಕಾರ ಸಾಮ್ರಾಜ್ಯಶಾಹಿ ಒತ್ತಡದ ಮುಂದೆ ಬಾಯಿಮುಚ್ಚಿಕೊಂಡು ಕುಳಿತಿದೆ.

### PÉÃ½ZÀÄÝ

ಜೆಎನ್‌ಯು, ಹೈದರಾಬಾದ್ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯ, ಮದ್ರಾಸ್ ಐಐಟಿ ಕ್ಯಾಂಪಸ್ ಗಳಲ್ಲಿ ಇತ್ತೀಚಿಗೆ ನಡೆದ ವಿದ್ಯಾರ್ಥಿ ಚಳವಳಿಗಳಿಂದ ಆಳುವ ವರ್ಗ ಭಯಗೊಂಡಿರುವ ಹಾಗೆ ಕಾಣುತ್ತದೆ. ಹಾಗಾಗಿಯೇ ವಿಶ್ವ ವಿದ್ಯಾಲಯಗಳಲ್ಲಿ ವಾಕ್ ಸ್ವಾತಂತ್ರ್ಯಕ್ಕೆ ಕಡಿವಾಣ ಹೇರಲು ಶಿಫಾರಸು ಮಾಡಲಾಗಿದೆ. ಇದರ ಬದಲು, ಕೇಂದ್ರ ಸರಕಾರದ ಹರಕು ಬಾಯಿಯ ಸಂಸದರ ಮೇಲೆ ಅದನ್ನು ಪ್ರಯೋಗಿಸುವುದು ಉತ್ತಮ.

*–ರವಿನಂದನ್ ಬಿ.ಬಿ.,*
*ಪ್ರಜಾವಾಣಿ ಜೂನ್ 28*

## 1894ರ ಕರಾಳ ಭೂಸ್ವಾಧೀನ ಕಾಯ್ದೆಯ........... ಪುಟ 8 ರಿಂದ

ಪುನರ್ ನಿರ್ಮಾಣ ಸೌಲಭ್ಯಗಳಿಂದ ರಿಯಾಯಿತಿ ಕೊಡುವ ಮೂಲಕ ಮತ್ತೊಂದು, ಸಾಮಾಜಿಕ ಹಾಗೂ ಸಾರ್ವಜನಿಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ನೆರವು ನೀಡಲಿದೆ.

ಭೂ ಸ್ವಾಧೀನ ಕಾಯ್ದೆ–2013ರ ಅಧ್ಯಾಯ–05 ಪುನಶ್ಚೇತನ ಮತ್ತು ಪುನರವಸತಿಯು, ಯೋಜನೆಯಿಂದ ನಿರಾಶ್ರಿತರಾದವರಿಗೆ ಮತ್ತು ಭೂಮಿ ಕಳೆದುಕೊಂಡವರಿಗೆ ನೆರವಾಗಿದೆ. ಸಂತ್ರಸ್ತ ಕುಟುಂಬಗಳಿಗೆ 12 ತಿಂಗಳ ಕಾಲ ಮಾಸಿಕ 3000 ರೂಗಳಂತೆ ಜೀವನ ನಿರ್ವಹಣೆಯ ಪರಿಹಾರ ನೀಡಬೇಕೆನ್ನುತ್ತದೆ. ಮಾತ್ರವಲ್ಲ, ಸಂತ್ರಸ್ತ ಕುಟುಂಬಕ್ಕೆ ಯೋಜನೆಯಲ್ಲಿ ಒಂದು ಉದ್ಯೋಗ ಕೊಡುವುದನ್ನು ಶಾಸನಬದ್ಧಗೊಳಿಸಿದೆ ಅಥವಾ 05 ಲಕ್ಷ ರೂಗಳ ಪರಿಹಾರ ಅಥವಾ ಸಂತ್ರಸ್ತ ಕುಟುಂಬಕ್ಕೆ ಪ್ರತಿ ತಿಂಗಳ 2000 ರೂಗಳಂತೆ 20 ವರ್ಷಗಳ ಕಾಲ ವೇತನದಂತೆ ಪಡೆಯಲು ಅವಕಾಶ ಒದಗಿಸಿದೆ.

ಅದೇ ರೀತಿ, ಮನೆಯನ್ನು ಕಳೆದುಕೊಂಡು ನಿರ್ವಸಿತರಾದ ಕುಟುಂಬಕ್ಕೆ ಇಂದಿರಾ ಆವಾಸ್ ಮಾದರಿಯಲ್ಲಿ ಮನೆಯನ್ನು ನಿರ್ಮಿಸಿಕೊಡಲು ಸೂಚಿಸುತ್ತದೆ ಹಾಗೂ ನೀರಾವರಿ ಯೋಜನೆಗಳಿಗಾಗಿ ಜಮೀನು ಕಳೆದು ಕೊಂಡಿದ್ದಲ್ಲಿ, ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಒಂದು ಎಕರೆ ನೀರಾವರಿ ಜಮೀನು ನೀಡಲು ಹೇಳುತ್ತದೆ. ಹಾಗೇ ನಿರ್ವಸಿತ ಪ್ರದೇಶದಿಂದ ಹೊರ ನಡೆಯಲು ಅಥವ ಪುನರ್ ವಸತಿ ಪ್ರದೇಶಕ್ಕೆ ಸಾಗಲು 50 ಸಾವಿರ ರೂಗಳ ಸಾಗಾಣೆ ವೆಚ್ಚ ನೀಡಲು ಹೇಳಿದೆ. ಒಂದು ಬಾರಿಯ ಪುನರ್ ವಸತಿಯ ವೇತನವಾಗಿ 50 ಸಾವಿರ ನೀಡಲು ಹೇಳಿದೆ.

ಹಾಗೇನೇ, ಪರಿಶಿಷ್ಠ ಜಾತಿ ಹಾಗೂ ಪಂಗಡದವರಿಗೆ ಪುನಶ್ಚೇತನ ಮತ್ತು ಪುನರ್‌ವಸತಿ ಅನುಕೂಲಗಳ ಜೊತೆ ಇತರೇ ಅನುಕೂಲಗಳನ್ನು ಮಾಡಿಕೊಡಲಾಗಿದೆ. ಯಾವುದೇ ಭೂಸ್ವಾಧೀನದಲ್ಲಿ ಭೂಮಿ ಕಳೆದು ಕೊಂಡ ಈ ಕುಟುಂಬಗಳಿಗೆ ಪರಿಹಾರವಾಗಿ ಭೂಮಿಯನ್ನು ನೀಡಬೇಕು. ಅದೇ ರೀತಿ, ಒಂದು ಬಾರಿಯ ಪರಿಹಾರವಾಗಿ 50,000ರೂಗಳನ್ನು ಕೊಡಬೇಕು. ಹಾಗೇ ಜಿಲ್ಲೆಯಿಂದ ಹೊರಗೆ ಹೋಗಬೇಕಾಗಿ ಬಂದಲ್ಲಿ ಪುನಶ್ಚೇತನ ಮತ್ತು ಪುನರ್ ವಸತಿಯ ಅನೂಕೂಲಗಳನ್ನು ಶೇ 25ರಷ್ಟು ಹೆಚ್ಚುವರಿಯಾಗಿ ನೀಡಬೇಕು ಮುಂತಾದ ಅಂಶಗಳು ಒಳಗೊಂಡಿವೆ. ಇಂತಹ ಯಾವುದೇ ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳಲು ಸರಕಾರ ಮತ್ತು ಇಲಾಖೆಗಳಿಗೆ ಮತ್ತು ಸರಸ್ಥೆಗಳಿಗೆ ಈ ಹೊಸ ಆದೇಶ ಅನುಕೂಲ ಮಾಡಿಕೊಟ್ಟಿದೆ.

**ಮತ್ತೊಮ್ಮೆ ಬೆತ್ತಲಾದ ಕಾಂಗ್ರೆಸ್:**

ಒಟ್ಟಾರೆ, ಕರ್ನಾಟಕ ಸರಕಾರದ ಮೂಲ ಸೌಕರ್ಯದಂತಹ ಸೂಚಿತ ಯೋಜನೆಗಳಿಗೆ ತ್ವರಿತವಾಗಿ ಜಮೀನು ಒದಗಿಸುವ ಮೂಲ ಸೌಕರ್ಯ ಬಲಪಡಿಸಲು ತುಡಿತ ತೋರಿಸುವಾಗಲೇ, ಯೋಜನೆಗಳಿಗೆ ತಮ್ಮ ಆಸ್ತಿಪಾಸ್ತಿಗಳನ್ನು ಬಿಟ್ಟುಕೊಡುವ ಮತ್ತು ಅದರಿಂದ ಬಾಧಿತರಾಗುವ ರೈತರು ಅಥವಾ ಭೂ ಸಂತ್ರಸ್ತರ ಅಗತ್ಯವಾದ ಅವರ ಹಕ್ಕುಗಳನ್ನು ಕಾಪಾಡುವ ಮತ್ತು ನೆರವಾಗುವ ಇಚ್ಛಾಶಕ್ತಿಯನ್ನು ತೋರದಿರುವುದು ಹಾಗೂ ತನ್ನ ಸಾಮಾಜಿಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಯತ್ನಿಸುತ್ತಿರುವುದು ಇದರಿಂದ ಬಯಲಾಗುತ್ತಿದೆ. ಇದೊಂದು ನಾಚಿಕೆಗೇಡಿನ ವಿಚಾರವಾಗಿದೆ, ಆದರೆ ಆಶ್ಚರ್ಯಕರವಾದುದೇನಾಗಿಲ್ಲ. ಬದಲಿಗೆ, ಅದರ ದುಡಿಯುವ ಜನಗಳಿಗೆ ವಿರುದ್ಧವಾದ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ನೀತಿಯ ಭಾಗವೇ ಆಗಿದೆ. ತ್ವರಿತವಾಗಿ ಜಮೀನುಗಳನ್ನು ಒದಗಿಸುವ ಉದ್ದೇಶದೊಂದಿಗೆ ಜಾರಿಗೆ ತರುತ್ತಿರುವ ಈ ಹೊಸ ಆದೇಶವು, ಬಹುತೇಕ 1894 ರ ಭೂಸ್ವಾಧೀನ ಕರಾಳ ಕಾಯ್ದೆಯ ಪಡಿಯಚ್ಚೇ ಆಗಿದೆಯೆಂಬುದನ್ನು ಈ ವಿಶ್ಲೇಷಣೆ ಬಿಚ್ಚಿಡುತ್ತದೆ. ನರೇಂದ್ರಮೋದಿ ನೇತೃತ್ವದ ಎನ್‌ಡಿಎ ಸರಕಾರ ಭೂಸ್ವಾಧೀನ ಕಾಯ್ದೆ– 2013ನ್ನು ಬುಡಮೇಲು ಮಾಡಿ, ಮೂರು ಬಾರಿ ಸುಗ್ರೀವಾಜ್ಞೆ ಹೊರಡಿಸಿ ಅದನ್ನು ಮರಳಿ ಕರಾಳ ಕಾಯ್ದೆಯನ್ನಾಗಿಸಲು ಶತಾಯ ಗತಾಯ ವಿಫಲ ಪ್ರಯತ್ನ ಮಾಡಿದ ಕ್ರಮಗಳ ಮುಂದುವರೆದ ಭಾಗವಾಗಿಯೇ ಇದು ಬಂದಿದೆ. ನರೇಂದ್ರ ಮೋದಿಯವರ ಸುಗ್ರೀವಾಜ್ಞೆಯ ಮೂಲಕ ಮಾಡಲಾದ ತಿದ್ದುಪಡಿಗಳಿಗೆ ಆಗ ಈ ರಾಜ್ಯ ಸರಕಾರ ಬೆಂಬಲಿಸಿದುದನ್ನು ಇಲ್ಲಿ ಸಕಾರಣವಾಗಿಯೇ ನೆನಪಿಸಿ ಕೊಳ್ಳಬಹುದಾಗಿದೆ. ದೇಶದ ಜನತೆಯ ಒತ್ತಾಯದ ಮೇರೆಗೆ, ತನಗೆ ಇಷ್ಟವಿಲ್ಲದಿದ್ದರೂ, ಸ್ವಲ್ಪವಾದರೂ ಜನತೆಗೆ ನೆರವಾಗಬಲ್ಲ ಭೂ ಸ್ವಾಧೀನ ಕಾಯ್ದೆ ಜಾರಿಗೆ ತಂದ ಇದೇ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದ ಕಾಯ್ದೆಯನ್ನು ಅದೇ ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರಕಾರ ಬುಡಮೇಲು ಮಾಡಿದೆ. ಈ ಮೂಲಕ ಭೂಸಂತ್ರಸ್ತರ ಕುರಿತ ಕಾಂಗ್ರೆಸ್‌ನ ಹುಸಿ ಕಾಳಜಿಯನ್ನು ಇದು ಮತ್ತೊಮ್ಮೆ ಬಯಲುಗೊಳಿಸಿದೆ.

ರೈತರು, ಪ್ರಗತಿಪರರು, ಸಂಘ ಸಂಸ್ಥೆಗಳು ನಾಗರೀಕರು ಮತ್ತು ಭೂಸಂತ್ರಸ್ತರ ವಿರೋಧಿಯಾದ ಈ ಆದೇಶವನ್ನು ತಕ್ಷಣವೇ ವಾಪಾಸು ಪಡೆಯುವಂತೆ ಮತ್ತು ಸರಕಾರ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸುವಂತೆ ಒತ್ತಾಯಿಸಿ, ಬಲವಾದ ಐಕ್ಯ ಚಳುವಳಿಯಲ್ಲಿ ತೊಡಗಿ ಯಶಸ್ವಿಯಾಗುವುದೊಂದೆ ಇದರ ಅಪಾಯದಿಂದ ತಪ್ಪಿಸಿಕೊಳ್ಳಲಿರುವ ಏಕೈಕ ದಾರಿಯಾಗಿದೆ. ಅದಾಗದಿದ್ದಲ್ಲಿ ಲಕ್ಷಾಂತರ ಕುಟುಂಬಗಳು ಅಭಿವೃದ್ಧಿಯ ಹೆಸರಿನ ಈ ದಾಳಿಗೊಳಗಾಗ ಬೇಕಾಗುತ್ತದೆ. ●

## ಹವಾಮಾನ ವೈಪರೀತ್ಯ, ಕೃಷಿಯ ಮೇಲೆ ಪರಿಣಾಮ....... ಪುಟ 9 ರಿಂದ

ಕೂಡ ಇದನ್ನು ಎಲ್ಲೂ ಕೂಡ ಜಾರಿ ಮಾಡುವ ಪ್ರಯತ್ನ ಆಗಲಿಲ್ಲ. ಜಾರಿ ಮಾಡಬೇಕು ಅಂತ ಕೂಡ ಭಾರತವೂ ಸೇರಿ, ಯಾರೂ ಕೇಳಲಿಲ್ಲ. ಹಾಗಾಗಿ ಇವತ್ತು ಜಗತ್ತಿನ ಎಲ್ಲಾ ಹಿಂದುಳಿರುವಂತ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಮುಖಾಂತರ ಹವಾಮಾನದ ಮೇಲೆ ಅತ್ಯಂತ ಕೆಟ್ಟ ಪರಿಣಾಮಗಳು ಆಗುತ್ತಾ ಇವೆ. ಇದು ಭಾರತದಂತ ದೇಶಕ್ಕೇ ಸೀಮಿತವಾಗಿಲ್ಲ. ಹವಾಮಾನದ ವೈಪರೀತ್ಯ ಮತ್ತು ಹವಾಮಾನ ಬದಲಾವಣೆ ಇಡೀ ಜಗತ್ತನ್ನೇ ಆವರಿಸಿದೆ.

ಈ ಹವಾಮಾನದ ಪರಿಣಾಮ ಇವತ್ತು ಕೃಷಿ ಮೇಲೆ ಯಾವ ರೀತಿ ಆಗುತ್ತಿದೆ ಅಂತ ಮಧುರಾ ಸ್ವಾಮಿನಾಥನ್‌ರವರು ಹೇಳಿದ್ದಾರೆ. ಪ್ರಯೋಗಾಲಯದಲ್ಲಿ ಬೆಳೆದು ಪಡೆದ ಇಳುವರಿಗೂ ಜಮೀನಿನಲ್ಲಿ ಬೆಳೆದು ಪಡೆದ ಇಳುವರಿಗೂ ಅಂತರ ಹೆಚ್ಚುತ್ತಿರುವುದು ಕರ್ನಾಟಕದ ಕೃಷಿ ರಂಗದ ಮೇಲಿನ ಹವಾಮಾನ ವೈಪರೀತ್ಯದಿಂದಾಗುವ ಪರಿಣಾಮಕ್ಕೆ ಉದಾಹರಣೆ ಎಂದು ಅವರು ಹೇಳಿದ್ದಾರೆ. ಅಲ್ಲದೆ ಇಂತಹ ಬೆಳವಣಿಗೆಗಳ ಪರಿಣಾಮವು ಈಗಾಗಲೇ ಇರುವ ಗ್ರಾಮೀಣ ಅಸಮಾನತೆಯನ್ನು ಕೂಡ ಮತ್ತಷ್ಟು ಹೆಚ್ಚಿಸುತ್ತದೆ ಎಂದು ಅವರು ಹೇಳಿದ್ದಾರೆ. ಈ ಪರಿಣಾಮ ರೈತರ ಮೂರು ವಿಭಾಗಗಳ ಮೇಲೆ ಸಮಾನವಾಗಿ ಆಗುವುದಿಲ್ಲ. ಮಧ್ಯಮ ಮತ್ತು ಬಡ–ರೈತರು ಬೆಳೆಗಳಿಗೆ ಮಾಡುವ ಖರ್ಚು ಶ್ರೀಮಂತ ರೈತರಿಗಿಂತ ಎರಡು ಪಟ್ಟು ಹೆಚ್ಚು ಇರುತ್ತದೆ ಎಂಬುದು ಅವರು ತಮ್ಮ ಅಧ್ಯಯನದಲ್ಲಿ ಕಂಡು–ಕೊಂಡ ಸಂಗತಿ.

ಇದು ಬಹಳ ಮುಖ್ಯವಾಗಿ ನಾವು ರೈತರಾಗಿ ಗಮನಿಸಬೇಕಾದ ಅಂಶ. ಈ ವ್ಯತ್ಯಾಸ ಅಂ–ದರೆ ಬಂಡವಾಳ ಹೂಡಿಕೆಯಲ್ಲಿರುವಂತ ವ್ಯತ್ಯಾಸ ಅತ್ಯಂತ ಕೆಟ್ಟ ಪರಿಣಾಮ ಬೀರುವಂತದ್ದು, ಬಹುತೇಕ ರೈತರ ಮೇಲೆ. ಯಾಕೆಂದರೆ ಭಾರತದಲ್ಲಿ ಬಡರೈತರು ಮತ್ತು ಮಧ್ಯಮ ರೈತರು ಹೆಚ್ಚು ಸಂಖ್ಯೆಯಲ್ಲಿ ಇದ್ದಾರೆ. ಸಂಖ್ಯೆ ಗಂಭೀರವಾದಂತ ಪರಿಣಾಮ ಬೀರುತ್ತೆ. ಬೆಲೆ ನಿಗದಿಯಾಗುವಂತಹ ಸಂದರ್ಭದಲ್ಲಿ ನಷ್ಟಕ್ಕೆ ಒಳಗಾಗುವಂತಹವರು ಬಡ ರೈತರು ಮತ್ತು ಮಧ್ಯಮ ವರ್ಗದ ರೈತರು. ಇದಕ್ಕೆ ಪರಿಹಾರ ಏನು?

ಕೃಷಿ ತಜ್ಞ ಡಾ.ಎಂ.ಎಸ್.ಸ್ವಾಮಿನಾಥನ್ ಹತ್ತು ವರ್ಷಗಳ ಹಿಂದೆ, 2006ರಲ್ಲೇ ಬಹಳ ಸ್ಪಷ್ಟವಾಗಿ ವರದಿ ಕೊಟ್ಟಿದ್ದಾರೆ. ರೈತರು ಹಾಕುವಂತಹ ಬಂಡವಾಳದ ಮೇಲೆ 50 ಶೇ. ಲಾಭ ಬರುವ ರೀತಿಯಲ್ಲಿ ದರ ನಿಗದಿ ಮಾಡಿ ಎಂದು ಆ ವರದಿ ಶಿಫಾರಸು ಮಾಡಿದೆ. ಅವರನ್ನು ಈ ಅಧ್ಯಯನಕ್ಕೆ ನೇಮಿಸಿದ ಯುಪಿಎ ಯ ಎರಡೂ ಸರ್ಕಾರಗಳು ಅದನ್ನು ಜಾರಿ ಮಾಡಲಿಕ್ಕೆ ಹೋಗಲಿಲ್ಲ. ಅದನ್ನು ಜಾರಿ ಮಾಡುವುದಾಗಿ ಭರವಸೆ ಕೊಟ್ಟು ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ಈಗ ಅದನ್ನು ಜಾರಿ ಮಾಡುವುದಿಲ್ಲ, ಏಕೆಂದರೆ ಹಾಗೆ ಕನಿಷ್ಟ ಬೆಂಬಲ ಬೆಲೆ ನಿಗದಿ ಮಾಡಲು ಸಾಧ್ಯವಿಲ್ಲ ಎಂದು ಬಹಳ ಸ್ಪಷ್ಟವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಅಫಿಡವಿಟ್ ಹಾಕಿ ಬಿಟ್ಟಿದೆ ಅಂದರೆ, ಆ ವರದಿಗೆ ಸಮಾಧಿ.

ಹಾಗಾದರೆ ಈ ರೈತರನ್ನು ರಕ್ಷಣೆ ಮಾಡುವವರು ಯಾರು? ರಕ್ಷಣೆ ಕೊಡಬೇಕಾದ ಸರಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸದೆ ಇದ್ದಾಗ ರೈತರು ಚಳುವಳಿಯ ಮೂಲಕ ಸರ್ಕಾರದ ಮೇಲೆ ಒತ್ತಡವನ್ನು ತರದೆ, ಆ ನೀತಿಗಳನ್ನು ಬದಲಾವಣೆ ಮಾಡಿಸದೆ, ರೈತರನ್ನು ರಕ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಇಲ್ಲಿ ಮುಖ್ಯವಾದಂತಹ ಪ್ರಶ್ನೆ–ರೈತರನ್ನು ರಕ್ಷಣೆ ಮಾಡುವಂತಹದ್ದು. ಅಂದರೆ ಕೃಷಿಯನ್ನು ರಕ್ಷಣೆ ಮಾಡುವುದು. ರೈತರ ರಕ್ಷಣೆ ಇಲ್ಲದೆ, ಕೃಷಿಯ ರಕ್ಷಣೆ ಅಗುವುದಿಲ್ಲ. ಕೃಷಿಯ ರಕ್ಷಣೆ ಇಲ್ಲದಿದ್ದರೆ ಈ ದೇಶದ ರಕ್ಷಣೆ ಆಗುವುದಿಲ್ಲ. ಇದನ್ನು ಸ್ಪಷ್ಟವಾಗಿ ನಾವು ಅರ್ಥ ಮಾಡಿಕೊಳ್ಳಬೇಕು.

ಕೃಷಿ ಉಳಿದರೆ ದೇಶ ಉಳಿಯುತ್ತೆ, ರೈತ ಉಳಿದರೆ ಕೃಷಿ ಉಳಿಯುತ್ತೇ ಅಂದರೆ ಇದರ ಒಟ್ಟು ಸಾರಾಂಶ– ರೈತ ಉಳಿದರೆ ದೇಶ ಉಳಿಯುತ್ತೆ, ಇಲ್ಲದಿದ್ದರೆ ದೇಶ ಉಳಿಯೋದಿಲ್ಲ. ಆದರೆ, ಎರಡು ವರ್ಷಗಳಿಂದ ನಾವು ನರೇಂದ್ರ ಮೋದಿ ಆಡಳಿತವನ್ನು ನೋಡುತ್ತಿದ್ದೇವೆ. ಕೃಷಿ ಮತ್ತು ರೈತನ ಬಗ್ಗೆ ಒಂದು ಸ್ಪಷ್ಟವಾದಂತ ನಿಲುವನ್ನು ತಳಿಯಲು ಮೋದಿ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಮೋದಿಯವರಿಗೆ, ಅಥವಾ ಬಿಜೆಪಿಗೆ ಅಥವಾ ಅವರ ಮಾರ್ಗದರ್ಶಕರಾದ ಆರ್.ಎಸ್.ಎಸ್.ಗೆ ಇವೆಲ್ಲ ಗೊತ್ತಿಲ್ಲವೆಂದಲ್ಲ. ಆದರೆ ಪ್ರಜ್ಞಾಪೂರ್ವಕವಾಗಿ ಕೃಷಿ ವಲಯವನ್ನು ನಿರ್ಲಕ್ಷಿಸಲಾಗುತ್ತಿದೆ. ಬಿಜೆಪಿಯ ಪ್ರಣಾಳಿಕೆಯಲ್ಲಾಗಲೀ, ಅವರ ಸಿದ್ಧಾಂತದಲ್ಲಾಗಲೀ ಭಾರತ ದೇಶದ ಕೃಷಿ, ಬಡ ಜನತೆ, ಜನರಿಗೋಸ್ಕರ ಅವರ ಬಳಿ ಯಾವ ಕಾರ್ಯಕ್ರಮವೂ ಅಲ್ಲ. ಅವರ ಕಾರ್ಯಕ್ರಮವೇ ಬೇರೆ. ಆ ಕಾರ್ಯಕ್ರಮ ಜಾರಿ ಮಾಡಲಿಕ್ಕೆ ಬೇಕಾದಂತ ಎಲ್ಲಾ ವ್ಯವಸ್ಥೆಯನ್ನ ಈ ಸರ್ಕಾರ ಮಾಡುತ್ತಿದೆ.

ಈಗ ಮೋದಿ ಸರ್ಕಾರದ ಪ್ರತಿನಿಧಿಗಳು ಹವಾಮಾನ ವೈಪರೀತ್ಯ ಕುರಿತ ಪ್ಯಾರಿಸ್ ಘೋಷಣೆಗೆ ಸಹಿ ಹಾಕಿ ಬಂದಿದ್ದಾರೆ. ಅದಕ್ಕೆ ಮೊದಲು ಈ ಹಿಂದೆ ರಿಯೋ ಡಿ ಜನೈರೋದಲ್ಲಿ ಏನು ಚರ್ಚೆ ಆಗಿತ್ತು, ಏನು ಒಪ್ಪಂದಕ್ಕೆ ಸಹಿ ಹಾಕಿದ್ವಿ ಎಂಬುದರ ಪರಿಶೀಲನೆ ಮಾಡಿದಂತಿಲ್ಲ. ಆ ಬಗ್ಗೆ ಒಂದೇ ಒಂದೇ ಒಂದು ಮಾತು ಹೇಳದೆ ನಮಗೆ ಅನುಕೂಲವಾದಂತಹ ಒಪ್ಪಂದ ಪಡೆಯಲು ಸಾಧ್ಯವಾಗಿದೆ ಎಂದು ಈ ಸರಕಾರ ಜಂಭ ಕೊಚ್ಚಿಕೊಳ್ಳುತ್ತಿದೆ. ಇದು ನಿಜವಲ್ಲ. ಇಡೀ ಜಗತ್ತಿನ ವಾತಾವರಣವನ್ನು ನಾಶ ಮಾಡಲಿಕ್ಕೆ ಇನ್ನೊಂದು ಹೆಜ್ಜೆ ಮುಂದೆ ಹೋಗಿದೆ ಪ್ಯಾರೀಸ್ ಸಮ್ಮೇಳನ ಎಂಬುದನ್ನು ಗುರುತಿಸಬೇಕಾಗಿದೆ. ಇದರ ಹಿಂದೆ ಇರುವಂತಹ ಶಕ್ತಿಗಳು ಯಾವುವು ಎಂಬುದನ್ನು ಗುರುತಿಸಿ ಆ ಶಕ್ತಿಗಳ ವಿರುದ್ಧ, ಜಗತ್ತಿನ ಜನ– ಭಾರತದ ಜನ ಹೋರಾಟ ನಡೆಸದೆ, ಈ ಹವಾಮಾನದ ವೈಪರೀತ್ಯ ಮತ್ತು ಪರಿಣಾಮಗಳು, ವಿಶೇಷವಾಗಿ ನಮ್ಮ ಕೃಷಿಯ ಮೇಲಿನ ದುಷ್ಪರಿಣಾಮಗಳನ್ನು ನಾವು ಎದುರಿಸಲಿಕ್ಕೆ ಸಾಧ್ಯವಿಲ್ಲ.

ಇದು ನಮ್ಮ ಮುಂದೆ ಇರುವಂತಹ ಸವಾಲು, ಈ ವಾತಾವರಣದ ವೈಪರೀತ್ಯ ಮತ್ತು ಪರಿಣಾಮಗಳು ನಾವು ಜನರ ಮುಂದೆ ತೆಗೆದು–ಕೊಂಡು ಹೋಗಬೇಕು. ನಮ್ಮ ಚಳುವಳಿಯಲ್ಲಿ ಇದನ್ನು ಅಳವಡಿಸಬೇಕು, ಈ ಶಕ್ತಿಗಳ ವಿರುದ್ಧ, ರೈತರ ಫಸಲಿಗೆ ಸರಿಯಾದಂತ ಬೆಲೆ ಬರುವಂತಹ ರೀತಿಯಲ್ಲಿ ಹೋರಾಟವನ್ನು ರೂಪಿಸಬೇಕು. ●

# ‘ಎಲ್ಲರಿಗೂ ವಸತಿ’: ಗುರಿಯಿದ್ದದ್ದು 30 ಲಕ್ಷ ಮನೆಗಳು, ಕಟ್ಟಿದ್ದು 1623

## 2022ರ ವೇಳೆಗೆ 2ಕೋಟಿ ಮನೆಗಳು-ಇನ್ನೊಂದು ಮಾತಿನ ಮಂಟಪ?

ಕಳೆದ ವರ್ಷ ಜೂನ್ 25 ರಂದು ಪ್ರಧಾನ ಮಂತ್ರಿಗಳು ಭರವಸೆ ನೀಡಿದ ‘ಅಚ್ಛೇ ದಿನ್’ ಭಾಗವಾಗಿ ‘ಪ್ರಧಾನ ಮಂತ್ರಿ ಆವಾಸ್ ಯೋಜನಾ’ ಎಂಬುದನ್ನು ‘ಎಲ್ಲರಿಗೂ ವಸತಿ’ ಎಂಬ ಘೋಷಣೆಯೊಂದಿಗೆ ಬಹಳ ಅಬ್ಬರದಿಂದ ಆರಂಭಿಸಲಾಯಿತು. ನಗರಪ್ರದೇಶಗಳ ಬಡವರಿಗೆ ವರ್ಷಕ್ಕೆ 30ಲಕ್ಷದಂತೆ 2022ರೊಳಗೆ 2ಕೋಟಿ ಮನೆಗಳನ್ನು ಕಟ್ಟಿಕೊಡುವ ಯೋಜನೆಯಿದು.

ಈ ಜೂನ್ 25ರಂದು ಈ ಯೋಜನೆಗೆ ಒಂದು ವರ್ಷವಾಗಿದೆ. ಈ ಒಂದು ವರ್ಷದಲ್ಲಿ ಇದರ ಅನುಷ್ಠಾನದ ವೇಗವನ್ನು ನೋಡಿದರೆ ಇದು ಕೇವಲ ಕನಸಷ್ಟೇ ಎಂದು ಪತ್ರಕರ್ತರೊಬ್ಬರು ವಿಶ್ಲೇಷಿಸಿದ್ದಾರೆ(ಶಾಲಿನಿ ನಾಯರ್, ಇಂಡಿಯನ್ ಎಕ್ಸ್‌ಪ್ರೆಸ್, ಜೂನ್25)

ಜೂನ್ 25, 2016ರ ವೇಳೆಗೆ ಈ ಯೋಜನೆಯ ಅಡಿಯಲ್ಲಿ ಕಟ್ಟದ ಮನೆಗಳು ಕೇವಲ 1623. ಅಂದರೆ 0.05ಶೇ.

ಈ ಯೋಜನೆಯಲ್ಲಿ 1.5 ಲಕ್ಷ ರೂ. ಸಬ್ಸಿಡಿ ಕೊಡಲಾಗುತ್ತದೆ. ಅಂದರೆ ನಿಜವಾಗಿಯೂ 30ಲಕ್ಷ ಮನೆಗಳನ್ನು ಕಟ್ಟಿ ಕೊಡುವ ಗುರಿ ಸರಕಾರಕ್ಕಿದ್ದರೆ, ಅದು 45ಸಾವಿರ ಕೋಟಿ ರೂ.ಗಳನ್ನು ಈ ಯೋಜನೆಗೆ ಒದಗಿಸಬೇಕಾಗಿದೆ. ಆದರೆ 2016-17ರ ಬಜೆಟಿನಲ್ಲಿ ಅದು ಕೊಟ್ಟಿರುವುದು ಕೇವಲ 5000 ಕೋಟಿ ರೂ. ಅಂದರೆ ವಾಸ್ತವವಾಗಿ ಎರಡನೇ ವರ್ಷದಲ್ಲೂ ಗುರಿ ತಲುಪುವ ಸಾಧ್ಯತೆ ಇಲ್ಲ, ಈ ಗುರಿ ತಲುಪಬೇಕೆಂಬ ಆಶಯ ಕೂಡ ‘ಅಚ್ಛೇ ದಿನ್’ ಸರಕಾರಕ್ಕೆ ಇಲ್ಲ ಎಂಬುದು ಸ್ಪಷ್ಟ.

ಈಗಿರುವ ಕೊಳೆಗೇರಿಗಳ ಮರು -ಅಭಿವೃದ್ಧಿ ಈ ಯೋಜನೆಯ ಒಂದು ಉಪವಿಭಾಗ.ಇದರ ಅಡಿಯಲ್ಲಂತೂ ಈ ಒಂದು ವರ್ಷದಲ್ಲಿ ಒಂದೇ ಒಂದು ಮನೆಯನ್ನೂ ಕಟ್ಟಿಲ್ಲ. ಇದು ಖಾಸಗಿ ಬಿಲ್ಡರ್‌ಗಳನ್ನು ಅವಲಂಬಿಸಿರುವ ಉಪಯೋಜನೆ. ಈಗಿರುವ ಕೊಳೆಗೇರಿಗಳನ್ನು ಅವರು ಅಭಿವೃದ್ಧಿ ಪಡಿಸಬೇಕು, ಇದಕ್ಕೆ ಪ್ರತಿಯಾಗಿ ಉಳಿದ ಜಮೀನನ್ನು ಅವರು ತಮ್ಮ ರಿಯಲ್ ಎಸ್ಟೇಟ್‌ಗೆ ಬಳಸಬಹುದು.

ಈ ಯೋಜನೆಯಲ್ಲಿಯೂ ಮೋದಿ ಸರಕಾರ ಎಂದಿನಂತೆ ಖಾಸಗಿಯವರನ್ನು ವಿಪರೀತವಾಗಿ ಅವಲಂಬಿಸಿದೆ. ಇದೇ ಇಂತಹ ಭಾರೀ ವಿಫಲತೆಗೆ ಕಾರಣ ಎಂದು ವಸತಿ ರಂಗದಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರು ಅಭಿಪ್ರಾಯ ಪಡುತ್ತಾರೆ. ವಾಸ್ತವವಾಗಿ ಇದು ಈಗಾಗಲೇ ಮುಂಬೈ ಮತ್ತು ಗುಜರಾತದಲ್ಲಿ ವಿಫಲವಾಗಿರುವ ಮಾಡೆಲ್ ಎಂದು ಅವರು ಹೇಳುತ್ತಾರೆ.


ಸ್ವಂತ ಮನೆ ಕಟ್ಟಿಕೊಳ್ಳಬೇಕೆನ್ನುವ ಆರ್ಥಿಕವಾಗಿ ದುರ್ಬಲರಾಗುರುವ ವರ್ಗಕ್ಕೆ(ಇಡಬ್ಲ್ಯುಎಸ್) ಮತ್ತು ಕಡಿಮೆ ಆದಾಯದ ಗುಂಪಿ(ಎಲ್‌ಐಜಿ)ನವರಿಗೆ 6ಲಕ್ಷ ರೂ. ಸಾಲದ ವರೆಗೆ 6.5ಶೇ. ಬಡ್ಡಿ ಸಬ್ಸಿಡಿ ಕೊಡಲಾಗುತ್ತದೆ. ಈ ಉಪಯೋಜನೆಯ ಅಡಿಯಲ್ಲಿ ಮಾತ್ರ ತುಸು ಹೆಚ್ಚು ಅಂದರೆ 7700 ಮಂದಿ ಪ್ರಯೋಜನ ಪಡೆದಿದ್ದಾರೆ.

ಮಹಾನಗರಗಳಲ್ಲಿ ಈಗ ಒಂದು ಕಡಿಮೆ ಆದಾಯದ ಗುಂಪಿನ ಮನೆ ಕಟ್ಟಲು 8ಲಕ್ಷ ರೂ. ಬೇಕು. 6.5ಶೇ. ಬಡ್ಡಿ ಸಬ್ಸಿಡಿಯ ನಂತರವೂ ಈ ಸಣ್ಣ ಮನೆಯ ಸಾಲ ತೀರಿಸಲು ಪ್ರತಿತಿಂಗಳು ಕನಿಷ್ಠ 3000ರೂ. ಕಟ್ಟಬೇಕು. ಇದು ಬಹಳಷ್ಟು ಆರ್ಥಿಕವಾಗಿ ದುರ್ಬಲರಾಗಿರುವ/ ಕಡಿಮೆ ಆದಾಯದ ಕುಟುಂಬಗಳಿಗೆ ಅಸಾಧ್ಯವಾದ ಮಾತು ಎನ್ನುತ್ತಾರೆ ಅಭಿವೃದ್ಧಿ ಆರ್ಥಿಕ ತಜ್ಞ ಡಾ. ಅಮಿತಾಭ ಕುಂಡು. ಆದ್ದರಿಂದ ಅವರಿಗೆ ಬಾಡಿಗೆ ಮನೆ ಒದಗಿಸುವುದೇ ಕಾರ್ಯಸಾಧ್ಯ ಪರ್ಯಾಯ ಎನ್ನುತ್ತಾರೆ ವಸತಿ ತಜ್ಞರು.

ವಾಸ್ತವವಾಗಿ ಪ್ರಧಾನ ಮಂತ್ರಿ ಆವಾಸ್ ಯೋಜನಾದಲ್ಲಿ ಬಾಡಿಗೆ ಮನೆ ಒದಗಿಸುವ ಅಂಶವಿತ್ತು. ಆದರೆ ಪ್ರಧಾನಿಗಳು ಮಾಲಕತ್ವ ಆಧಾರದ ಮನೆಗಳನ್ನು ಒದಗಿಸುವುದರ ಮೇಲೆಯೇ ಒತ್ತು ನೀಡಿದ್ದರಿಂದ ಆ ಅಂಶವನ್ನು ಕೈಬಿಡಲಾಯಿತು ಎನ್ನಲಾಗಿದೆ.

ಒಟ್ಟಿನಲ್ಲಿ ಈ ಯೋಜನೆಯ ವಿವರಗಳನ್ನು ನೋಡಿದರೆ ಮಂದೆಯೂ ಇದು ಪ್ರಾಮಾಣಿಕವಾಗಿ ಜಾರಿಯಾಗುವ ಲಕ್ಷಣಗಳೇನೂ ಇಲ್ಲ. ಬಹುಶಃ ಅದು ಈ ಸರಕಾರದ ಆಶಯ ಕೂಡ ಅಲ್ಲ.

**“ಪ್ರಚಾರದ ಮೋಹ ದೇಶಕ್ಕೆ ಒಳ್ಳೆಯದಲ್ಲ” ಎಂದು ಪ್ರಧಾನಿಗಳು ಜೂನ್ 27ರಂದು ಸಂದರ್ಶನವೊಂದರಲ್ಲಿ ಸುಬ್ರಮಣ್ಯ ಸ್ವಾಮಿಯವರ ಬಗ್ಗೆ ಕೇಳಿದಾಗ ಹೇಳಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.**




### ‘ಕೌಶಲ್ ವಿಕಾಸ್’ನಲ್ಲೂ ‘ಸಾಧನೆ’ 5ಶೇ.!

ಜೂನ್2015ರಲ್ಲಿ ಇನ್ನೊಂದು ಯೋಜನೆಯನ್ನು ‘ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನಾ’ವನ್ನೂ ಭಾರೀ ಪ್ರಚಾರದ ನಡುವೆ ಆರಂಭಿಸಲಾಯಿತು. 24ಲಕ್ಷ ಯುವಜನರಿಗೆ ವಿಶೇಷ ಕೌಶಲಗಳನ್ನು ಒದಗಿಸಲು ವಿಶೇಷ ತರಬೇತಿ ನೀಡಿ ಉದ್ಯೋಗ ಮಾರುಕಟ್ಟೆಯಲ್ಲಿ ಅವರ ‘ಉದ್ಯೋಗಾರ್ಹತೆ’ಯನ್ನು ವೃದ್ಧಿಸುವುದು ಇದರ ಉದ್ದೇಶವೆಂದು ಸಾರಲಾಯಿತು. ಇದಕ್ಕೆ 1500 ಕೋಟಿ ರೂ.ಗಳನ್ನು ಬಜೆಟಿನಲ್ಲಿ ಒದಗಿಸಲಾಯಿತು.

ಆದರೆ ಇದರ ಫಲಿತಾಂಶವೂ ‘ಎಲ್ಲರಿಗೂ ವಸತಿ’ಯ ದಾರಿಯನ್ನೇ ಹಿಡಿದಂತೆ ಕಾಣುತ್ತದೆ. **ಸರಕಾರದ ಅಂಕಿ-ಅಂಶಗಳ ಪ್ರಕಾರವೇ ಜುಲೈ 2015ರಿಂದ ಎಪ್ರಿಲ್2016ರ ನಡುವೆ 17.58ಲಕ್ಷ ಯುವಜನರಿಗೆ ವಿಶೇಷ ಕೌಶಲ ತರಬೇತಿ ನೀಡಲಾಯಿತು. ಆದರೆ ಅವರಲ್ಲಿ ಉದ್ಯೋಗ ಪಡೆದವರ ಸಂಖ್ಯೆ ಕೇವಲ 81,978, ಅಂದರೆ 4.67ಶೇ.**

ಇದು ‘ಅಪೂರ್ಣ ಮಾಹಿತಿ’ ಎಂದು ಕೌಶಲ ವಿಕಾಸ ಮಂತ್ರಾಲಯದ ಅಧಿಕಾರಿಗಳು ಹೇಳಿದ್ದಾರೆ. ಆದರೆ ‘ಹಿಂದುಸ್ತಾನ್ ಟೈಮ್ಸ್’ ಪತ್ರಿಕೆ ಕಳೆದ ತಿಂಗಳು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪಡೆದ ಉತ್ತರವೂ ಇಂತಹುದೇ ಅಂಕೆ-ಸಂಖ್ಯೆಗಳನ್ನು ಕೊಟ್ಟಿದೆ. ಆಗಲೂ ರಾಷ್ಟ್ರೀಯ ಕೌಶಲ ವಿಕಾಸ ನಿಗಮ(ಎನ್‌ಎಸ್‌ಡಿಸಿ)ದ ಸಿಇಒ ತರಬೇತಿ ಪಾಲುದಾರರು ಕೆಲಸ ಪಡೆದವರ ಸಂಪೂರ್ಣ ಮಾಹಿತಿಯನ್ನು ಕೊಡುತ್ತಿಲ್ಲ ಎಂದಿದ್ದರು.

ಆದರೆ ಉದ್ದಿಮೆಗಳ ಪರಿಣಿತರ ಪ್ರಕಾರ ಇದು ನಿಜವಲ್ಲ, ಸರಕಾರಕ್ಕೆ ಅಂತಹ ಭಾಗೀದಾರರಿಂದ ಮಾಹಿತಿ ಪಡೆಯುವುದು ಕಷ್ಟವೇನಲ್ಲ ಎಂದು ಅವರು ಹೇಳಿರುವುದಾಗಿ ‘ಸ್ಕ್ರಾಲ್.ಇನ್’ ವರದಿ ಮಾಡಿದೆ.

‘ಪ್ರಚಾರದ ಮೋಹ ದೇಶಕ್ಕೆ ಒಳ್ಳೆಯದಲ್ಲ’ ಎಂಬ ಪ್ರಧಾನಿ ಉವಾಚಕ್ಕೆ ಅವರದ್ದೇ ಇನ್ನೊಂದು ಉದಾಹರಣೆ?

# ಮಾಲೇಗಾಂವ್ ಸ್ಫೋಟ: ಎನ್‌ಐಎ ಗೆ ವಿಶೇಷ ನ್ಯಾಯಾಲಯದ ತರಾಟೆ: ಸಾಧ್ವಿ ಪ್ರಜ್ಞಾಗೆ ಜಾಮೀನು ನಿರಾಕರಣೆ

ಮಾಲೇಗಾಂವ್ ಸ್ಫೋಟದ ವಿಚಾರಣೆ ಈಗ ಮತ್ತೊಂದು ತಿರುವು ತೆ-ಗೆದುಕೊಂಡಿದೆ. ಕಳೆದ ತಿಂಗಳು, ಮೇ13ರಂದು ಈ ಸ್ಫೋಟದ ತನಿಖೆಯ ಜವಾಬ್ದಾರಿ ಪಡೆದಿದ್ದ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಒಂದು ತಿಪ್ಪರಲಾಗ ಹಾಕಿ ಸಾಧ್ವಿ ಪ್ರಜ್ಞಾ ಸಿಂಗ್ ಠಾಕುರ್ ಸೇರಿದಂತೆ ಆಪಾದಿತರ ಮೇಲಿನ ಆರೋಪಗಳಿಗೆ ಸಾಕ್ಷ್ಯಗಳಿಲ್ಲ ಎಂದು ಆರೋಪಗಳನ್ನು ಕೈಬಿಟ್ಟಿತ್ತು. ಇನ್ನೂ ಕಠಿಣವಾದ ಮಹಾರಾಷ್ಟ್ರ ಸಂಘಟಿತ ಅಪರಾಧ ತಡೆ ಕಾಯ್ದೆ(ಎಂಕೋಕ)ಯ ಅಡಿಯಲ್ಲೂ ಆರಫಗಳನ್ನು ಕೈಬಿಟ್ಟಿತ್ತು.

ಈ ಹಿನ್ನೆಲೆಯಲ್ಲಿ ಮೇ 30ರಂದು ಠಾಕುರ್ ವಕೀಲರು ಜಾಮೀನು ಅರ್ಜಿ ಸಲ್ಲಿಸಿದ್ದರು. ಜೂನ್ 6ರಂದು ಎನ್‌ಐಎ ತಾನು ಜಾಮೀನು ಅರ್ಜಿಯನ್ನು ವಿರೋಧಿಸುವುದಿಲ್ಲ ಎಂದು ಹೇಳಿತು.

ಆದರೆ ಜೂನ್ 28ರಂದು ಎನ್‌ಐಎ ವಿಶೇಷ ನ್ಯಾಯಾಲಯ ಸಾಧ್ವಿ ಪ್ರಜ್ಞಾ ಸಿಂಗ್ ಠಾಕುರ್‌ಗೆ ಜಾಮೀನು ನಿರಾಕರಿಸಿದೆ. ಅಷ್ಟೇ ಅಲ್ಲ, ಎಂಕೋಕದ ಅಡಿಯಲ್ಲಿನ ಆಕೆಯ ಮೇಲಿನ ಆರೋಪ ಇನ್ನೂ ಇದೆ ಎಂದಿದೆ.ಆಕೆಯ ಮೇಲಿನ ಆರಫಗಳು ಮೇಲ್ನೋಟಕ್ಕೆ ಸರಿಯಿರುವಂತೆ ಕಾಣುತ್ತದೆ, ಆದ್ದರಿಂದ ಎನ್‌ಐಎ ಆಕೆಗೆ ‘ಕ್ಲೀನ್ ಚಿಟ್’ ಕೊಟ್ಟಿದೆಯೆಂದ ಮಾತ್ರಕ್ಕೆ ಆಕೆಗೆ ಜಾಮೀನು ಕೊಡಲು ಸಾಧ್ಯವಿಲ್ಲ ಎಂದು ಹೇಳಿದೆ.

ಸಾಕ್ಷಿಗಳ ಹೇಳಿಕೆಗಳ ಆಧಾರದಲ್ಲಿ ಮಾಲೇಗಾಂವ್ ಸ್ಫೋಟಗಳನ್ನು ಯೋಜಿಸಲಾದ ಭೋಪಾಲ್ ಸಭೆಯಲ್ಲಿ ಪ್ರಜ್ಞಾ ಸಿಂಗ್ ಹಾಜರಿದ್ದರು ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿದೆ ಎಂದು ವಿಶೇಷ ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ.

ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ತಂಡ(ಎಟಿಎಸ್)ದ ತನಿಖೆಯನ್ನು ಮುಂದುವರೆಸಲು ಎನ್‌ಐಎಗೆ ವಹಿಸಲಾಗಿತ್ತು. ಆದರೆ ಎನ್‌ಐಎ ತನ್ನದೇ ಆದ ಹೊಸದೊಂದು ತನಿಖೆಗೆ ಹೊರಟಿದೆ, ಎಟಿಎಸ್ ವಿಚಾರಣೆ ಮಾಡಿದ್ದ ಸಾಕ್ಷಿಗಳನ್ನು ಹೊಸದಾಗಿ ವಿಚಾರಿಸುವ ಅಗತ್ಯವೇನಿತ್ತು ಎಂದು ವಿಶೇಷ ನ್ಯಾಯಾಲಯ ಅದನ್ನು ತರಾಟೆಗೆ ತೆದುಕೊಂಡಿದೆ.

ಒಂದು ತಿಂಗಳ ಹಿಂದೆ ಎನ್‌ಐಎಯ ತಿಪ್ಪರಲಾಗಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಈ ಕೇಸನ್ನು ಮತ್ತು ‘ಹಿಂದುತ್ವ’ ಭಯೋತ್ಪಾದನೆಯನ್ನು ಮುಚ್ಚಿ ಹಾಕುವ ಅಧಿಕಾರಸ್ಥರ ಹುನ್ನಾರಕ್ಕೆ ಎನ್‌ಐಎ ಮಣೆ ಹಾಕುತ್ತಿದೆ ಎಂಬ ಭಾವನೆ ಉಂಟಾಗಿತ್ತು. ಆದರೆ ಈಗ ಎನ್‌ಐಎ ವಿಶೇಷ ನ್ಯಾಯಾಲಯ ಎನ್‌ಐಎ ತಿಪ್ಪರಲಾಗಕ್ಕೆ, ಆಮೂಲಕ ‘ಅಚ್ಛೇ ದಿನ್’ ಸರಕಾರಕ್ಕೂ ಇನ್ನೊಂದು ಕಪಾಳಮೋಕ್ಷ ಮಾಡಿದಂತಾಗಿದೆ ಎಂದು ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

ಕಳೆದ ವರ್ಷ, ಈ ವಿಚಾರಣೆಯಲ್ಲಿ ‘ಮೆತ್ತಗೆ’ಯಾಗಿ ವರ್ತಿಸಬೇಕೆಂದು ತನ್ನ ಮೇಲೆ ಒತ್ತಡಗಳು ಬಮದಿದ್ದವು ಎಂದು ಹೇಳಿದ್ದ ಆಗ ಎನ್‌ಐಎ ವಕೀಲೆಯಾಗಿದ್ದ, ನಂತರ ರಾಜೀನಾಮೆ ನೀಡಿದ್ದ ರೋಹಿಣಿ ಸಾಲ್ಯಾನ್ ಈ ಬಗ್ಗೆ ಹರ್ಷ ವ್ಯಕ್ತಪಡಿಸುತ್ತ “ಎನ್‌ಐಎ ಮಾಲೇಗಾಂವ್ ಕೇಸಿನ ತನಿಖೆ ನಡೆಸುತ್ತಿಲ್ಲ, ಮಹಾರಾಷ್ಟ್ರ ಎಟಿಎಸ್‌ನ್ ತನಿಖೆ ನಡೆಸುತ್ತಿದೆ” ಎಂದು ಟಿಪ್ಪಣಿ ಮಾಡಿದ್ದಾರೆ.




ಕರ್ನಾಟಕದಲ್ಲಿ ಸಂಪುಟ ಪುನರ್‌ರಚನೆಯ ನಂತರ ‘ಭಿನ್ನಮತ’ ಹೆಚ್ಚಾಗಿರುವ ಮಾದರಿಯಲ್ಲೇ ‘ಕಾಂಗ್ರೆಸ್-ಮುಕ್ತ ಭಾರತ’ದ ಘೋಷಣೆಯ ಬಿಜೆಪಿಯಲ್ಲಿ ಯಡ್ಯೂರಪ್ಪ ನೇಮಕದ ನಂತರ ‘ನಾಯಕತ್ವ ಬದಲಾವಣೆ’ಯ ಕೂಗು ಬಲಗೊಳ್ಳುತ್ತಿದೆ
–ಸುದ್ದಿ

ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಿಜಯ ಕರ್ನಾಟಕ

# ನಾಯಿಮರಿ, ನಾಯಿಯ ನಂತರ ಈಗ ಹಂದಿಮರಿಗಳ ಉದಾಹರಣೆ

ಭಾರತೀಯ ಜನತಾ ಪಾರ್ಟಿ ಎಂಬ ರಾಜಕೀಯ ಪಕ್ಷ ‘ಅಚ್ಛೇದಿನ’ಗಳಲ್ಲಿ ಪ್ರಾಣಿಗಳ ಬಗ್ಗೆ ವಿಶೇಷ ಮಮತೆ ಬೆಳೆಸಿಕೊಂಡಂತೆ ಕಾಣುತ್ತದೆ. ಅಲ್ಪಸಂಖ್ಯಾತರು ಮತ್ತು ದುರ್ಬಲ ವಿಭಾಗಗಳ ಬಗ್ಗೆ ತಮ್ಮ ಪ್ರೀತಿಯನ್ನು ವ್ಯಕ್ತಗೊಳಿಸುವಾಗ ಪ್ರಾಣಿಗಳ ಉದಾಹರಣೆಯನ್ನು ಕೊಡುತ್ತಿದ್ದಾರೆ ಎಂದು ಒಬ್ಬ ಪತ್ರಕರ್ತರು ಟಿಪ್ಪಣಿ ಮಾಡಿದ್ದಾರೆ.

ಸ್ವತಃ ಪ್ರಧಾನ ಮಂತ್ರಿಗಳು ಗುಜರಾತ ನರಮೇಧದ ಬಗ್ಗೆ ಕೇಳಿದಾಗ ನಾಯಿಮರಿಯ ಉದಾಹರಣೆ ಕೊಟ್ಟಿದ್ದರು. ವಿದೇಶಾಂಗ ರಾಜ್ಯಮಂತ್ರಿಗಳು ಫರೀದಾಬಾದ್‌ನಲ್ಲಿ ಇಬ್ಬರು ದಲಿತ ಮಕ್ಕಳ ಜೀವಂತ ದಹನದ ಘಟನೆಯ ಬಗ್ಗೆ ಕೇಳಿದಾಗ ನಾಯಿಗೆ ಕಲ್ಲು ಹೊಡೆಯುವ ಉದಾಹರಣೆ ನೀಡಿದ್ದರು.

ಈಗ ಮಹಾರಾಷ್ಟ್ರದ ಒಬ್ಬ ಬಿಜೆಪಿ ಶಾಸಕ ದಲಿತರ ಬಗ್ಗೆ ಪ್ರೀತಿ ಪ್ರದರ್ಶಿಸಲು ಹಂದಿಗಳ ಉದಾಹರಣೆ ಕೊಟ್ಟಿದ್ದಾರೆ. ಅಮೆರಿಕಾದ ಅಧ್ಯಕ್ಷ ಅಬ್ರಹಾಂ ಲಿಂಕನ್ ಒಮ್ಮೆ ಚರಂಡಿಯಲ್ಲಿ ಬಿದ್ದಿದ್ದ ಹಂದಿ ಮರಿಯನ್ನು ಎತ್ತಿಕೊಂಡು ಅದನ್ನು ಶುಚಿಗೊಳಿಸಿದರಂತೆ. ಅದೇ ರೀತಿಯಲ್ಲಿ ಪ್ರಧಾನಿಗಳು ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿಗಳು ದಲಿತರ ಉದ್ಧಾರಕ್ಕೆ ಬಹಳ ಶ್ರಮ ಪಡುತ್ತಿದ್ದಾರೆ ಎಂದರಂತೆ.

ಬಹುಶಃ ತುಚ್ಛ ಭಾವನೆಯನ್ನು ಮರೆ ಮಾಚಿ ರಾಜಕೀಯ ಕಾರಣಕ್ಕೆ ಇಲ್ಲದ ಪ್ರೀತಿಯನ್ನು ಪ್ರದರ್ಶಿಸಬೇಕಾಗಿ ಬರುವಾಗ ಇಂತಹ ಪ್ರಮಾದಗಳು ಮತ್ತೆ-ಮತ್ತೆ ಕಾಣುತ್ತವೆ ಬಿಡಿ ಎಂದು ಇನ್ನೊಬ್ಬ ಪತ್ರಕರ್ತರು ಟಿಪ್ಪಣಿ ಮಾಡಿದ್ದಾರೆ.

ರಿಝರ್ವ್ ಬ್ಯಾಂಕ್ ಗವರ್ನರ್ ರಘುರಾಮ ರಾಜನ್ ಮೇಲೆ ಬಿಜೆಪಿ ರಾಜ್ಯಸಭಾ ಸದಸ್ಯ ಸುಬ್ರಮಣ್ಯ ಸ್ವಾಮಿ ದೂಷಣೆಗಳ ಮಳೆಗರೆಯುತ್ತಿದ್ದಾಗ ಮೌನವಾಗಿದ್ದ ಪ್ರಧಾನಿಗಳು ಈಗ ಸಂದರ್ಶನ ವೊಂದರಲ್ಲಿ ಸ್ವಾಮಿಯ ವರ್ತನೆ ಸರಿಯಲ್ಲ ಎಂದಿದ್ದಾರೆ. ಇದನ್ನು ಮೊದಲೇ ಏಕೆ ಹೇಳಿಲ್ಲ ಎಂಬ ಬಗ್ಗೆ ಊಹಾಪೋಹಗಳು ನಡೆಯುತ್ತಿವೆ
–ಸುದ್ದಿ




ವ್ಯಂಗ್ಯಚಿತ್ರ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

# ರಿಸರ್ವ್ ಬ್ಯಾಂಕ್ ಗವರ್ನರ್ ರಾಜನ್ ನಿರ್ಗಮನ




ಕೆ.ಎಂ. ನಾಗರಾಜು

**ಈ ಬಗ್ಗೆ ಬಡ್ಡಿದರ ಇಳಿಕೆಯೋ ಹಣದುಬ್ಬರ ತಡೆಯೋ ಎಂಬ ಚರ್ಚೆಯ ಸುತ್ತ ಗಿರಕಿ ಹೊಡೆಯುವುದು ಅಸಂಬದ್ಧ ಎನ್ನುತ್ತಾರೆ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ರಾಜನ್ ಅವರಿಗೆ ಇನ್ನೊಂದು ಅವಧಿಯ ಅಧಿಕಾರಕೊಡಲು ಸರ್ಕಾರ ಹಿಂದೆ ಮುಂದೆ ನೋಡುತ್ತಿದ್ದಕ್ಕೆ ರಾಜನ್ ಬಡ್ಡಿದರದ ಬಗ್ಗೆ ಪಟ್ಟು ಹಿಡಿಯುತ್ತಿದ್ದುದು ಕಾರಣವಲ್ಲ. ಬದಲಿಗೆ, ಹಿಂದುತ್ವ ಅಜೆಂಡಾ ಕಾರ್ಯರೂಪಕ್ಕೆ ತರಲು ಮೋದಿ ಸರ್ಕಾರವು ಸಾಮ್ರಾಜ್ಯಶಾಹಿಗೆ ಎಷ್ಟು ಬೇಕಾದರೂ ರಿಯಾಯ್ತಿ ಕೊಡಲು ತುದಿಗಾಲಲ್ಲಿ ನಿಂತಿದೆ ಎಂಬುದನ್ನು ಈ ಪ್ರಕರಣ ಮತ್ತೊಮ್ಮೆ ತೋರಿಸದೆ ಎನ್ನುತ್ತಾರೆ ಅವರು.**

ಇನ್ನೊಂದು ಅವಧಿಯ ಅಧಿಕಾರ ಕೋರಲು ಬಯಸದ ರಿಸರ್ವ್ ಬ್ಯಾಂಕ್ ಗವರ್ನರ್ ರಘುರಾಂ ರಾಜನ್ ಬಗ್ಗೆ ಒಂದು ಅಸಂಬದ್ಧ ಚರ್ಚೆ ನಡೆ-ಯುತ್ತಿದೆ. ಬಡ್ಡಿ ದರಗಳು ತುಟ್ಟಿಯಾಗಿರುವಂತೆ ನೋಡಿಕೊಂಡಿರುವ ರಾಜನ್ ದೇಶದ ಅರ್ಥವ್ಯವಸ್ಥೆಯ ಸ್ಥಗಿತತೆಗೆ ಕಾರಣರಾಗಿ ನಿರುದ್ಯೋಗಿಗಳ ಬವಣೆ ಹೆಚ್ಚುವಂತೆ ಮಾಡಿದ್ದಾರೆ ಎಂದು ಉಪ್ಪು ಕಾರ ಹಚ್ಚಿ ತೆಗಳುವವರು ಒಂದು ಕಡೆ ಇದ್ದಾರೆ. ಬಡ್ಡಿ ದರಗಳು ತುಟ್ಟಿಯಾಗಿಸಿರುವ ಅವರ ಧೈರ್ಯವನ್ನು ಮೆಚ್ಚಿ, ರಾಜನ್ ದೇಶದಲ್ಲಿ ಹಣದುಬ್ಬರದ ಪೀಡೆ ಕಾಡದಂತೆ ನೋಡಿಕೊಂಡಿದ್ದಾರೆ ಎಂದು ಹೊಗಳುವವರು ಇನ್ನೊಂದು ಕಡೆಯಲ್ಲಿದ್ದಾರೆ.

ಇದೊಂದು ಅಸಂಬದ್ಧ ಚರ್ಚೆ ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್(ಪೀಪಲ್ಸ್ ಡೆಮಾಕ್ರಸಿ, ಜೂನ್26) ಏಕೆಂದರೆ, ಸಣ್ಣ ಪ್ರಮಾಣದ ಬಡ್ಡಿದರ ಏರಿಕೆ ಅಥವಾ ಇಳಿಕೆಯಿಂದ ಆರ್ಥಿಕ ಬೆಳವಣಿಗೆ ಅಥವಾ ಹಣದುಬ್ಬರ ಉಂಟಾಗುವುದಿಲ್ಲ. ಬಡ್ಡಿದರಗಳನ್ನು ಈಗಿರುವ ಮಟ್ಟದಿಂದ 0.25% ಅಥವಾ 0.5% ಅಥವಾ 1.0% ಇಳಿಸಿದರೆ ಅರ್ಥವ್ಯವಸ್ಥೆ ಚೇತರಿಸಿಕೊಳ್ಳುತ್ತದೆ ಎನ್ನುವುದಾದರೆ, ಬಂಡವಾಳ ಹೂಡಿಕೆದಾರರು ಇಷ್ಟಪಡುವ ಅತಿ ಕಡಿಮೆ ಬಡ್ಡಿದರ(0.25% ನಿಂದ 0.5%) ಇರುವ ಅಮೆರಿಕಾ ದೇಶವನ್ನು ಶೇ.10ಕ್ಕಿಂತ ಹೆಚ್ಚಿನ ನಿರುದ್ಯೋಗದಿಂದ ಕೂಡಿದ ಸ್ಥಗಿತತೆ ಭಾದಿಸುತ್ತಿರಲಿಲ್ಲ. ಬಡ್ಡಿ ದರಗಳು ತುಟ್ಟಿಯಾಗಿರುವಂತೆ ನೋಡಿಕೊಂಡಿರುವ ರಾಜನ್‌ರವರ ಅಚಲ ನಿರ್ಧಾರದ ಬಳಿಕ ಚಿಲ್ಲರೆ ಬೆಲೆಗಳು ಏರುತ್ತಿರಲಿಲ್ಲ. ಅಂದರೆ, ಬಡ್ಡಿದರಕ್ಕೆ ಸಂಬಂಧವಿಲ್ಲದ ಬೇರೆ ಅಂಶಗಳು ಪ್ರಭಾವ ಬೀರುತ್ತವೆ ಎಂಬುದನ್ನು ಈ ವಿದ್ಯಮಾನಗಳು ಸೂಚಿಸುತ್ತವೆ. ಹಾಗಾಗಿ, ಬಡ್ಡಿದರದ ಮೇಲಿನ ಈ ರಂಪಾಟ ಅರ್ಥವಿಲ್ಲದ್ದು.

**ಈ ಮಾತಿನ ಅರ್ಥ ಬಡ್ಡಿದರದ ಮಹತ್ವ ಕಡಿಮೆ ಎಂದಲ್ಲ. ಬದಲಿಗೆ, ಅದರ ಮಹತ್ವವು ಸಾಮಾನ್ಯವಾಗಿ ಎಲ್ಲರೂ ಊಹಿಸಿರುವುದಕ್ಕಿಂತ ಭಿನ್ನವಾಗಿದೆ ಎಂಬುದು. ಈ ಅಂಶವನ್ನು ಅರ್ಥಮಾಡಿಕೊಳ್ಳಲು, ಪ್ರೊ.ಪಟ್ನಾಯಕ್, "ಉದ್ಯಮಶೀಲರು" ಮತ್ತು "ಬಾಡಿಗೆ ಜೀವಿಗಳು" ಇವರ ನಡುವಿನ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಬೇಕು ಎನ್ನುತ್ತಾರೆ.**

ಉದ್ಯಮಶೀಲರು ಭೌತಿಕ(ಅಂದರೆ, ಸರಕು ಸಾಮಗ್ರಿಗಳನ್ನು ಉತ್ಪಾದಿಸುವ ಚಟುವಟಿಕೆಗಳಲ್ಲಿ) ಹೂಡಿಕೆಮಾಡಿ ಭೌತಿಕ ಆಸ್ತಿಗಳ ವಹಿವಾಟು ನಡೆಸುವ ಮೂಲಕ ತಮ್ಮ ಪ್ರತಿಫಲ ಪಡೆಯುತ್ತಾರೆ. ಬಾಡಿಗೆ ಜೀವಿಗಳು ಆಸ್ತಿ ಅಥವಾ ಹಣಹೂಡಿಕೆಯ ಮೂಲಕ ವರಮಾನ ಪಡೆಯುತ್ತಾರೆ. ಈ ಬಾಡಿಗೆ ಜೀವಿಗಳ ಪೈಕಿ ಬಡ್ಡಿ, ಬಾಡಿಗೆ, ಡಿವಿಡೆಂಡ್, ಪಿಂಚಣಿ ಇತ್ಯಾದಿ ರೂಪದಲ್ಲಿ ವರಮಾನ ಗಳಿಸುವವರು ಹಾಗೂ ಭೌತಿಕ ಆಸ್ತಿ ಹಾಗೂ ಭದ್ರತಾ ಪತ್ರಗಳಲ್ಲಿ ಹೂಡಿಕೆಮಾಡಿ ಅದನ್ನು ಅನುಕೂಲ ಸಂದರ್ಭದಲ್ಲಿ ಮಾರಿ ಬಂಡವಾಳ ಹೆಚ್ಚಿಸಿಕೊಳ್ಳುವವರೂ ಇದ್ದಾರೆ. ಆದಾಗ್ಯೂ, ಉದ್ಯಮಶೀಲರು ಮತ್ತು ಬಾಡಿಗೆ ಜೀವಿಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವುದು ಮುಖ್ಯ.

ಬಡ್ಡಿದರ ಇಳಿದಾಗ ಸಾಲ ಅಗ್ಗವಾಗುತ್ತದೆ. ಮೊದಲಿಗೆ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಗೆ ಉತ್ತೇಜನ ಸಿಗುತ್ತದೆ. ಬೇಡಿಕೆ ಹೆಚ್ಚುತ್ತದೆ. ಉತ್ಪತ್ತಿ ಹೆಚ್ಚುತ್ತದೆ. ಉದ್ಯೋಗಗಳು ಹೆಚ್ಚುತ್ತವೆ. ಪೂರಕವಾಗಿ ಗೃಹ ಬಳಕೆಯ ವಸ್ತುಗಳನ್ನು ಕೊಳ್ಳಲು ಸಾಲವೂ ದೊರೆಯುತ್ತದೆ. ಇಂತಹ ಬದಲಾವಣೆಗಳಾಗುತ್ತವೆ ಎಂಬುದು ಒಂದು ನಿರೀಕ್ಷೆ. ಆದರೆ, ಸಾಲ ಅಗ್ಗವಾಗಿರುವ ಒಂದೇ ಕಾರಣದಿಂದ ಬಂಡವಾಳ ಹೂಡಿಕೆ ಆಗದು. ಅದು ಉದ್ದಿಮೆದಾರನ ನಿರೀಕ್ಷೆ, ಮಾರುಕಟ್ಟೆಯ ಗಾತ್ರ ಮತ್ತು ಅರ್ಥವ್ಯವಸ್ಥೆಯ ಸ್ಥಿತಿ-ಗತಿಗಳ ಮೇಲೆ ನಿಂತಿದೆ. ಅದೇ ರೀತಿಯಲ್ಲಿ ಬಳಕೆದಾರರೂ ಉದ್ಯೋಗ ಮತ್ತು ವರಮಾನದ ಅನಿಶ್ಚಿತತೆ ಕಾರಣಗಳಿಂದ ಅಗ್ಗದ ಸಾಲ ಲಭ್ಯವಿದ್ದರೂ ಅದನ್ನು ಪಡೆಯಲು ಹಿಂಜರಿಯುತ್ತಾರೆ.

ನಿರೀಕ್ಷೆಗಳು ನಿರಾಶಾದಾಯಕವಾಗಿರುವ ಪರಿಸ್ಥಿತಿಯಲ್ಲಿ ಬಡ್ಡಿದರ ಇಳಿಕೆ ಯಾವ ಪರಿಣಾಮವನ್ನೂ ಬೀರುವುದಿಲ್ಲ ಎಂಬುದನ್ನು ಸ್ಥಗಿತತೆಯಲ್ಲಿ ಒದ್ದಾಡುತ್ತಿರುವ ಅಮೆರಿಕದ ಪರಿಸ್ಥಿತಿಯಿಂದ ತಿಳಿಯಬಹುದು. ನಿಂತಲ್ಲೇ ನಿಂತಿರುವ ಜಾಗತಿಕ ಅರ್ಥವ್ಯವಸ್ಥೆ ಮತ್ತು ಅದರ ಬಿಕ್ಕಟ್ಟು ಭಾರತದಂತಹ ಉದಯೋನ್ಮುಖ ದೇಶಗಳಿಗೆ ಹರಡುತ್ತಿದೆ. ಹಾಗಾಗಿ, ಬಡ್ಡಿದರ ಎಷ್ಟು ಕೆಳಗಿಳಿದರೂ ಅರ್ಥವ್ಯವಸ್ಥೆ ಚೇತರಗೊಳ್ಳದು.

ಬಡ್ಡಿದರ ಇಳಿಕೆ ಬೇರೊಂದು ಮಾರ್ಗದ ಮೂಲಕ ಕೆಲಸ ಮಾಡಬಲ್ಲದು ಎಂಬುದು ನಿಜ. ಈ ಮಾರ್ಗದಲ್ಲಿ, ಸಟ್ಟಾ ವ್ಯಾಪಾರಿಗಳು ಆಸ್ತಿ-ಬೆಲೆ ಗುಳ್ಳೆಗಳು ಉಬ್ಬಲು ಕಾರಣವಾಗುತ್ತಾರೆ. ಗುಳ್ಳೆಗಳು ಉಬ್ಬುತ್ತಿರುವಾಗ ಆಸ್ತಿಯ ಮಾಲೀಕರು ತಮ್ಮ ಶ್ರೀಮಂತಿಕೆ ಹೆಚ್ಚುತ್ತಿದೆ ಎಂಬ ನಂಬಿಕೆಯಲ್ಲಿ ಹೆಚ್ಚು ಖರ್ಚು ಮಾಡುತ್ತಾರೆ. ಆರಂಭದಲ್ಲಿ ಚೇತರಿಕೆ ಕಂಡರೂ ಇದು ದೀರ್ಘಾವಧಿಯಲ್ಲಿ ಯಶಸ್ವಿಯಾಗುವುದಿಲ್ಲ ಎಂಬುದನ್ನು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಆರಂಭಿಕ ಕಾರಣವಾದ ಅಮೆರಿಕದ ವಸತಿ ಗುಳ್ಳೆಗಳು ಮತ್ತು ಆನಂತರದಲ್ಲಿ ಈ ಬಿಕ್ಕಟ್ಟನ್ನು ಜಟಿಲಗೊಳಿಸಿದ ಚೀನಾ ಮತ್ತು ಭಾರತದಲ್ಲಿ ಉಂಟಾದ ಆಸ್ತಿ ಗುಳ್ಳೆಗಳು ತೋರಿಸಿವೆ. ಆದ್ದರಿಂದ, ಕೇವಲ ಬಡ್ಡಿದರ ಇಳಿಸುವುದರಿಂದ ಭಾರತದ ಆರ್ಥವ್ಯವಸ್ಥೆಯು ಆಸ್ತಿ-ಬೆಲೆ ಗುಳ್ಳೆಗಳ ಮಾರ್ಗದ ಮೂಲಕವಾದರೂ ಚೇತರಗೊಳ್ಳುತ್ತದೆ ಎನ್ನುವಂತಿಲ್ಲ.

**ಹಾಗಾಗಿ, ಭಾರತದ ಸ್ಥಗಿತತೆಗೆ ರಘುರಾಂ ರಾಜನ್ ಕಾರಣವೆಂದು ತೆಗಳುವುದು ಅಸಂಬದ್ಧವಾಗುತ್ತದೆ. ಇಡೀ ವ್ಯವಸ್ಥೆಯ ಬಿಕ್ಕಟ್ಟಿಗೆ ಒಬ್ಬನ ತಲೆಯ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ ಎನ್ನುವ ಪ್ರೊ. ಪಟ್ನಾಯಕ್ ಹಣದುಬ್ಬರದ ಇಳಿಕೆಗೆ ರಘುರಾಂ ರಾಜನ್ ಕಾರಣವೆಂದು ಅವರನ್ನು ಹೊಗಳುವುದೂ ಅಸಂಬದ್ಧವಾಗುತ್ತದೆ ಎಂದೂ ಹೇಳುತ್ತಾರೆ.**

ಏಕೆಂದರೆ, ಹಣದುಬ್ಬರದ ಇಳಿಕೆ ಬಡ್ಡಿದರ ಮೇಲ್ಮಟ್ಟದಲ್ಲಿದ್ದ ಕಾರಣದಿಂದ ಆದದ್ದಲ್ಲ. ಸಾಮಾನ್ಯವಾಗಿ, ಸರಕು ಸಾಮಗ್ರಿಗಳ ಪೂರೈಕೆ ಕಡಿಮೆಯಾಗಿ ಬೇಡಿಕೆ ಹೆಚ್ಚಾದ ಪರಿಸ್ಥಿತಿ ಹಣದುಬ್ಬರಕ್ಕೆ ಕಾರಣವಾಗುತ್ತದೆ. ಅಂತಹ ಸಂದರ್ಭದಲ್ಲಿ, ಅತಿಯಾದ ಬೇಡಿಕೆಯನ್ನು ತಗ್ಗಿಸಲು ಮತ್ತು ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ಬಡ್ಡಿ ದರಗಳನ್ನು ಗಣನೀಯವಾಗಿ ಏರಿಸಲಾಗುತ್ತದೆ. ಆದರೆ, ಭಾರತದಲ್ಲಿ ಇತ್ತೀಚೆಗೆ ಉಂಟಾದ ಹಣದುಬ್ಬರವು ಅತಿಯಾದ ಬೇಡಿಕೆಯ ಕಾರಣದಿಂದ ಆದದ್ದಲ್ಲ. ಬದಲಾಗಿ, ಕೈಗಾರಿಕಾ ಸ್ಥಗಿತತೆ ಮತ್ತು ಆಹಾರ ಧಾನ್ಯಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗಿದ್ದ ಪರಿಸ್ಥಿತಿಯಲ್ಲಿ ಹಣದುಬ್ಬರ ಉಂಟಾಗಿದೆ. ಅನೇಕ ವಸ್ತುಗಳ ಮೇಲಿನ ಸಬ್ಸಿಡಿ ಹಿಂಪಡೆದುದರಿಂದ ಅವುಗಳ ಬೆಲೆಗಳು ಏರಿ-ಕೆಯಾದ ಕಾರಣದಿಂದ ಹಣದುಬ್ಬರ 'ಉಂಟಾಗಿದೆ. ಸ್ವಲ್ಪ ಸಮಯದ ಹಿಂದೆ, ತೈಲ ಬೆಲೆಗಳ ಕುಸಿತದ ಕಾರಣದಿಂದಾಗಿ, ಹಣದುಬ್ಬರ ಸ್ವಲ್ಪ ಮಟ್ಟಿಗೆ ತಗ್ಗಿತ್ತು. ಅದು ಈಗ ಮತ್ತೆ ತಲೆಎತ್ತಲು ಆರಂಭಿಸಿದೆ.

ಹಣದುಬ್ಬರ ನಿಯಂತ್ರಣದಲ್ಲಾಗಲಿ ಅಥವಾ ಭಾರತದಲ್ಲಿ ಸ್ಥಗಿತತೆಯಾಗಿರುವುದಕ್ಕಾಗಲಿ ರಘುರಾಂ ರಾಜನ್‌ರವರ ಪಾತ್ರ ನಗಣ್ಯ. **ರಿಸರ್ವ್ ಬ್ಯಾಂಕಿನ ಹಣಕಾಸು ನೀತಿ ಮತ್ತು ಅದನ್ನು ನಿರೂಪಿಸಿರುವ ರಾಜನ್ ಅವರ ಪಾತ್ರದ ಸುತ್ತ ಮುತ್ತ ನಡೆಯುತ್ತಿರುವ ಈ ಇಡೀ ಚರ್ಚೆಯು ದಾರಿತಪ್ಪಿಸುವ ಉದ್ದೇಶದಿಂದ ಕೂಡಿದೆ. ಈ ದಾರಿತಪ್ಪಿಸುವ ಚರ್ಚೆಯಲ್ಲಿ ಭಾಗವಹಿಸುತ್ತಿರುವವರು ಅದನ್ನು ಬೆನ್ನು ಹತ್ತಿದ ಬೇತಾಳನಂತೆ ಬೆನ್ನಟ್ಟುತ್ತಿರುವ ತೀವ್ರತೆಯಲ್ಲಿ ಪ್ರಸಕ್ತ ಪರಿಸ್ಥಿತಿಯ ಅಸಂಬದ್ಧತೆಯೂ ನೆಲೆಸಿದೆ ಎಂದು ಪ್ರೊ.ಪಟ್ನಾಯಕ್ ಅಭಿಪ್ರಾಯ ಪಡುತ್ತಾರೆ.**

ಭಾರತದ ಆರ್ಥಿಕ ಬೆಳವಣಿಗೆಯ ಮೇಲಾಗಲಿ ಅಥವಾ ಅದರ ಹಣದುಬ್ಬರ ನಿಯಂತ್ರಣದಲ್ಲಾಗಲಿ ಬಡ್ಡಿ ದರಗಳ ಪಾತ್ರ ಏನೂ ಇಲ್ಲವಾದರೂ, ರಘುರಾಂ ರಾಜನ್ ತಳೆದ ಬಡ್ಡಿ ದರಗಳ ನಿಲುವಿನಿಂದಾಗಿ, ನಮ್ಮ ವಿದೇಶಿ ವ್ಯಾಪಾರದ ಶಿಲ್ಕು ಪಾವತಿ (balance of payments-ಪಾವತಿ ಶೇಷ) ಕೊರತೆ ನೀಗಿಸಿಕೊಳ್ಳುವ ಸಲುವಾಗಿ ವಿದೇಶಿ ಹೂಡಿಕೆ ಸೆಳೆಯಲು ಸಾಧ್ಯವಾಗಿದೆ. ರಾಜನ್ 2013ರಲ್ಲಿ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಇದ್ದಕ್ಕಿದ್ದಂತೆ ವಿದೇಶಿ ಸಟ್ಟಾಕೋರರು ತಮ್ಮ ಹೂಡಿಕೆಯನ್ನು ಹಿಂತೆಗೆದಿದ್ದರಿಂದ ರೂಪಾಯಿ ಮೌಲ್ಯ ನೆಲ ಕಚ್ಚಿತ್ತು. ವಿದೇಶಿ ವಿನಿಮಯದ ಕೊರತೆಯ ಆತಂಕ ಸೃಷ್ಟಿಯಾಗಿತ್ತು. ಬಂಗಾರದ ಬೆಲೆ ಏರುತ್ತಿತ್ತು. ಆಗ, ಬಂಗಾರದ ಆಮದಿನ ಮೇಲೆ ನಿಯಂತ್ರಣ ಮತ್ತು ಬಡ್ಡಿದರ ಹೆಚ್ಚಿಸುವ (ವಿದೇಶಿ ಹೂಡಿಕೆ ಆಕರ್ಷಿಸಲು) ಮೂಲಕ ಆ ಪರಿಸ್ಥಿತಿಯನ್ನು ರಾಜನ್ ಸಮರ್ಥವಾಗಿ ನಿಭಾಯಿಸಿದ್ದರು. ತೈಲ ಬೆಲೆಗಳು ತಗ್ಗಿದ ಪರಿಣಾಮವಾಗಿ ಚಾಲ್ತಿ ಖಾತೆಯ ಕೊರತೆ ನಿವಾರಣೆಗೆ ಬೇಕಾದ್ದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ವಿದೇಶಿ ಹಣ ಒಳ ಹರಿದಿದೆ. ಮೂರನೆಯ ಜಗತ್ತಿನ ದೇಶಗಳ ಕರೆನ್ಸಿಗಳಿಗೆ ಹೋಲಿಸಿದರೆ ರೂಪಾಯಿ ಮೌಲ್ಯಸಾಕಷ್ಟು ಏರಿಕೆಯಾಗಿದೆ. ಅಷ್ಟು ವಿದೇಶಿ ಹಣ ಒಳ ಹರಿದಿದೆ(ನಮ್ಮ ರಫ್ತುಗಳು ಸತತವಾಗಿ ಇಳಿಯುತ್ತಿರುವುದಕ್ಕೆ ರೂಪಾಯಿ ಮೌಲ್ಯ ಏರಿಕೆ-ಯ ಅಂಶವೂ ಕಾರಣವಾಗಿದೆ). ಆದ್ದರಿಂದ, ಬಡ್ಡಿ ದರಗಳು ಮೇಲ್ಮಟ್ಟದಲ್ಲಿರಬೇಕೆಂದು ಪಟ್ಟು ಹಿಡಿದ ರಾಜನ್ ಅವರ ಆದ್ಯತೆಯು ಬೆಳವಣಿಗೆಗಿಂತ ಅಥವಾ ಹಣದುಬ್ಬರದ ನಿಯಂತ್ರಣಕ್ಕಿಂತ ನಮ್ಮ ವಿದೇಶಿ ವ್ಯಾಪಾರದ ಶಿಲ್ಕು ಪಾವತಿ (balance of pay-ments) ಕೊರತೆ ನಿಭಾಯಿಸುವುದೇ ಆಗಿತ್ತು.

ಪರಿಸ್ಥಿತಿ ಹೀಗಿರುವಾಗ, ರಾಜನ್ ಅವರಿಗೆ ಇನ್ನೊಂದು ಅವಧಿಯ ಅಧಿಕಾರ ಕೊಡಲು ಸರ್ಕಾರ ಹಿಂದೆ ಮುಂದೆ ನೋಡುತ್ತಿದ್ದಕ್ಕೆ ರಾಜನ್ ಬಡ್ಡಿದರದ ಬಗ್ಗೆ ಪಟ್ಟು ಹಿಡಿಯುತ್ತಿದ್ದುದು ಕಾರಣವಲ್ಲ. ಸರ್ಕಾರದ ಮೌನ ಅರ್ಥಮಾಡಿಕೊಂಡ ರಾಜನ್, ಇನ್ನೊಂದು ಅವಧಿಯ ಅಧಿಕಾರ ಕೋರದಿರುವ ತಮ್ಮ ನಿರ್ಧಾರ ಪ್ರಕಟಿಸಿದರು (ಸರ್ಕಾರದ ಮೌನ ಒಂದು ರೀತಿಯಲ್ಲಿ ರಾಜನ್ ಅವರನ್ನು "ವಜಾ" ಮಾಡಿದಂತೆಯೇ ಇತ್ತು).

**ಹಿಂದುತ್ವದ ಬಗ್ಗೆ ರಾಜನ್ ಅವರಿಗೆ ಒಲವಿರದಿದ್ದ ಕಾರಣದಿಂದಾಗಿ ಸರ್ಕಾರ ಅವರಿಗೆ ಇನ್ನೊಂದು ಅವಧಿಯ ಅಧಿಕಾರ ಕೊಡಲಿಲ್ಲ ಎನ್ನುತ್ತಾರೆ ಪ್ರೊ.ಪಟ್ನಾಯಕ್. ರಾಜನ್ ಕೂಡ ಹಿಂದುತ್ವದ ಬಗ್ಗೆ ತಮಗಿರುವ ಭಿನ್ನಾಭಿಪ್ರಾಯವನ್ನು ಮುಚ್ಚಿಟ್ಟಿರಲಿಲ್ಲ. ಅದರಿಂದಾಗಿಯೇ, ರಾಜನ್ "ಮಾನಸಿಕವಾಗಿ ಭಾರತೀಯನಲ್ಲ" ಎಂಬುದಾಗಿ ಸುಬ್ರಮಣಿಯನ್ ಸ್ವಾಮಿ ಆರೋಪಿಸಿದ್ದರು. ಸುಬ್ರಮಣಿಯನ್ ಸ್ವಾಮಿಯವರ ದೃಷ್ಟಿಯಲ್ಲಿ ಹಿಂದುತ್ವ ರಾಜಕೀಯ ಒಪ್ಪಿಕೊಳ್ಳುವುದೇ ಭಾರತೀಯತೆ.**

ರಾಜನ್ ನಿರ್ಗಮಿಸುವಂತೆ ಮಾಡಿರುವುದು ಯಾವ ಕಾರಣದಿಂದ ಮಹತ್ವ ಪಡೆಯುತ್ತದೆ ಎಂದರೆ, ಆರ್ಥಿಕ ವಿಷಯಗಳ ತಜ್ಞನೊಬ್ಬನ್ನು ಕಳೆದುಕೊಂಡಾಗ ದೇಶಕ್ಕೆ ಉಂಟಾಗುವ ನಷ್ಟದ ಕಾರಣದಿಂದಲ್ಲ, ಬದಲಿಗೆ, ಹಿಂದುತ್ವ ಶಕ್ತಿಗಳು ಜಾಗತಿಕ ಹಣಕಾಸು ವಲಯದಲ್ಲಿ ಮನ್ನಣೆ ಪಡೆದ ಒಬ್ಬ ಉದಾರವಾದಿ ನಿಲುವಿನ ಬುದ್ಧಿಜೀವಿಯ ಒಂದು ಸಣ್ಣ ಟೀಕೆಯನ್ನೂ ಸಹಿಸುವುದಿಲ್ಲ ಎಂಬ ಕಾರಣದಿಂದ. ರಿಸರ್ವ್ ಬ್ಯಾಂಕ್ ಗವರ್ನರ್ ಯಾರಾದರೂ ನವ-ಉದಾರವಾದದ ಆಳ್ವಿಕೆ ಆಬಾಧಿತವಾಗಿ ಮುಂದುವರೆಯುತ್ತದೆ.

**ರಘುರಾಂ ರಾಜನ್‌ರವರು ತಮ್ಮ ನಿರ್ಧಾರ ಪ್ರಕಟಿಸಿದ ಮರುದಿನವೇ ಮೋದಿ ಸರ್ಕಾರವು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಭಾರಿ ರಿಯಾಯ್ತಿಗಳನ್ನು ಪ್ರಕಟಿಸಿದೆ ಎಂಬ ಸಂಗತಿಯತ್ತ ಪ್ರೊ.ಪಟ್ನಾಯಕ್ ಗಮನ ಸೆಳೆಯುತ್ತಾರೆ.**

ರಾಜನ್ ನಿರ್ಗಮನದ ಪರಿಣಾಮವಾಗಿ ಉಂಟಾಗಬಹುದಾದ ಪರಿಸ್ಥಿತಿ (ಅಂದರೆ, ಬಂಡವಾಳದ ಪಲಾಯನ, ಮತ್ತು ವಿದೇಶಿ ಹೂಡಿಕೆದಾರರ ವಿಶ್ವಾಸ ಕುಗ್ಗುವುದು) ಎದುರಿಸುವ ಸಲುವಾಗಿ ರಕ್ಷಣೆ ಮತ್ತು ಔಷಧಿ ತಯಾರಿಕಾ ವಲಯಗಳಲ್ಲಿ 100% ಎಫ್‌ಡಿಐಗೆ ಸಮ್ಮತಿಸಿದೆ ಎಂದು ಅವರು ವಿಶ್ಲೇಷಿಸುತ್ತಾರೆ.

ದೇಶ ಸ್ವತಂತ್ರವಾದ ಸಮಯದಲ್ಲಿ ಅನೇಕ ನಿತ್ಯೋಪಯೋಗಿ ವಸ್ತುಗಳೂ ಆಮದಾಗುತ್ತಿದ್ದವು ಇಲ್ಲವೇ ವಿದೇಶಿ ಕಂಪೆನಿಗಳು ಇಲ್ಲೇ ಉತ್ಪಾದಿಸಿ ಭಾರತದ ಜನತೆಯನ್ನು ಕೊಳ್ಳೆಹೊಡೆಯುತ್ತಿದ್ದವು. ಧೃಢ ನಿರ್ಧಾರ ಮತ್ತು ಪರಿಶ್ರಮಗಳ ಮೂಲಕ ಸಾರ್ವಜನಿಕ ವಲಯ ಸ್ಥಾಪಿಸಿ ನಮ್ಮದೇ ಆದ ಸಂಶೋಧನಾ ಸಂಸ್ಥೆಗಳನ್ನು ಆರಂಭಿಸಿ ವಿದೇಶಿ ಬಂಡವಾಳದ ಶೋಷಣೆಯಿಂದ ತಕ್ಕ ಮಟ್ಟಿಗೆ ರಕ್ಷಿಸಿಕೊಳ್ಳುವುದು ದೇಶಕ್ಕೆ ಸಾಧ್ಯವಾಯ್ತು. ರಾಜಕೀಯ ಸ್ವಾತಂತ್ರ್ಯದ ಜೊತೆಯಲ್ಲಿ ಆರ್ಥಿಕವಾಗಿ ನಮ್ಮ ಕೈ ತಿರಿಚುವ ವಿದೇಶಿ ಬಂಡವಾಳದಿಂದ ಬಿಡುಗಡೆ ಪಡೆಯುವ ಹಂಬಲವೂ ಇತ್ತು.

ನಿಯಂತ್ರಣ ನೀತಿಗಳಿದ್ದ ಕಾಲದಲ್ಲಿ, ಅದರಲ್ಲಿ ಇತಿ ಮಿತಿಗಳಿದ್ದರೂ, ಜನತೆಗೆ ಕೆಲವು ಪ್ರಯೋಜನಗಳು ಲಭಿಸಿದವು. ಉತ್ಪಾದನೆಯ ಮತ್ತು ತಂತ್ರಜ್ಞಾನದ ತಳಹದಿ ನಿರ್ಮಾಣವಾಯ್ತು. ಮುಂದುವರೆದ ದೇಶಗಳು ಸುಧಾರಿತ ತಂತ್ರಜ್ಞಾನವನ್ನು ತಮ್ಮಬಿಗಿ ಹಿಡಿತದಲ್ಲಿಟ್ಟಕೊಂಡಿವೆ. ಅಭಿವೃದ್ಧಿಶೀಲ ದೇಶಗಳು ವಿದೇಶಿ ಬಂಡವಾಳಗಾರರಿಗೆ ಅಪಾರ ಲಾಭಮಾಡಿಕೊಳ್ಳಲು ತಮ್ಮಲ್ಲಿರುವ ಶ್ರಮ ಶಕ್ತಿಯನ್ನು ಅಗ್ಗದದರದಲ್ಲಿ ಅವರಿಗೆ ಒದಗಿಸಿಕೊಡುವ ತಾಣಗಳಾಗಿವೆ. ಹಾಗಾಗಿ, ಈ ದೇಶಗಳ ಜಿಡಿಪಿ ಎಷ್ಟು ವೇಗದಲ್ಲಿ ಬೆಳೆದರೂ ಇದು ಅಸಮತೆಯಿಂದ ಕೂಡಿದ ಪ್ರಪಂಚವಾಗಿಯೇ ಉಳಿದಿದೆ.

ನಿಯಂತ್ರಣ ನೀತಿಗಳ ಆಳ್ವಿಕೆಯ ಭಾರತವು ಈ ಅಸಮತೆಯಿಂದ ಕೂಡಿದ ಪ್ರಪಂಚವನ್ನು ಬದಲಾಯಿಸಲು ಹೊರಟಿತ್ತು. ಇನ್ನೊಂದು ಕಡೆಯಲ್ಲಿ ಸಾಮ್ರಾಜ್ಯಶಾಹಿಗಳು ಈ ದೇಶದ ಪ್ರಯತ್ನವನ್ನು ಸತತವಾಗಿ ಹಿಂದಕ್ಕೆ ತಳ್ಳುತ್ತಾ ಸಂಬಂಧಗಳು ಅಸಮವಾಗಿಯೇ ಉಳಿಯುವಂತೆ ನೋಡಿಕೊಂಡವು ಮತ್ತು ಆ ಯೋಜನೆಯ ಭಾಗವಾಗಿ, ತಮ್ಮ ಸಹಯೋಗಿ ಸಂಸ್ಥೆಗಳಾದ ಐಎಂಎಫ್-ವಿಶ್ವ ಬ್ಯಾಂಕ್‌ಗಳ ಮೂಲಕ ನವ ಉದಾರ ನೀತಿಗಳನ್ನು ಈ ದೇಶದ ಮೇಲೆ ಹೇರಿದವು. ಸಾಮ್ರಾಜ್ಯಶಾಹಿಗಳ ಈ ಯೋಜನೆಯಲ್ಲಿ ತಾನು ಸಂಪೂರ್ಣವಾಗಿ ಷಾಮೀಲಾಗಿರುವುದನ್ನು ಭಾಜಪ ನೇತೃತ್ವದ ಸರ್ಕಾರ ಬಯಲು ಮಾಡಿಕೊಂಡಿದೆ ಎಂದು ಪ್ರಭಾತ್ ಪಟ್ನಾಯಕ್ ಇತ್ತೀಚಿನ ಈ ಎಫ್‌ಡಿಐ 'ಉದಾರತೆ'ಯನ್ನು ವಿಶ್ಲೇಷಿಸುತ್ತಾರೆ.

ರಘುರಾಂ ರಾಜನ್ ನಿರ್ಗಮನ ಪ್ರಕಟವಾದ ಮರುದಿನವೇ ಮೋದಿ ಸರ್ಕಾರ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಭಾರಿ ರಿಯಾಯ್ತಿಗಳನ್ನು ವಿಸ್ತರಿಸಿದ ಈ ಪ್ರಕರಣ ಹಿಂದುತ್ವ ಅಜೆಂಡಾ ಕಾರ್ಯರೂಪಕ್ಕೆ ತರಲು ಮೋದಿ ಸರ್ಕಾರವು ಸಾಮ್ರಾಜ್ಯಶಾಹಿಗೆ ಎಷ್ಟು ಬೇಕಾದರೂ ರಿಯಾಯ್ತಿ ಕೊಡಲು ತುದಿಗಾಲಲ್ಲಿ ನಿಂತಿದೆ ಎಂಬುದನ್ನು ವಿಶದಪಡಿಸಿದೆ. **ಹಿಂದುತ್ವವಾದಿಗಳಿಗೆ ರಾಜನ್ ಆಗಿ ಬರದಿದ್ದರೆ ಅವರನ್ನು ವಜಾ ಮಾಡಲಾಗುತ್ತದೆ. ಅದಕ್ಕಾಗಿ ಬೆಲೆ/ದಂಡ ಕೊಡಬೇಕೆಂದು ವಿದೇಶಿ ಬಂಡವಾಳ ಕೇಳಿದರೆ, ಸರ್ಕಾರ ಆ ಬೆಲೆಯನ್ನು ತೆರಲು ಉತ್ಸುಕವಾಗಿದೆ ಎಂದು ಈ ಪ್ರಕರಣವನ್ನು ಒಟ್ಟಾಗಿ ವಿಶ್ಲೇಷಿಸಿರುವ ಪ್ರೊ.ಪಟ್ನಾಯಕ್** ಬಾಯಿತೆಗೆದರೆ ರಾಷ್ಟ್ರಾಭಿಮಾನದ ಹಾಡು ಹೊರಡಿಸುವ ಹಿಂದುತ್ವವಾದಿಗಳು ಈ ದೇಶವನ್ನು ಆರ್ಥಿಕವಾಗಿ, ಸೈನಿಕವಾಗಿ ಮತ್ತು ತಂತ್ರಜ್ಞಾನಿಕವಾಗಿ, ಸಾಮ್ರಾಜ್ಯಶಾಹಿಯ ಮುಂದೆ ಹಲ್ಲುಗಿಂಜುವಂತೆ ಮಾಡಿರುವುದು ಒಂದು ವಿಡಂಬನೆಯೇ ಸರಿ ಎಂದು ಅಭಿಪ್ರಾಯ ಪಡುತ್ತಾರೆ. ●

# ಕೇರಳ ಎಲ್‌ಡಿಎಫ್ ಸರಕಾರ: ನಿರೀಕ್ಷೆ, ಆಶಾವಾದ ತುಂಬಿದ ಒಂದು ತಿಂಗಳು

ಮೇ 2016 ರ ಚುನಾವಣೆಗಳಲ್ಲಿ ಭಾರೀ ವಿಜಯ ಗಳಿಸಿ ಅಧಿಕಾರ ವಹಿಸಿಕೊಂಡ ಎಲ್‌ಡಿಎಫ್ ಸರಕಾರ ಜೂನ್ 25ರಂದು ಒಂದು ತಿಂಗಳು ಪೂರೈಸಿದೆ. ಅಧಿಕಾರ ವಹಿಸಿಕೊಂಡ ಮೊದಲ ದಿನವೇ ನಡೆದ ಸಂಪುಟ ಸಭೆ ಜನತೆಗಿತ್ತ ಭರವಸೆಗಳನ್ನು ಈಡೇರಿಸುವ ಇಚ್ಛಾಶಕ್ತಿಯನ್ನು ತೋರಿತ್ತು. ಕಲ್ಯಾಣ ಪೆನ್ಶನ್ ಮೊತ್ತವನ್ನು 1000ರೂ.ಗೇರಿಸುವ, ಮತ್ತು ಏರುತ್ತಿರುವ ಬೆಲೆಗಳಿಂದ ಜನರಿಗೆ ರಕ್ಷಣೆ ಕೊಡಲು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಲು 150 ಕೋಟಿ ರೂ.ಗಳನ್ನು ನೀಡುವ ನಿರ್ಣಯವನ್ನು ಕೈಗೊಳ್ಳಲಾಯಿತು.

ಇದರ ಪರಿಣಾಮವಾಗಿ ಕೇರಳದ ಪ್ರಖ್ಯಾತ ಮಾವೆಳಿ ಸ್ಟೋರ್‌ಗಳು ಮತ್ತು ಕನ್ಸ್ಯೂಮರ್‌ಫೆಡ್ ಅಂಗಡಿಗಳು ಸಕ್ರಿಯಗೊಂಡಿವೆ. ಉದ್ದಿನ ಬೇಳೆಗೆ ಹೊರಗೆ ಕೆಜಿಗೆ 181ರೂ. ಇದ್ದರೆ ಈ ಸ್ಟೋರ್‌ಗಳಲ್ಲಿ ಅದು 66ರೂ.ಗೆ ಸಿಗುತ್ತಿದೆ. ಇಂತಹ 13 ಅಗತ್ಯ ಸಾಮಗ್ರಿಗಳು ಈ ಸ್ಟೋರ್‌ಗಳಲ್ಲಿ ರಿಯಾಯ್ತಿ ಬೆಲೆಗಳಲ್ಲಿ ಸಿಗುತ್ತಿವೆ. (ಹಿಂದಿನ ಸಂಚಿಕೆಯಲ್ಲಿ ಈ ಪುಟದಲ್ಲಿ ಪ್ರಕಟವಾದ 'ಫೇಸ್‌ಬುಕ್' ಒಕ್ಕಣಿಕೆ ನೋಡಿ). ಒಂದು ವಿಶೇಷ ರಮಝಾನ್ ಸಂತೆಯನ್ನೂ ನಡೆಸಲಾಗಿದೆ.

ಮೊದಲ ಸಂಪುಟ ಸಭೆ ಪ್ರತಿಯೊಂದು ಇಲಾಖೆ ತನ್ನಲ್ಲಿರುವ ಖಾಲಿ ಹುದ್ದೆಗಳ ಬಗ್ಗೆ ವರದಿ ಕಳಿಸಬೇಕು ಎಂದೂ ನಿರ್ದೇಶಿಸಿತು. ಯೋಜನಾ ಪ್ರಕ್ರಿಯೆ ದೇಶದಲ್ಲಿ ಬಲಪಂಥೀಯ ದಾಳಿಗಳಿಂದ ನಿಂತು ಹೋಗುತ್ತಿರುವಾಗ ಕೇರಳದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಮುಂದುವರೆಸಲು ನಿರ್ಧರಿಸಲಾಗಿದೆ.

ಹಿಂದಿನ ಯುಡಿಎಫ್ ಸರಕಾರ ತನ್ನ ಕೊನೆಯ ಮೂರು ತಿಂಗಳಲ್ಲಿ ತರಾತುರಿಯಲ್ಲಿ ಹಲವು ವಿವಾದಾತ್ಮಕ ನಿರ್ಧಾರಗಳನ್ನು ಕೈಗೊಂಡಿತ್ತು. ಇವು ಭ್ರಷ್ಟಾಚಾರಕ್ಕೆ ಮತ್ತು ರಾಜ್ಯ ಖಜಾನೆಯ ಲೂಟಿಗೆ ದಾರಿ ಮಾಡಿಕೊಟ್ಟಿದ್ದವು. ಈ ವರ್ಷದ ಜನವರಿಯಿಂದ ಮಾರ್ಚ್ ನಡುವೆ ಆ ಸರಕಾರ ಕೈಗೊಂಡ ನಿರ್ಣಯಗಳ ಆಮೂಲಾಗ್ರ ವಿಶ್ಲೇಷಣೆ ನಡೆಸಲು ಕಾನೂನು ಮಂತ್ರಿ ಎ.ಕೆ.ಬಾಲನ್ ನೇತೃತ್ವದಲ್ಲಿ ರಚಿಸಿದ ಉಪಸಮಿತಿ ಇಂತಹ 19 ನಿರ್ಣಯಗಳು ಕಾನೂನುಬಾಹಿರವಾಗಿವೆ ಎಂದು ಕಂಡು ಹಿಡಿದಿದೆ.

ದಲಿತ ಕಾನೂನು ವಿದ್ಯಾರ್ಥಿನಿ ಜೀಶಾಳ ಭೀಕರ ಕೊಲೆಯ ತನಿಖೆಗೆ ಎಡಿಜಿಪಿ ಬಿ.ಸಂಧ್ಯಾ ನೇತೃತ್ವದಲ್ಲಿ ಒಂದು ವಿಶೇಷ ತಂಡವನ್ನು ರಚಿಸಲಾಯಿತು. ಹಿಂದಿನ ಸರಕಾರದ ಅಡಿಯಲ್ಲಿ ಪೋಲೀಸರು ಘಟನೆಯ ಸ್ಥಳದಲ್ಲಿನ ಎಲ್ಲ ಸಾಕ್ಷ್ಯಗಳನ್ನು ನಾಶಮಾಡಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ತನಿಖಾ ತಂಡ ಈಗ ಅಪರಾಧಿಯನ್ನು ಬಂಧಿಸಿದೆ, ಜೀಶಾಳ ತಂಗಿಗೆ ಸರಕಾರೀ ಕೆಲಸ ಮತ್ತು ತಾಯಿಗೆ ಮಾಸಿಕ ಪೆನ್ಶನ್ ಮಂಜೂರು ಮಾಡಿತು.

ಜನಗಳ ಪ್ರತಿಯೊಂದು ದೂರನ್ನು ಒಂದು ತಿಂಗಳ ಒಳಗೆ ಪರಿಹರಿಸಲಾಗುವುದು, ಪ್ರತಿಯೊಬ್ಬ ಮಂತ್ರಿ ವಾರದ ಐದು ದಿನಗಳಲ್ಲಿ ರಾಜ್ಯದ ರಾಜಧಾನಿಯಲ್ಲಿ ಇರುತ್ತಾರೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ಜಿಲ್ಲಾ ಆಡಳಿತವೇ ಪರಿಹರಿಸಬಹುದಾದ ದೂರುಗಳನ್ನು ರಾಜಧಾನಿಗೆ ಎಳೆಯಬಾರದು ಎಂದೂ ತಾಕೀತು ಮಾಡಲಾಗಿದೆ. ಈ ಮೂಲಕ ಎಲ್‌ಡಿಎಫ್ ಸರಕಾರ ವಿಕೇಂದ್ರೀಕರಣವನ್ನು ಬಲಪಡಿಸುವ ಸಂದೇಶವನ್ನೂ ನೀಡಿದೆ.

ಇನ್ನೇನು ಮುಚ್ಚಲಿದ್ದ ನಾಲ್ಕು ಸರಕಾರೀ ನೆರವಿನ ಶಾಲೆಗಳನ್ನು ವಹಿಸಿಕೊಂಡು ಎಲ್‌ಡಿಎಫ್ ಸರಕಾರ ಸಾರ್ವಜನಿಕ ಶಿಕ್ಷಣದ ಬಗ್ಗೆ ಗರಿಷ್ಟ ನಿಗಾ ವಹಿಸುವತ್ತ ಜಾಗರೂಕತೆಯಿಂದ ಹೆಜ್ಜೆ ಇಟ್ಟಿದೆ.

ಸರಕಾರೀ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯನ್ನು ನೀಗಿಸಲು ಕಾರುಣ್ಯ ಫಾರ್ಮಸಿಗೆ 37.2 ಕೋಟಿ ರೂ. ಗಳನ್ನು ನೀಡಲಾಗಿದೆ.

ಭತ್ತದ ಸಾಗುವಳಿಯನ್ನು 1.98 ಲಕ್ಷ ಹೆಕ್ಟೇರುಗಳಿಂದ 3ಲಕ್ಷ ಹೆಕ್ಟೇರುಗಳಿಗೆ ಹೆಚ್ಚಿಸಲು ನಿರ್ಧರಿಸಲಾಗಿದೆ.

ತೆರಿಗೆ ವಸೂಲಿಯಲ್ಲಿ 20ಶೇ. ಹೆಚ್ಚಳ ತರಲು ನಿರ್ಧರಿಸಲಾಗಿದೆ

ಮೂರು ಹಂತಗಳ ಪಂಚಾಯತು ಸಂಸ್ಥೆಗಳಿಗೆ 12 ಕಂತುಗಳಲ್ಲಿ ನೆರವು ಒದಗಿಸಲಾಗುವುದು.




**ಆರೆಸ್ಸೆಸ್/ಬಿಜೆಪಿ ಹಿಂಸಾಚಾರ:**

ಈ ನಡುವೆ ಈ ಚುನಾವಣೆಯಲ್ಲಿ ಎರಡಂಕಿ ತಲುಪುತ್ತೇವೆ ಎಂದು ಸ್ವತಃ ಬಿಜೆಪಿ ಅಧ್ಯಕ್ಷ-ರೇ ಬಡಾಯಿ ಕೊಚ್ಚಿಕೊಂಡಿದ್ದರೂ, ಕೋಮು ಧ್ರುವೀಕರಣದ ಪ್ರಯತ್ನಗಳ ನಂತರವೂ ಕೇವಲ ಒಂದೇ ಸ್ಥಾನಕ್ಕೆ(ಅದೂ ಕಾಂಗ್ರೆಸಿನ ಪರೋಕ್ಷ ನೆರವಿನಿಂದ?) ತೃಪ್ತಿಗೊಳ್ಳಬೇಕಾಗಿ ಬಂದ ಆರೆಸ್ಸೆಸ್/ಬಿಜೆಪಿ ರಾಜ್ಯಾದ್ಯಂತ ಸಿಪಿಐ(ಎಂ) ಕಾರ್ಯಕರ್ತರು ಮತ್ತು ಕಚೇರಿಗಳ ಮೇಲೆ ಹತಾಶ ದಾಳಿ ನಡೆಸುತ್ತಿದೆ. ಇದಕ್ಕೆ ಇಬ್ಬರು ಸಿಪಿಐ(ಎಂ) ಕಾರ್ಯಕರ್ತರು ಬಲಿಯಾಗಿದ್ದಾರೆ, 80ಕ್ಕೂ ಹೆಚ್ಚು ಕಾರ್ಯಕರ್ತರು ಗಾಯಗೊಂಡಿದ್ದಾರೆ.

ಬಿಜೆಪಿ ಕೇಂದ್ರ ಮಂತ್ರಿ ರಾಜ್ಯಕ್ಕೆ ಬಂದು ಪತ್ರಿಕಾ ಸಮ್ಮೇಳನ ನಡೆಸಿ 'ಎಚ್ಚರಿಸಿ'ದರು.! ಬಿಜೆಪಿ ಅಧ್ಯಕ್ಷ ಅಮಿತ್ ಷಾ "ದೇಶವನ್ನು ಬಿಜೆಪಿ ಆಳುತ್ತಿದೆ, 14 ರಾಜ್ಯಗಳಲ್ಲಿ ಬಿಜೆಪಿ ಸರಕಾರಗಳಿವೆ ಎಂದು ಸಿಪಿಐ(ಎಂ) ನೆನಪಿಟ್ಟುಕೊಳ್ಳಬೇಕು" ಎಂಬ ಬೆದರಿಕೆ-ಯ ದನಿಯ ಮೂಲಕ ಈ ಹಿಂಸಾಚಾರದ ಹಿಂದಿರುವ ಕುತಂತ್ರವನ್ನು ತಾವೇ ಬಯಲು ಮಾಡಿದ್ದಾರೆ.

# ಛತ್ತೀಸ್‌ಗಢದಲ್ಲಿ ಬುಡಕಟ್ಟು ಯುವತಿಯ ಸಾವು: ಇನ್ನೊಂದು ಹುಸಿ ಎನ್‌ಕೌಂಟರ್?

ಛತ್ತೀಸ್‌ಗಢ ರಾಜ್ಯದ ಬಸ್ತರ್ ಪ್ರದೇಶದಲ್ಲಿ ಜೂನ್ 13ರಂದು ಸಂಭವಿಸಿದ 23 ವರ್ಷದ ಬುಡಕಟ್ಟು ಯುವತಿಯ ಸಾವು ರಾಜ್ಯ ಸರಕಾರದ ನಕ್ಸಲ್-ವಿರೋಧಿ ಕಾರ್ಯಾಚರಣೆಯ ಬಗ್ಗೆ ಮತ್ತೊಮ್ಮೆ ಪ್ರಶ್ನೆಚಿಹ್ನೆಯನ್ನಿಟ್ಟಿದೆ.

ಈ ಪ್ರದೇಶದ ಸುಕ್ಮಾ ಜಿಲ್ಲೆಯ ಗೋಂಪಾಡ ಗ್ರಾಮದ ಮಡಕಂ ಹಿಡ್ಮೆ ಎಂಬ ನಕ್ಸಲ್‌ವಾದಿ ಮಹಿಳೆ ಪೋಲಿಸರೊಂದಿಗೆ 'ಎನ್‌ಕೌಂಟರ್'ನಲ್ಲಿ ಸತ್ತಿದ್ದಾಳೆ ಎಂದು ಪೋಲೀಸ್ ಇಲಾಖೆಯ ಅಧಿಕಾರಿಗಳು ಹೇಳಿದರೆ, ಆಕೆಯ ತಾಯಿ ಮಡಕಂ ಲಕ್ಷ್ಮಿ ಆಕೆಯನ್ನು ಜೂನ್ 13ರಂದು ಭದ್ರತಾ ಸಿಬ್ಬಂದಿ(ಜಿಲ್ಲಾ ಭದ್ರತಾ ಗಾರ್ಡ್) ಎಳೆದೊಯ್ದರು. ಗ್ರಾಮಸ್ಥರ ನೆರವಿನಿಂದ ಭದ್ರತಾ ಗಾರ್ಡ್‌ಗಳ ಕ್ಯಾಂಪುಗಳಿಗೆ ಅಲೆದಾಡಿದ ನಂತರ ಮರುದಿನ ಆಕೆಯ ಹೆಣವನ್ನು ಕೊಡಲಾಯಿತು ಎಂದು ದೂರಿದ್ದಾರೆ.

ಪೋಲೀಸ್ ಇಲಾಖೆ ನಕ್ಸಲ್‌ವಾದಿಗಳ ಯೂನಿಫಾರಂನಲ್ಲಿ ಆಕೆಯ ಪೋಟೋವನ್ನು ಪ್ರಕಟಿಸಿದ್ದರೆ, ಆಕೆಯ ತಾಯಿಗೆ ಸಿಕ್ಕಿದ್ದು ಪ್ಲಾಸ್ಟಿಕ್ ಹಾಳೆಯಲ್ಲಿ ಸುತ್ತಿದ್ದ ಮೈಮೇಲೆಲ್ಲ ಹಿಂಸಾಚಾರದ ಗುರುತುಗಳಿದ್ದ ನಗ್ನ ದೇಹ. ಆಕೆ ಯಾವ ಮಾವೋವಾದಿ ಅಥವ ನಕ್ಸಲ್ ಪಡೆಯಲ್ಲೂ ಇರಲಿಲ್ಲ ಎನ್ನುವ ಆಕೆಯ ತಾಯಿ ಭದ್ರತಾ ಸಿಬ್ಬಂದಿ ಆಕೆಯ ಮೇಲೆ ಅತ್ಯಾಚಾರ ನಡೆಸಿ ಕೊಂದಿದ್ದಾರೆ ಎನ್ನುತ್ತಾಳೆ.

ಪೋಲೀಸ್ ಪ್ರಕಟಿಸಿರುವ ನಕ್ಸಲ್‌ವಾದಿ ಯೂನಿಫಾರಂನಲ್ಲಿರುವ ಆಕೆಯ ಫೋಟೋ ನಿಜವಾದ್ದಲ್ಲ ಎಂಬ ಸಂದೇಹ ಮೂಡಿಸುವುದಾಗಿಯೂ, ಆ ಹಳ್ಳಿಗೆ ಹೋಗದಂತೆ ಸಾಮಾಜಿಕ-ರಾಜಕೀಯ ಕಾರ್ಯಕರ್ತರ ಮೇಲೆ ಪೋಲೀಸರ ನಿಷೇಧ ಈ ಸಂದೇಹವನ್ನು ಬಲಪಡಿಸುತ್ತದೆ ಎಂದು ಸಿಪಿಐ(ಎಂ) ಛತ್ತೀಸ್‌ಗಡ ರಾಜ್ಯ ಕಾರ್ಯದರ್ಶಿ ಸಂಜಯ್ ಪರಾತೆ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.


ಈ ಘಟನೆಯ ಉನ್ನತ ಮಟ್ಟದ ತನಿಖೆ ನಡೆಸಬೇಕು, ಅದುವರೆಗೆ ಸಂಬಂಧಪಟ್ಟ ಭದ್ರತಾ ಸಿಬ್ಬಂದಿ ಮತ್ತು ಪೋಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಈ ನಡುವೆ ಆ ತಾಯಿ ಛತ್ತೀಸ್‌ಗಡ ಹೈಕೋರ್ಟಿನ ಮೊರೆ ಹೋಗಿದ್ದು, ಅದು ಈಗಾಗಲೇ ಹೂತಿರುವ ಮಡಕಂ ಹಿಡ್ಮೆಯ ಮೃತದೇಹವನ್ನು ತೆಗೆದು ಜಗದಲ್ಪುರದ ಮಹಾರಾಣಿ ಸರಕಾರೀ ಆಸ್ಪತ್ರೆಯಲ್ಲಿ ಮರುಶವಪರೀಕ್ಷೆ ನಡೆಸಬೇಕು, ಅದರ ವರದಿಯನ್ನು ವೀಡಿಯೋ ಟೇಪಿನೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಆದೇಶ ನೀಡಿದೆ ಎಂದು ವರದಿಯಾಗಿದೆ.

ಇದು ಈ ಬಡ ಬುಡಕಟ್ಟು ಕುಟುಂಬಕ್ಕೆ ಅವರ ಮಗಳನ್ನಲ್ಲದಿದ್ದರೂ ನ್ಯಾಯವನ್ನಾದರೂ ಕೊಡಿಸಬಹುದೆಂಬ ನಿರೀಕ್ಷೆ ಮೂಡಿಸಿದೆ. ಆದರೆ ಈ ಹಿಂದಿನ ಇಂತಹ ನ್ಯಾಯಾಲಯಗಳ ಅದೇಶದ ಅನುಭವ ಬಹಳಷ್ಟು ನಿರೀಕ್ಷೆಯನ್ನು ಇಟ್ಟುಕೊಳ್ಳುವಂತಿಲ್ಲ ಎಂಬುದನ್ನೂ ನೆನಪಿಸುತ್ತಿದೆ ಎನ್ನಲಾಗಿದೆ.

ಈ ಪ್ರದೇಶದಲ್ಲಿ ವರದಿಗಾರರಿಗೆ ವಿಪರೀತ ಕಿರುಕುಳ ಕೊಡುತ್ತಿರುವುದನ್ನು ತನಿಖೆ ಮಾಡಲು ಹೋದ ಜೆಎನ್‌ಯು-ದಿಲ್ಲಿ ವಿಶ್ವವಿದ್ಯಾಲಯ ತಂಡ ನಕ್ಸಲೀಯ ಚಟುವಟಿಕೆಗಳನ್ನು ತಡೆಯುವ ಹೆಸರಿನಲ್ಲಿ ಪ್ರಜಾಪ್ರಭುತ್ವ ಚಟುವಟಿಕೆಗಳನ್ನು, ಆದಿವಾಸಿಗಳನ್ನು ಇಲ್ಲಿಯ ಬಿಜೆಪಿ ಸರಕಾರ ದಮನ ಮಾಡುತ್ತಿದೆ ಎಂದು ಹೇಳಿರುವುದನ್ನು ಇದು ಪುಷ್ಟಿಗೊಳಿಸುತ್ತದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹೇಳಿದ್ದಾರೆ.

ರಾಷ್ಟ್ರೀಯ ಬುಡಕಟ್ಟು ಆಯೋಗ ಮತ್ತು ಮಾನವಾಧಿಕಾರ ಆಯೋಗ ಈ ಪ್ರದೇಶದ ಹಳ್ಳಿಗಳಿಗೆ ರಕ್ಷಣೆ ಕೊಡಲು ಪೋಲೀಸ್ ಗಸ್ತು ಹಾಕಬೇಕೆಂದು ಹೇಳಿರುವುದನ್ನೂ ಬಿಜೆಪಿ ಸರಕಾರ ಪಾಲಿಸುತ್ತಿಲ್ಲ, ಸಂವಿಧಾನಿಕ ಸಂಸ್ಥೆಗಳಿಗೆ ಅದು ಎಷ್ಟು ಗೌರವ ಕೊಡುತ್ತದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಹೇಳಿದ್ದಾರೆ.







# ಭೋಪಾಲದಲ್ಲಿ ಎಡಪಕ್ಷಗಳ ಜೈಲ್ ಭರೋ ಸತ್ಯಾಗ್ರಹ

ಜೂನ್ 20ರಂದು ಮಧ್ಯಪ್ರದೇಶದ ರಾಜಧಾನಿ ಭೋಪಾಲದಲ್ಲಿ ಸಾವಿರಾರು ಎಡಪಕ್ಷಗಳ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರಕಾರಗಳ ಜನ-ವಿರೋಧಿ, ಪ್ರಜಾಪ್ರಭುತ್ವ-ವಿರೋಧಿ ನಡೆಗಳ ವಿರುದ್ಧ ಸತ್ಯಾಗ್ರಹ ನಡೆಸಿ ಬಂಧನಕ್ಕೊಳಗಾದರು.

ಸಿಪಿಐ, ಸಿಪಿಐ(ಎಂ), ಸಿಪಿಐ(ಎಂಎಲ್-ರಿವೊಲ್ಯುಶನರಿ) ಮತ್ತು ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷಗಳ ರಾಜ್ಯ ಮುಖಂಡರ ನೇತರತ್ವದಲ್ಲಿ ಈ ಸತ್ಯಾಗ್ರಹ ನಡೆಯಿತು. ಸಿಪಿಐನ ರಾಷ್ಟ್ರೀಯ ಕಾರ್ಯದರ್ಶಿ ಮಂಡಳಿಯ ಸದಸ್ಯೆ ಅಮರಜಿತ್ ಕೌರ್ ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾತನಾಡಿದರು.

# ಪಶ್ಚಿಮ ಬಂಗಾಲ: ಕಾಂಗ್ರೆಸ್ ಮೆರವಣಿಗೆಯಲ್ಲಿ ಭಾಗವಹಿಸದಿರಲು ಎಡರಂಗ ಶಾಸಕರ ನಿರ್ಧಾರ

ಪಶ್ಚಿಮ ಬಂಗಾಲದಲ್ಲಿ ಜೂನ್25 ರಂದು ಕಾಂಗ್ರೆಸ್ ಒಂದು ಮೆರವಣಿಗೆಯನ್ನು ಏರ್ಪಡಿಸಿತ್ತು. ವಿಧಾನಸಭೆಯಲ್ಲಿನ ಎಡಪಕ್ಷಗಳ ಮುಖಂಡರು ಈ ಮೆರವಣಿಗೆಯಲ್ಲಿ ಎಡಪಕ್ಷಗಳ ಶಾಸಕರು ಭಾಗವಹಿಸುವುದಿಲ್ಲ ಎಂದು ನಿರ್ಧರಿಸಿದರು. ಆಪ್ರಕಾರ ಭಾಗವಹಿಸಲಿಲ್ಲ. ಆದರೆ ಒಬ್ಬ ಸದಸ್ಯರು, ತನ್ಮಯ್ ಭಟ್ಟಾಚಾಯಸಿದರಲ್ಲಿ ಭಾಗವಹಿಸಿದರು. ಅವರಿಗೆ ಎಡಪಕ್ಷಗಳ ಶಾಸಕಾಂಗದ ನಿರ್ಣಯವನ್ನು ಉಲ್ಲಂಘಿಸಿದ್ದಕ್ಕಾಗಿ ಸಾರ್ವಜನಿಕ ಛೀಮಾರಿ ಹಾಕಲಾಗಿದೆ, ಮತ್ತು ಇನನು ಮುಂದೆ ಇಂತಹ ವಿಷಯಗಳಲ್ಲಿ ಅವರು ಜಾಗರೂಕರಾಗಿರುವುದಾಗಿ ಆಶಿಸಿದೆ ಎಂದು ಸಿಪಿಐ(ಎಂ)ರಾಜ್ಯ ಕಾರ್ಯದರ್ಶಿಗಳು ನೀಡಿರುವ ಪತ್ರಿಕಾ ಹೇಳಿಕೆ ತಿಳಿಸಿದೆ.



ಈ ಪುಟ್ಟ ಬಾಲಕಿ ಮೇಗಲಿನಾ ಬ್ಯಾನರ್ಜಿ, ತನ್ನ ಜನ್ಮದಿನಾಚರಣೆಗೆ ಮಾಡಿದ್ದ 5000 ರೂ. ಗಳ ಉಳಿತಾಯವನ್ನು ಟಿಎಂಸಿ ಹಿಂಸಾಚಾರಗಳಿಗೆ ತುತ್ತಾದ ಸಂಗಾತಿಗಳ ನೆರವಿಗೆಂದು ಸಿಪಿಐ(ಎಂ) ಸಂಗ್ರಹಿಸುತ್ತಿರುವ ನಿಧಿಗೆ ನೀಡಿದಳು. ಎಡರಂಗದ ಅಧ್ಯಕ್ಷ ಬಿಮನ್ ಬಸು ಆಕೆಯಿಂದ ಈ ಚೆಕ್ ಸ್ವೀಕರಿಸಿದರು.




## ಜೂಜುಕೋರ ಬಂಡವಾಳಿಗರ ಹಿತ ಕಾಯುವ ನೀತಿ ಹಿಮ್ಮೆಟ್ಟಿಸಿ..... ಪುಟ 9 ರಿಂದ

ಪಾತ್ರ. ವೈಜ್ಞಾನಿಕ ಬೆಲೆಯನ್ನು ಒಂದು ಹಕ್ಕಾಗಿ ರೈತರು ಕೇಳುವಂತಾಗಬೇಕು.

ಕೃಷಿ ಮಾರುಕಟ್ಟೆಯಲ್ಲಿ ಬಂಡವಾಳಶಾಹಿ ಹಿತಾಸಕ್ತಿಗಳು ಮಧ್ಯಪ್ರವೇಶ ಮಾಡುತ್ತಿರುವ ಹಿನ್ನೆಲೆಯಲ್ಲಿ ಕೃಷಿ ಉತ್ಪನ್ನಗಳ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಹಕಾರಿ ಚಳುವಳಿಯನ್ನು ಬಲಪಡಿಸುವ ಕೆಲಸಕ್ಕೂ ಒತ್ತು ಸಿಗಬೇಕಿದೆ. ಇಂತಹ ಬಂಡವಾಳಶಾಹಿ ಮಾರುಕಟ್ಟೆ ನಡುವೆ ರೈತರ ಹಿತ ಕಾಯುವಲ್ಲಿ ಸಹಕಾರಿ ಕ್ಷೇತ್ರದ ಪಾತ್ರ ಅತ್ಯಂತ ಮಹತ್ವದ್ದು.

ಗ್ರಾಹಕರು ಕೃಷಿ ಉತ್ಪನ್ನಗಳಿಗೆ ತಾವು ಕೊಡುವ ಮೌಲ್ಯದ ಶೇ.35 ಮಾತ್ರ ರೈತರಿಗೆ ತಲುಪುತ್ತಿದೆ ಎಂದು ಅಂದಾಜು ಮಾಡಲಾಗಿದೆ. ಸಹಕಾರಿ ಕ್ಷೇತ್ರವು ಬಲವಾಗಿರುವ ಕಡೆ ಕೃಷಿ ಉತ್ಪನ್ನ ಮಾರಾಟವಾಗುವ ದರದ ಶೇ. 60–70 ರಷ್ಟು ಮೌಲ್ಯವು ರೈತರಿಗೆ ಸಿಗುತ್ತಿದೆ. ಹೈನುಗಾರಿಕೆಯಲ್ಲಿ ಗ್ರಾಮ ಮಟ್ಟದಿಂದ ರಾಜ್ಯಮಟ್ಟದವರೆಗೆ ಕೆಲಸ ನಿರ್ವಹಿಸುತ್ತಿರುವ ಸಹಕಾರಿ ರಂಗ ಇದಕ್ಕೊಂದು ಉತ್ತಮ ಉದಾಹರಣೆ. ದೋಷ–ಕೊರತೆಗಳ ನಡುವೆಯೂ ಶೇ. 65–70 ರಷ್ಟು ಪಾಲು ರೈತರಿಗೆ ದೊರೆಯುತ್ತಿದೆ. ಕೃಷಿ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ನಿಯಂತ್ರಣ ಆಗಬೇಕಿದೆ.

ಚಾಲ್ತಿ ಇರುವ ಬೆಂಬಲ ಬೆಲೆ ವ್ಯವಸ್ಥೆಯಲ್ಲಿ ಗಂಭೀರ ಸಮಸ್ಯೆಗಳಿವೆ. ಕೇಂದ್ರ ಸರಕಾರದ 'ಕೃಷಿ ಉತ್ಪನ್ನಗಳ ಬೆಲೆ ಆಯೋಗ'(ಸಿಎಸಿಪಿ)ವು ಕೃಷಿ ಉತ್ಪಾದನಾ ವೆಚ್ಚಕ್ಕಿಂತಲೂ ಕಡಿಮೆ ಬೆಲೆ ನಿಗದಿ ಮಾಡುತ್ತದೆ. ಇದರ ಉದ್ದೇಶ 'ಮಾರುಕಟ್ಟೆ ವ್ಯವಸ್ಥೆ' ಕೆಲಸ ಮಾಡಲು ಬಿಡಬೇಕು ಎಂಬುದು. ಇದು ಅತ್ಯಂತ ದೋಷಪೂರಿತ, ಅವೈಜ್ಞಾನಿಕ, ಅನ್ಯಾಯುತ ಬೆಲೆ ನಿಗದಿ ಪದ್ಧತಿ. ಇದರಿಂದ ರೈತರಿಗೆ ಯಾವ ಅನುಕೂಲವೂ ಇಲ್ಲ. ಈ ಪದ್ಧತಿ ಹೋಗಬೇಕು. ಇಂತಹ ಕೆಟ್ಟ ಮಾರುಕಟ್ಟೆಯ ವ್ಯವಸ್ಥೆಯಿಂದಾಗಿಯೇ 3.5 ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆಗಳಿಗೆ ಗುರಿಯಾಗಿರುವುದು.

ದರ ನಿಗದಿ ಮಾತ್ರವಲ್ಲ, ಸಕಾಲದಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡುವುದು ಮುಖ್ಯ. ಕೃಷಿ ಮಾರುಕಟ್ಟೆಯಲ್ಲಿ ಸರಕಾರಗಳು ಸರಿಯಾದ ಸಮಯದಲ್ಲಿ ಮಧ್ಯಪ್ರವೇಶ ಮಾಡಬೇಕು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ) ಗಳಿಗೆ ಈಗ ರೈತರು ಬೆಳೆದ ಕೃಷಿ ಉತ್ಪನ್ನಗಳು ಬರುತ್ತಿರುವುದು ಕೇವಲ ಶೇ. 50 ರಷ್ಟು ಮಾತ್ರ. ಉಳಿದವರು ಬೆಳೆ ಇಡುವಾಗಲೇ ಬೆಳೆಯನ್ನು ನಿಮಗೇ ಕೊಡುತ್ತೇವೆಂದು ಹಣವಂತರಿಗೆ ಮಾತು ಕೊಟ್ಟಿರುತ್ತಾರೆ.

ಸರಕಾರಗಳು ಸುಗ್ಗಿಯ ಕಾಲದಲ್ಲಿ ಮಧ್ಯಪ್ರವೇಶ ಮಾಡುವುದರಲ್ಲಿ ತಡ ಮಾಡುತ್ತವೆ. ಬೆಳೆದ ಬೆಳೆಯನ್ನು ತಮ್ಮ ಬಳಿ ಹೆಚ್ಚು ದಿನ ಇಟ್ಟುಕೊಳ್ಳಲು ಶಕ್ತಿಯಿಲ್ಲದ ಬಡ ರೈತರು, ಗೇಣೀದಾರರು ಸುಗ್ಗಿಯ ಕಾಲದಲ್ಲಿ ಕೃಷಿ ಮಾರುಕಟ್ಟೆಗೆ ಬರುತ್ತಾರೆ. ಇವರುಗಳು ಮಾರುಕಟ್ಟೆಗೆ ಬಂದಾಗ ಕೃಷಿ ಉತ್ಪನ್ನಗಳ ಬೆಲೆ ಕುಸಿದು ಹೋಗಿರುತ್ತದೆ. ಒಟ್ಟು ರೈತರಲ್ಲಿ ಸರಿಸುಮಾರು 80 ಶೇ. ರಷ್ಟು ಸಣ್ಣ ರೈತರೇ ಇದ್ದಾರೆ. ಇವರು ಉತ್ಪಾದನಾ ವೆಚ್ಚಕ್ಕಿಂತಲೂ ಕಡಿಮೆ ಬೆಲೆಗೆ ಬೆಳೆಯನ್ನು ಮಾರುವಂತಾಗುತ್ತದೆ. ಸರಕಾರ ತಡವಾಗಿ ಮಧ್ಯಪ್ರವೇಶ ಮಾಡಿದಾಗ ವ್ಯಾಪಾರಸ್ಥರು ರೈತರ ಹೆಸರಿನಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭ ಮಾಡಿಕೊಳ್ಳುವುದು ಸಹ ಇದೆ. ಸುಗ್ಗಿಗೆ ಮೊದಲೇ ಸರಕಾರದ ಖರೀದಿ ಕೇಂದ್ರಗಳು ಶುರುವಾಗಿರಬೇಕು. ಮತ್ತು ಸರಕಾರಗಳು ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ಘೋಷಿಸಿರಬೇಕು. ಕೃಷಿಬೆಲೆ ಆಯೋಗ ಬೆಲೆ ನಿಗದಿ ಮಾಡುವುದು, ನಂತರ 'ಎಫ್‌ಸಿಐ', 'ಎಪಿಎಂಸಿ'ಗಳಿಗೆ ತಿಳಿಸುವುದು. ಆಮೇಲೆ ಜಿಲ್ಲಾಧಿಕಾರಿಗಳ ಮಧ್ಯ ಪ್ರವೇಶ .. ಈಗ ಇರುವ ಈ ಸ್ವರೂಪವು ಅವೈಜ್ಞಾನಿಕವಾಗಿದೆ. ಇದು ರೈತರಿಗೆ ಅನುಕೂಲಕರವಲ್ಲ. ಈ ವ್ಯವಸ್ಥೆಗೆ ಪರ್ಯಾಯ ವ್ಯವಸ್ಥೆ ಬೇಕು.

ರಾಜ್ಯದಲ್ಲಿ ರೇಷ್ಮೆ ಗೂಡಿಗೆ ಸಂಬಂಧಿಸಿ ಡಾ. ಬಸವರಾಜ್ ಸಮಿತಿಯು ತನ್ನ ವರದಿಯನ್ನು ನೀಡಿದೆ. ಆದರೆ ಬೆಲೆ ನಿಗದಿಯಲ್ಲಿ ಕೃಷಿ ಉತ್ಪನ್ನಗಳ ಒಟ್ಟು ಮೌಲ್ಯದ ಶೇ. 50 ಲಾಭವಾಗಿ ಸಿಗಬೇಕು ಎಂಬ ಡಾ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸನ್ನು ತಪ್ಪಾಗಿ ಅರ್ಥೈಸಿಕೊಂಡು ವರ್ಷಕ್ಕೆ 5 ಬೆಳೆ ತೆಗೆಯುವುದರಿಂದ ಒಂದು ಬೆಳೆಯಲ್ಲಿ ರೈತರಿಗೆ ಶೇ. 10 ರಷ್ಟು ಲಾಭ ಎಂದು ಬೆಲೆ ನಿಗದಿ ಮಾಡಿದೆ. ಈ ತಪ್ಪು ನೀತಿಯನ್ನು ಸರಿಪಡಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ರೈತರ ಲಾಭಾಂಶದ ಕುರಿತ ಈ ಪರಿಕಲ್ಪನೆಯನ್ನು ಒಪ್ಪಲಾಗದು.



**● ಎಪಿಎಂಸಿ ಕಾಯ್ದೆಗೆ ತಂದಿರುವ ತಿದ್ದುಪಡಿಯಿಂದ ಬೆಂಬಲ ಬೆಲೆ ಕ್ರಮದ ಮೇಲೆ ಎಂತಹ ಪರಿಣಾಮ ಉಂಟಾಗುತ್ತಿದೆ.?**

ನಮ್ಮ ರಾಜ್ಯದ ರೈತರಲ್ಲಿ ಶೇ. 85 ರಷ್ಟು ಸಣ್ಣ ರೈತರು. ಎಪಿಎಂಸಿ ಕಾಯ್ದೆಗೆ ತಂದಿರುವ ತಿದ್ದುಪಡಿ ಈ ರೈತರ ಹಿತಾಸಕ್ತಿಗೆ ಮಾರಕವಾಗಿದೆ. ಈ ತನಕ ಕೃಷಿ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ಖರೀದಿಯಲ್ಲಿ ಸರಕಾರದ ಮಧ್ಯಪ್ರವೇಶ ಇರುತ್ತಿತ್ತು. ಹೊಸ ತಿದ್ದುಪಡಿಯಿಂದಾಗಿ ಖಾಸಗಿ ಕೃಷಿ ಮಾರುಕಟ್ಟೆಗೆ ಅವಕಾಶವಾಗಿದೆ. ಇಲ್ಲಿಯವರೆಗೆ ಎಪಿಎಂಸಿಗಳಲ್ಲಿ ತೂಕ, ಪಾವತಿ ಇತ್ಯಾದಿಗಳು ಇದ್ದುದರಲ್ಲಿ ಪಾರದರ್ಶಕವಾಗಿದ್ದವು. ಗುತ್ತಿಗೆ ಕೃಷಿಗಾಗಿ ಕೃಷಿ ನೀತಿಯಲ್ಲಿ ಬದಲಾವಣೆ ತರಲಾಗಿದೆ. ಕೃಷಿಯಲ್ಲಿ ವಿದೇಶಿ ಬಂಡವಾಳ ತರಬೇಕು, ಕೃಷಿಯ ಕಂಪನೀಕರಣವಾಗಬೇಕು.. ಇತ್ಯಾದಿ ಜಾಗತೀಕರಣದ ನೀತಿಗಳ ಭಾಗವಾಗಿ ಈ ತಿದ್ದುಪಡಿ ತರಲಾಗಿದೆ.

ಕೃಷಿ ಮಾರುಕಟ್ಟೆಯಲ್ಲಿ ಇ–ಟ್ರೇಡ್ ಶುರುವಾಗಿದೆ. ಕೃಷಿಯಲ್ಲಿ ಬಂಡವಾಳಗಾರರ ಮಧ್ಯಪ್ರವೇಶಕ್ಕೆ ಮತ್ತು ಈ ಶಕ್ತಿಗಳ ಜೂಜುಕೋರತನಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಎಪಿಎಂಸಿ ಎಂಬುದು ರೈತರ ಪಾಲಿಗೆ ಒಂದು ಹಂತದವರೆಗೆ ರಕ್ಷಣಾತ್ಮಕವಾದ ವ್ಯವಸ್ಥೆಯಾಗಿತ್ತು. ಈಗ ಖಾಸಗಿ ಕ್ಷೇತ್ರಕ್ಕೆ ಅವಕಾಶ ಮಾಡಿಕೊಡುತ್ತಿರುವುದರಿಂದ ಎಪಿಎಂಸಿ ವ್ಯವಸ್ಥೆ ವ್ಯರ್ಥವಾಗಿ ಅಪ್ರಸ್ತುತ ಎನಿಸಿಕೊಳ್ಳುತ್ತದೆ.

ಹಿಂದೆ ಕೃಷಿ ಭೂಮಿಯನ್ನು ಗುತ್ತಿಗೆಗೆ ತೆಗೆದುಕೊಳ್ಳಲು ಕಾನೂನಿನಲ್ಲಿ ಅವಕಾಶ ಇರಲಿಲ್ಲ. ಈಗ ಅವಕಾಶ ಮಾಡಿಕೊಡಲಾಗಿದೆ. ತೋಟದಿಂದ ನೇರ ಮಾಲ್‌ಗಳಿಗೆ ಕೃಷಿ ಉತ್ಪನ್ನಗಳು ಬರುವ ವ್ಯವಸ್ಥೆಯಾಗಿದೆ.

ಕೃಷಿ ಕ್ಷೇತ್ರದಲ್ಲಿ ಬಡರೈತರ ಸಂಖ್ಯೆ ಹೆಚ್ಚಾಗುತ್ತಿದೆ. ಕೃಷಿ ಹೂಡಿಕೆ ದುಬಾರಿಯಾಗಿದೆ. ನಿಗದಿತ ಮಾರುಕಟ್ಟೆ ಇಲ್ಲವಾಗಿದೆ. ಇದರಿಂದಾಗಿ ಸಣ್ಣ ರೈತರು, ಬಡ ರೈತರು ತಮ್ಮ ತುಂಡು ಭೂಮಿಯನ್ನು ಶ್ರೀಮಂತರ ಕೈಗೆ ಒಪ್ಪಿಸಬೇಕಾದ ದುರಂತ ಸ್ಥಿತಿ ಬಂದಿದೆ. ಅಂದರೆ ಸಣ್ಣ ಮತ್ತು ಮಧ್ಯಮ ರೈತರಿಗೆ ಎಲ್ಲ ರೀತಿಯ ನೆರವು ನೀಡಿ ಕೃಷಿ ಅಭಿವೃದ್ಧಿ ಪಡಿಸುವ ಬದಲಿಗೆ ಕೃಷಿಯನ್ನೇ ಕಂಪನೀಕರಣ ಮಾಡಲು ಸರಕಾರ ಹೊರಟಿದೆ. ಬಹುತೇಕ ರಾಜ್ಯ ಸರಕಾರಗಳು ಸಹ ಇದೇ ಹಾದಿ ಹಿಡಿದಿವೆ.

ದೇವರಾಜ ಅರಸು ಅವರು ತಂದ ಭೂಸುಧಾರಣಾ ಕಾಯ್ದೆಯಲ್ಲಿ ಗೇಣಿ ಪದ್ಧತಿಯನ್ನು ರದ್ದುಪಡಿಸಲಾಗಿದೆ.

ಕಾನೂನು ದೃಷ್ಟಿಯಿಂದ ನೋಡಿದಲ್ಲಿ ರಾಜ್ಯದಲ್ಲಿ ಗೇಣಿ ಪದ್ಧತಿ ಇಲ್ಲ.

ಆದರೆ ಎಡರಂಗ ಸರಕಾರ ಬಂದಾಗ ಪಶ್ಚಿಮ ಬಂಗಾಳದಲ್ಲಿ ಗೇಣಿದಾರರನ್ನು ಗುರುತಿಸಿ ಗೇಣಿ ಹಕ್ಕನ್ನು ವಂಶಪಾರಂಪರ್ಯವಾಗಿ ಪಡೆಯುವಂತೆ ಕಾನೂನು ತರಲಾಯಿತು. ಇತ್ತೀಚೆಗೆ ರೈತ ಚಳುವಳಿಯ ಒತ್ತಾಯದಿಂದ ಆಂಧ್ರಪ್ರದೇಶದಲ್ಲಿಯೂ ಗೇಣಿ ಹಕ್ಕನ್ನು ನೀಡುವ ಕಾನೂನು ತಿದ್ದುಪಡಿ ತರಲಾಗಿದೆ. ಕರ್ನಾಟಕದಲ್ಲಿ ಹಾಗೂ ದೇಶದಲ್ಲಿಯೂ ಬೇರೆ ಬೇರೆ ತರಹದ ಗೇಣಿ ಪದ್ಧತಿಗಳಿವೆ. ಅದನ್ನು ಗುರುತಿಸಬೇಕು.

ಭೂಮಿಯ ಒಡೆತನದ ಪಹಣಿ ಹಕ್ಕನ್ನು ರೈತರಿಗೆ ಉಳಿಸಿ 'ಭೂಮಿಯ ಸ್ವಾಧೀನ'ದ ಪ್ರಶ್ನೆಯಲ್ಲಿ ಗೇಣಿದಾರರ ಹೆಸರನ್ನು ದಾಖಲಿಸಬೇಕು. ಅಂದರೆ ಗೇಣಿ ಇರುವುದು ವಾಸ್ತವ ಎಂದು ಒಪ್ಪಿಕೊಳ್ಳಬೇಕು.

ಹೀಗಾದಲ್ಲಿ ರೈತರಿಗೆ ಗೇಣಿ ಹಕ್ಕು ದೊರೆಯುತ್ತದೆ. ಬ್ಯಾಂಕ್ ಸಾಲ, ಬೆಳೆ ನಷ್ಟವಾದಾಗ ಪರಿಹಾರ ಇತ್ಯಾದಿಗಳನ್ನು ಪಡೆದುಕೊಳ್ಳಲು ಗೇಣಿದಾರರಿಗೂ ಹಕ್ಕು ದೊರೆಯುತ್ತದೆ. ಪಶ್ಚಿಮ ಬಂಗಾಳದಲ್ಲಿ ಭೂಸುಧಾರಣೆ ತರುವ ಮೊದಲು ಗೇಣಿದಾರರ ನೋಂದಣಿಯನ್ನು ನಡೆಸಲಾಯಿತು. ನಂತರ ಭೂಸುಧಾರಣೆ ಜಾರಿಗೆ ತರಲಾಯಿತು. ಆದರೆ ಕರ್ನಾಟಕದಲ್ಲಿ ಗೇಣಿದಾರರನ್ನು ದಾಖಲಿಸದೇ ಹೋದದ್ದರಿಂದ ಭೂಮಾಲಕರು ಸರಿ ಸುಮಾರು ಶೇ. 80 ರಷ್ಟು ಬಡ ಗೇಣಿದಾರರನ್ನು ಒಕ್ಕಲೆಬ್ಬಿಸಿ ಭೂಮಿಯ ಮೇಲಿನ ಹಿಡಿತವನ್ನು ಭದ್ರ ಪಡಿಸಿಕೊಂಡರು. ಈಗಲಾದರೂ ನಿಜಕ್ಕೂ ವ್ಯವಸಾಯ ಮಾಡುವ ಗೇಣಿದಾರರನ್ನು ದಾಖಲಿಸುವ ಕೆಲಸ ಆಗಬೇಕು. ಈ ಸಂಬಂಧ ಇತ್ತೀಚೆಗೆ ಆಂಧ್ರಪ್ರದೇಶದಲ್ಲಿ ನಡೆದ ಗೇಣಿ ಹೋರಾಟದ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಮತ್ತು ಇತರ ಕಡೆಗಳಲ್ಲೂ ಚಳುವಳಿ ನಡೆಸಬೇಕಾದ ಅಗತ್ಯವಿದೆ.

**● ಕೇಂದ್ರ ಸರಕಾರ ನಿಗದಿ ಮಾಡಿರುವ ಬೆಂಬಲ ಬೆಲೆಗಿಂತ ಹೆಚ್ಚಿನ ದರವನ್ನು ಬೆಂಬಲ ಬೆಲೆಯಾಗಿ ನಿಗದಿ ಮಾಡಬಾರದು ಎಂದು ರಾಜ್ಯಗಳ ಮೇಲೆ ಕೇಂದ್ರ ಯಾಕೆ ಒತ್ತಡ ಹಾಕುತ್ತಿದೆ.? ಈ ಸಂಬಂಧ ರಾಜ್ಯ ಸರಕಾರದ ನಿಲುವು ಹಾಗೂ ರೈತರ ಮೇಲಿನ ಪರಿಣಾಮವೇನು?**

ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ಪತ್ರ ಬರೆದು ಕೃಷಿ ಉತ್ಪನ್ನಗಳಿಗೆ ಸಿಎಸಿಪಿ ನಿಗದಿ ಮಾಡಿದ್ದಕ್ಕಿಂತ ಹೆಚ್ಚು ದರವನ್ನು ನೀಡಬಾರದು ಎಂದು ಒತ್ತಾಯ ಮಾಡಿದೆ. "ಮಾರುಕಟ್ಟೆಯನ್ನು ನಾಶ ಮಾಡುತ್ತದೆ.. ಖಾಸಗೀ ಖರೀದಿದಾರರು ಹೊರ ಹೋಗುತ್ತಾರೆ.." ಎಂಬ ಕಾರಣಗಳನ್ನು ಕೇಂದ್ರ ಸರಕಾರ ಹೇಳುತ್ತಿದೆ.

ಇದಲ್ಲದೇ "ಕನಿಷ್ಟ ಬೆಂಬಲ ಬೆಲೆ ಆಧಾರದಲ್ಲಿ ಪಡಿತರ ವ್ಯವಸ್ಥೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಖರೀದಿ ಮಾಡಿ. ಅದಕ್ಕಿಂತ ಹೆಚ್ಚು ಖರೀದಿ ಮಾಡಿದರೆ ಅದು ರಾಜ್ಯ ಸರಕಾರಗಳ ಹೊಣೆ." ಎಂದೂ "ರಾಜ್ಯ ಸರಕಾರವು ಬೆಂಬಲ ಬೆಲೆಯಲ್ಲಿ ರೈತರಿಗೆ ಬೋನಸ್ ಕೊಟ್ಟರೆ ಎಫ್‌ಸಿಐ ಅಂತಹ ಕಡೆ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡುವುದಿಲ್ಲ" ಎಂದೂ ಬೆದರಿಸಲಾಗುತ್ತಿದೆ.

ದೇಶ ವಿಶಾಲವಾದದ್ದು, ಪಂಜಾಬ್ ಕರ್ನಾಟಕ ಎರಡೂ ಒಂದೇ ಅಲ್ಲ. ಇಡೀ ದೇಶಕ್ಕೆ ಒಂದೇ ದರ ಎಂಬುವುದು ಆಗುವುದಿಲ್ಲ. "ರಾಜ್ಯ ಸರಕಾರ ಬೋನಸ್ ನೀಡಿದರೆ ಕೃಷಿ ಉತ್ಪನ್ನಗಳನ್ನು ಗೋದಾಮುಗಳಲ್ಲಿ ಇರಿಸಲು ಅವಕಾಶ ನೀಡುವುದಿಲ್ಲ. ಹಣಕಾಸು ಹೊಣೆಯನ್ನು ರಾಜ್ಯವೇ ಹೊರಬೇಕು." ಎಂದೂ "ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ನೀಡುವ ವಿವಿಧ ಅನುದಾನಗಳನ್ನು ಕಡಿತ ಮಾಡಲಾಗುವುದು." ಎಂದು ಬೆದರಿಕೆ ಹಾಕಲಾಗುತ್ತಿದೆ.

ಕೃಷಿಯ ಕಂಪನೀಕರಣಕ್ಕೆ ಪೂರಕವಾಗಿ ಕೃಷಿ ಮಾರುಕಟ್ಟೆಯಲ್ಲಿ ಖಾಸಗಿ ಬಂಡವಾಳದ ಹುಚ್ಚು ಹರಿದಾಟಕ್ಕೆ ಅವಕಾಶ ಮಾಡಿಕೊಡಬೇಕೆಂಬ ಉದ್ದೇಶದಿಂದ ರೈತ ವಿರೋಧಿಯಾದ ನೀತಿಯನ್ನು ಜಾರಿಗೆ ತರಲಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ರೈತ ಚಳುವಳಿಗಳಲ್ಲದೇ ರಾಜ್ಯ ಸರಕಾರಗಳೂ ರಾಜಕೀಯ ಹೋರಾಟಕ್ಕೆ ಮುಂದಾಗಬೇಕು. ಹಿಂದೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿಗಳಾಗಿ ಜ್ಯೋತಿಬಸು, ಕೇರಳ, ತ್ರಿಪುರದ ಮುಖ್ಯಮಂತ್ರಿಗಳು, ಆಂಧ್ರದ ಮುಖ್ಯಮಂತ್ರಿಗಳಾಗಿ ಎನ್.ಟಿ. ರಾಮರಾವ್, ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಫಾರುಕ್ ಅಬ್ದುಲ್ಲಾ ಮುಂತಾದವರು ಮುಖ್ಯಮಂತ್ರಿಗಳ ಸಭೆಗಳಲ್ಲಿ ಇಂತಹ ನೀತಿಗಳ ವಿರುದ್ಧ, ರಾಜ್ಯ ಸರಕಾರಗಳಿಗೆ ಬೆಂಬಲ ಬೆಲೆ ನಿಗದಿ ಅಧಿಕಾರ ಬೇಕೆಂದು ದೃಢವಾಗಿ ಒಗ್ಗಟ್ಟಿನಿಂದ ಹೋರಾಟ ನಡೆಸುತ್ತಿದ್ದರು. ಆದರೆ ದುರದೃಷ್ಟವಶಾತ್ ಇಂತಹ ಹೋರಾಗಳು ಇತ್ತೀಚೆಗೆ ನಡೆಯುತ್ತಿಲ್ಲ. ವಿವಿಧ ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿರುವ ಬಹುತೇಕ ಪ್ರಾದೇಶಿಕ ಪಕ್ಷಗಳು ಸಹ ಖಾಸಗಿ ಮಾರುಕಟ್ಟೆ ನೀತಿಗಳನ್ನೇ ಒಪ್ಪಿ ಜಾರಿ ಮಾಡುತ್ತಿರುವುದೇ ಇದಕ್ಕೆ ಮುಖ್ಯ ಕಾರಣ. ಈ ಪರಿಸ್ಥಿತಿ ಬದಲಾಗಬೇಕು. ರಾಜ್ಯ ಸರಕಾರಗಳ ಕಡೆಯಿಂದ ಈಗಲೂ ಅಂತಹ ಹೋರಾಟ ಅಗತ್ಯವಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಇಂತಹ ಸನ್ನಿವೇಶದಲ್ಲಿ ಜನಚಳುವಳಿಯೇ ಇದಕ್ಕೆ ಪರಿಹಾರ. ಈ ದೆಸೆಯಲ್ಲಿ ಪ್ರಬಲ ಚಳುವಳಿ ಕಟ್ಟಬೇಕಾದ ತುರ್ತು ಅವಶ್ಯಕತೆ ಇದೆ. ■

### ನಮ್ಮ ಚುರು-ಟ್ವೀಟ್

ಅರ್ಣಬ್ ಮೋದಿಯವರನ್ನು ರಾಜನ್ ಬಗ್ಗೆ ಕೇಳಬಹುದೇ? ಎನ್‌ಎಸ್‌ಜಿ ಬಗ್ಗೆ? ಬಹುಶಃ ಕೇಳಬಹುದು. ಸ್ವಾಮಿ? ಕೇಳಬಹುದೇನೋ. ದಾದ್ರಿ, ಕೈರಾನ ಮತ್ತು ಗುಲ್ಬರ್ಗ್ ಬಗ್ಗೆ? ಕೇಳಲಿಕ್ಕಿಲ್ಲ ಅನಿಸುತ್ತದೆ.

***–ರೋಹನ್ ವೆಂಕಟ್@RohanV***

(ಜೂನ್ 27ರಂದು ಸಂಜೆ 'ಟೈಮ್ಸ್ ನೌ' ಮುಖ್ಯಸಂಪಾದಕ ಅರ್ಣಬ್ ಗೋಸ್ವಾಮಿ ಪ್ರಧಾನ ಮಂತ್ರಿಗಳ 'ಎಕ್ಸ್‌ಕ್ಲೂಸಿವ್ ಸಂದರ್ಶನ ನಡೆಸುತ್ತಾರೆ ಎಂಬ ಪ್ರಕಟಣೆಗೆ ಪ್ರತಿಕ್ರಿಯಿಸುತ್ತ)







## ಮೆಡಿಕಲ್ ಮತ್ತು ಡೆಂಟಲ್ ಕೋರ್ಸುಗಳಿಗೆ
# ಶುಲ್ಕ ಏರಿಕೆಯ ವಿರುದ್ಧ ಎಸ್‌ಎಫ್‌ಐ ಪ್ರತಿಭಟನೆ

ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ನ ಖಾಸಗಿ ಶಿಕ್ಷಣ ಸಂಸ್ಥೆಗೆ ಹಂಚಲಾಗುವ ಸರಕಾರಿ ಕೋಟಾದ ಸೀಟುಗಳಿಗೆ ರಾಜ್ಯ ಸರ್ಕಾರ ಶೇ.30ರಷ್ಟು ಹಣ ಹೆಚ್ಚಳ ಮಾಡುವ ಮೂಲಕ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣದ ಹೊರೆಯಾಗಿದೆ. ಶೇ.30ರಷ್ಟು ಶುಲ್ಕ ಹೆಚ್ಚಳ ಮಾಡುವ ಮೂಲಕ ಬಡ ವಿದ್ಯಾರ್ಥಿಗಳ ಕನಸನ್ನು ನುಚ್ಚು ನೂರು ಮಾಡಲು ಹೊರಟಿದ್ದು, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸುವುದಕ್ಕಾಗಿ "ಕೇಂದ್ರೀಯ ಶಾಸನ" ಜಾರಿಗೆ ತರಲು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಜ್ಯ ಸಮಿತಿಯು ರಾಜ್ಯದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿತ್ತು. ಈ ಕರೆಯಂತೆ ಬೆಂಗಳೂರಿನಲ್ಲಿ ಸಿಇಟಿ ಸೆಲ್ ಮುಂದೆ ಮತ್ತು ರಾಜ್ಯ ದಹಲವೆಡೆಗಳಲ್ಲಿ ವಿದ್ಯಾರ್ಥಿಗಳು ರಾಜ್ಯ ಸರಕಾರದ ವಿದ್ಯಾರ್ಥಿ–ವಿರೋಧಿ ಧೋರಣೆಯ ವಿರುದ್ಧ ಪ್ರತಿಭಟನೆ ನಡೆಸಿದರು.

**ರಾಯಚೂರು:**

ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಜೂನ್ 24ರಂದು ಪ್ರತಿಭಟನೆ ನಡೆಸಿದ ಎಸ್.ಎಫ್.ಐ. ಕಾರ್ಯಕರ್ತರು ಸರ್ಕಾರದ ಶುಲ್ಕ ಏರಿಕೆ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ತಾಲ್ಲೂಕು ಅಧ್ಯಕ್ಷ ಎಂ.ಡಿ.ಮುಸ್ತಾಫ್, ಮುಖಂಡರಾದ ರಮೇಶ್ ವಿರಾಪೂರ, ಬಸವರಾಜ್, ಶಿವಕುಮಾರ್, ಮಾಳಪ್ಪ, ಹನುಮಂತ್, ಬೂದಿ ಬಸವರಾಜ್, ರಮೇಶ್, ಸುನೀಲ್, ಸೇರಿದಂತೆ ಹಲವು ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಹಾವೇರಿ:**

ಜೂನ್ 25ರಂದು ಪ್ರತಿಭಟನೆ ನಡೆಸಿದ ಎಸ್.ಎಫ್.ಐ. ಕಾರ್ಯಕರ್ತರು ಸರ್ಕಾರದ ಘೋಷಣೆ ಕೂಗುತ್ತಾ ನಗರದ ಸರ್ಕಾರಿ ನೌಕರರ ಭವನದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆಯು ಜೆಪಿ ವೃತ್ತದ ಬಳಿ ಸಮಾವೇಶಗೊಂಡಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಗುರುರಾಜ್ ದೇಸಾಯಿ, ರಾಜ್ಯ ಉಪಾಧ್ಯಕ್ಷರಾದ ಬಸವರಾಜ್ ಪೂಜಾರ, ಜಿಲ್ಲಾಧ್ಯಕ್ಷರಾದ ರೇಣುಕಾ ಕಹಾರ, ಮಾತನಾಡಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ, ಶಶಿಧರ ನಾಯಕ್, ಜ್ಯೋತಿ ದೊಡ್ಮನಿ, ಪ್ರತಿಮಾ, ವಿನಾಯಕ ವೈ, ಪ್ರಭು ಮಳ್ಳಿಮಠ, ಬಸವರಾಜ ಬೋವಿ, ನೀಲಮ್ಮ ಬಿ.ಎಸ್., ಮಧು ಯು, ಬೀರಪ್ಪ ಲಮಾಣಿ, ಆಶಾ ಛಲವಾದಿ, ಕೃಷ್ಣ, ಮೆಹಬೂಬಅಲಿ, ಮಲ್ಲಪ್ಪ ನಾಗರೊಳ್ಳಿ, ಮುಂತಾದವರು ಭಾಗವಹಿಸಿದ್ದರು.

ಗಂಗಾವತಿಯಲ್ಲಿ ಎಸ್.ಎಫ್.ಐ. ಕಾರ್ಯಕರ್ತರು ಸರಕಾರದ ಪ್ರತಿಕೃತಿ ದಹನ ಮಾಡಿದರು ಹಾಗೂ




ಕೊಪ್ಪಳದಲ್ಲಿ ಪ್ರತಿಭಟನೆ ನಡೆಸಿದರು.

**ಬೆಂಗಳೂರು:**

ಜೂನ್ 27ರಂದು ಎಸ್.ಎಫ್.ಐ. ಕಾರ್ಯಕರ್ತರು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಂದೆ (ಸಿ.ಇ.ಟಿ ಸೆಲ್) ಪ್ರತಿಭಟನೆ ನಡೆಸಿದರು. ಪ್ರಾಧಿಕಾರದ ಆಡಳಿತಾಧಿಕಾರಿ ಮೂಲಕ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ರವರಿಗೆ ಈ ಕುರಿತು ಸಲ್ಲಿಸಿದ ಮನವಿಯನ್ನು ಸ್ವೀಕರಿಸಿದ ಆಡಳಿತಾಧಿಕಾರಿ ಗಂಗಾಧರಯ್ಯ ಶುಲ್ಕ ಇಳಿಸುವ ಕುರಿತು ಸರಕಾರಕ್ಕೆ ಪತ್ರ ಬರೆಯುವುದಾಗಿ ಭರವಸೆ ನೀಡಿದರು ಎಂದು ಎಸ್‌ಎಫ್‌ಐ ರಾಜ್ಯಸಮಿತಿ ಹೇಳಿಕೆ ತಿಳಿಸಿದೆ.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ಕಾಯ್ದೆ) ಹೆಸರಿನಲ್ಲಿ ಇಡೀ ವೃತ್ತಿ ಶಿಕ್ಷಣವನ್ನು ಕರ್ನಾಟಕ ರಾಜ್ಯ ಸರಕಾರ ಮಾರಾಟದ ಸರಕನ್ನಾಗಿಸಿದೆ. ಈ ಬಾರಿಯ ವೃತ್ತಿ ಶಿಕ್ಷಣ ಸೀಟುಗಳಿಗೆ ಇದೇ ನಿಯಮದ ಮೂಲಕ ಶುಲ್ಕ ಹೆಚ್ಚಳ ಮಾಡಿದೆ. ಯಾವುದೇ ಕಾರಣ–ಕ್ಕೂ 2006 ರ ವೃತ್ತಿ ಶಿಕ್ಷಣ ಕಾಯ್ದೆಯನ್ನು ಜಾರಿ ಮಾಡುವುದಿಲ್ಲವೆಂದು ಹೇಳುತ್ತಿದ್ದ ಸರಕಾರ, ಈಗ ಅದೇ ಕಾಯ್ದೆ ಅಡಿಯಲ್ಲಿ ಶುಲ್ಕಗಳನ್ನು ಹೆಚ್ಚಿಗೆ ಮಾಡಿ ಖಾಸಗಿ ಶಿಕ್ಷಣ ಸಂಸ್ಥೆಗಳ ಹಿತಾಸಕ್ತಿಯನ್ನು ಕಾಪಾಡಲು ಮುಂದಾಗಿದೆ. ಖಾಸಗೀ ವೃತ್ತಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿರುವ ಕೇಂದ್ರೀಯ ಶಾಸನವನ್ನು ಕೇಂದ್ರ ಸರ್ಕಾರ ಜಾರಿಯಾದರೆ ಮಾತ್ರ ರಾಜ್ಯದಲ್ಲಿ ಶುಲ್ಕದ ನಿಯಂತ್ರಣ ಸಾಧ್ಯ. ಹಾಗಾಗಿ ಕೇಂದ್ರ ಸರಕಾರ ಕೂಡಲೆ ಇಂತಹ ನಿರ್ಧಾರವನ್ನು ತೆಗೆದುಕೊಳ್ಳಬೇಕಿದೆ ಎಂದು ಆಗ್ರಹಿಸಿದರು.


ರಾಜ್ಯ ಎಸ್‌ಎಫ್‌ಐ ಅಧ್ಯಕ್ಷ ವಿ.ಅಂಬರೀಶ್ ಮಾತನಾಡಿ ಶಿಕ್ಷಣದಲ್ಲಿ ಅಕ್ರಮ ಧಂಧೆಗೆ ಕಡಿವಾಣ ಹಾಕಿ, ಬಡ–ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣ ದೊರೆಯುವಂತೆ ಮಾಡುವ ಬದಲಾಗಿ ಸರಕಾರ ಖಾಸಗೀಯವರ ತಾಳಕ್ಕೆ ತಕ್ಕಂತೆ ಕೈಜೋಡಿಸುತ್ತಿರುವುದು ಸರಕಾರವೇ ಈ ಶಿಕ್ಷಣ ಮಾರಲು ಕುಮ್ಮಕ್ಕು ನೀಡುತ್ತಿದೆ ಎಂದರು.

ಪ್ರತಿಭಟನೆಯಲ್ಲಿ ಎಸ್.ಎಫ್.ಐ ರಾಜ್ಯ ಉಪಾಧ್ಯಕ್ಷ ಬಸವರಾಜ್ ಪೂಜಾರ್, ಅಮರೇಶ್ ಕಡಗದ್, ಕೇಂದ್ರ ಸಮಿತಿ ಸದಸ್ಯೆ ರೇಣುಕಾ ಕಹಾರ, ಮುಖಂಡರಾದ ವೆಂಕಟೇಶ್. ಮೊನಿಶಾ, ಶಬ್ಬೀರ್, ನರಸಿಂಹ ಮೂರ್ತಿ, ಚಂದ್ರ ಶೇಖರ್ ಹನಮಂತ್ ದುರ್ಗದ್ ಸೇರಿದಂತೆ ಅನೇಕರಿದ್ದರು.

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ಮತ್ತು ಶುಲ್ಕ ನಿಗದಿ) ಕಾಯ್ದೆ 2006 ನ್ನು ತಿರಸ್ಕರಿಸಬೇಕು, ಶುಲ್ಕಗಳನ್ನು ತಕ್ಷಣ ಕಡಿತಗೊಳಿಸಿ ಬಡ ವಿದ್ಯಾರ್ಥಿಗಳ ಕೈಗೆಟುಕುವಂತೆ ನಿಗದಿಗೊಳಿಸಬೇಕು, ಸಿ.ಇ.ಟಿ ಮೂಲಕವೇ ಪ್ರವೇಶ ನಡೆಸಬೇಕು, ನ್ಯಾ. ಗುಂಜಾಳ, ನ್ಯಾ. ಜಗನಾಥ್ ವರದಿ ತಿರಸ್ಕರಿಸಬೇಕು, ಖಾಸಗೀ ವೃತ್ತಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿರುವ ಕೇಂದ್ರೀಯ ಶಾಸನವನ್ನು ಕೇಂದ್ರ ಸರ್ಕಾರ ಜಾರಿಗೆ ತರಬೇಕು, ವೃತ್ತಿ ಶಿಕ್ಷಣ ಸೀಟು ಹಂಚಿಕೆಯಲ್ಲಿ 75:25(ಸರಕಾರಿ:ಖಾಸಗೀ) ಅನುಪಾತ ಅನುಸರಿಸಬೇಕು,ಕಾಮೆಡ್–ಕೆ ಪರಿಕ್ಷೆಗಳನ್ನು ರದ್ದು ಪಡಿಸಬೇಕು, ಈಗಾಗಲೇ ಮಂಜೂರಾಗಿರುವ ಮತ್ತು ಹೊಸದಾಗಿ ಕೂಡ ಇಂಜಿನಿಯರಿಂಗ್, ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಬೇಕು ಎಂಬ ಬೇಡಿಕೆಗಳನ್ನು ಎಸ್‌ಎಫ್‌ಐ ಸರಕಾರದ ಮುಂದಿಟ್ಟಿದೆ.




**ಹೆಚ್.ಆರ್. ನವೀನ್‌ಕುಮಾರ್**




**JANASHAKTHI KANNADA VARA PATRIKE:** Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**